# ಅಧ್ಯಾಯ - 1

## ಪೀಠಿಕೆ

**ಶಾಂತಾ ಮಹಾಂತೋ ನಿವಸನ್ತಿ ಸನ್ತೋ**
**ವಸಂತವಲ್ಲೋಕಹಿತಂ ಚರನ್ತಃ ।**
**ತೀರ್ಣಾಃ ಸ್ವಯಂ ಭೀಮಭವಾರ್ಣವಂ**
**ಜನಾನಹೇತುನಾನ್ಯಾನಪಿ ತಾರಯನ್ತಃ ॥**

ಶಾಂತರೂ ಮಹಾತ್ಮರೂ ಆದ ಸತ್ಪುರುಷರು ವಸಂತಋತುವಿನಂತೆ ಲೋಕ ಹಿತವನ್ನು ಉಂಟುಮಾಡುತ್ತಾ ವಾಸಿಸುತ್ತಾರೆ. ಅವರು ತಾವೂ ಈ ಭಯಂಕರನಾದ ಭವ ಸಮುದ್ರವನ್ನು ದಾಟುವುದಲ್ಲದೆ, ಯಾವುದೇ ಕಾರಣವನ್ನೂ ಬಯಸದೆ ಉಳಿದ ಜನರನ್ನೂ ಕೂಡ ದಾಟಿಸುತ್ತಾರೆ. (ವಿ.ಚೂ. 39)

ಈ ಜಗತ್ತಿನಲ್ಲಿ ದಯಾಳುಗಳಾದ ಸತ್ಪುರುಷರು ತಮ್ಮ ವಿಶಿಷ್ಟವಾದ ಯೋಗ ದಾನದಿಂದ ಅತಿಶಯವಾದ ಲೋಕಹಿತವನ್ನು ಸಾಧಿಸಿರುತ್ತಾರೆ. ಅಂತಹ ಸತ್ಪುರುಷರ ಸಮಾಗಮವು ವಿಶೇಷವಾದ ಪುಣ್ಯದಿಂದ ಮಾತ್ರ ಪ್ರಾಪ್ತವಾಗತಕ್ಕದ್ದು. ಈ ರೀತಿ ತಮ್ಮ ಇಡೀಜೀವನವನ್ನು ಲೋಕಹಿತಕ್ಕಾಗಿ ಸಮರ್ಪಿಸಿದ ಕೆಲವೇ ಕೆಲವು ಮಹಾತ್ಮರುಗಳಲ್ಲಿ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳು ಅಗ್ರಗಣ್ಯರು. ಅವರು ತಮ್ಮ ವಿಶೇಷ ಬುದ್ಧಿಶಕ್ತಿಯಿಂದ, ವಿಚಾರ ವಿಮರ್ಶಕರ ಸಮಾಗಮದಿಂದ ಮತ್ತು ಸಾಧನೆಯ ಉತ್ಕರ್ಷದಿಂದ ಅದ್ವೈತಸಾರಸ್ವತಲೋಕವನ್ನು ಅತ್ಯಂತವಾಗಿ ಶ್ರೀಮಂತ ಗೊಳಿಸಿದರು. ಅವರ ಇಡೀ ಜೀವನವೇ ಅದ್ವೈತಕ್ಷೇತ್ರಕ್ಕೆ ವೈಶಿಷ್ಟ್ಯಪೂರ್ಣವಾದ ಯೋಗ ದಾನವೆಂಬುದರಲ್ಲಿ ಸಂಶಯವಿಲ್ಲ. ಇಂತಹ ಸಾಧಕರು ವಿರಳಾತಿವಿರಳರೆಂಬುದು ಸತ್ಯ ಸಂಗತಿ. ಅವರಲ್ಲಿ ಭಾರತೀಯ ಸಂಸ್ಕೃತಿಯ ಮೂಲಭೂತವಾದ ಪ್ರೇರಣೆಯಿಂದ ಬ್ರಹ್ಮವಿದ್ಯೆಯು ಪೂರ್ಣರೂಪದಲ್ಲಿ ಆವಿರ್ಭೂತವಾಗಿತ್ತು. ದೃಢನಿರ್ಧಾರ, ಸತತ ಪರಿಶ್ರಮ, ಬುದ್ಧಿಶಕ್ತಿ ಇವು ಒಂದೇ ಕಡೆಯಲ್ಲಿ ಕೂಡುವುದು ದುರ್ಲಭ. ಅಂತಹ ಪರಿಕರಗಳಿಂದ ಕೂಡಿದ ಅವರು ಅಧ್ಯಾತ್ಮಕ್ಷೇತ್ರದಲ್ಲಿ ಧ್ರುವತಾರೆಯೆನಿಸಿದರು. ಅವರದು ಕೇವಲ ಪರೋಪದೇಶಪಾಂಡಿತ್ಯವಾಗಿರಲಿಲ್ಲ, ತಾವು ಸಾಧಿಸಿದ ಮತ್ತು ಅನುಭವಿಸಿದ ಆನಂದವನ್ನು ಅವರು ಉಳಿದವರಿಗೂ ಹಂಚಲು ಪ್ರಯತ್ನಶೀಲರಾದರು ಮತ್ತು ಜಯಶೀಲರಾದರು.

ಶ್ರೀಗಳವರ ಕಾರ್ಯಕ್ಷೇತ್ರದಲ್ಲಿ ಶ್ರೀರಾಮನ ಆದರ್ಶವನ್ನು ಕಾಣಬಹುದು. ಶ್ರೀರಾಮನೇ ಅವರ ಆರಾಧ್ಯದೈವ. ಲಕ್ಷ್ಮಣದ್ವಿತೀಯನಾದ ಶ್ರೀರಾಮನು ಧರ್ಮಕ್ಕಾಗಿ ಕಷ್ಟಗಳನ್ನು ಸಹಿಸಿ, ಸೀತಾಪಹರಣದಂತಹ ಕಷ್ಟವನ್ನು ಧೈರ್ಯದಿಂದ ಎದುರಿಸಿ, ಸ್ವಪ್ರಯತ್ನದಿಂದ ಅಸಾಮಾನ್ಯರುಗಳಾದ ರಾವಣಾದಿಗಳನ್ನು ಕೊಂದು, ಅಸುಲಭವಾದ ಕಾರ್ಯವನ್ನು ಸಾಧಿಸಿದಂತೆ ಶ್ರೀಗಳವರು ಅನಿತರಸಾಧಾರಣವಾದ ಕಾರ್ಯವನ್ನು ಕೈಗೊಂಡು ಸಾಧಿಸಿದರು. ಯಾವುದೇ ಲೌಕಿಕಸಾಧನಗಳ ಮತ್ತು ಅನುಕೂಲತೆಗಳ ಬೆಂಬಲ ಅವರಿಗೆ ಇರಲಿಲ್ಲ, ಆದರೂ **'ಶ್ರದ್ಧಾವಾನ್ ಲಭತೇ ಜ್ಞಾನಂ'** ಎಂಬ ಉಕ್ತಿಯ ಸಾಕಾರ ಮೂರ್ತಿಯೇ ಅವರಾಗಿದ್ದರೆಂಬುದರಲ್ಲಿ ಅತಿಶಯೋಕ್ತಿಯೇನೂ ಇಲ್ಲ, ಶಂಕರಭಗವತ್ಪಾದರು ಹೇಗೆ ಅಸಾಧಾರಣವಾದ ಲೋಕಕಲ್ಯಾಣವನ್ನು ಸಾಧಿಸಿ ದರೋ, ಹಾಗೆಯೇ ಶಂಕರರ ಕಟ್ಟಾ ಅನುಯಾಯಿಗಳಾದ ಶ್ರೀಗಳವರೂ ಅಂತಹುದೇ ಲೋಕೋತ್ತರವಾದ ಕಾರ್ಯಗಳನ್ನು ಸಾಧಿಸಿದರು. ಆದ್ದರಿಂದಲೇ ಅವರು **'ಅಭಿನವಶಂಕರ'** ಎಂಬ ಪ್ರಶಂಸೆಗೆ ಅರ್ಹರಾಗಿರುತ್ತಾರೆ.

ಭಗವದ್ಗೀತೆಯಲ್ಲಿ,

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।**
**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥**

'ಯಾವಾಗ ಧರ್ಮವು ನಷ್ಟವಾಗಿ, ಅಧರ್ಮವು ವೃದ್ಧಿಯಾಗುತ್ತದೆಯೋ ಆಗ ನಾನು ಮತ್ತೆ ಮತ್ತೆ ಹುಟ್ಟಿಬರುತ್ತೇನೆ' ಎಂದು ಭಗವಂತನು ಹೇಳಿರುವಂತೆ, ಭಗವತ್ಪಾದರ ಉಪದೇಶಗಳ ಪುನರುತ್ಥಾನಕ್ಕಾಗಿ ಶ್ರೀಗಳವರ ಅವತಾರವಾಯಿತು. ಜೀವನ ಪರ್ಯಂತ ಶಾಂಕರವೇದಾಂತಕ್ಕಾಗಿ ಸಾಧ್ಯವಾದ ಎಲ್ಲ ಮಾರ್ಗಗಳೂ ಶ್ರೀಗಳವರಿಂದ ಅನುಸರಿಸಲ್ಪಟ್ಟಿತು. ಗ್ರಂಥರಚನೆ, ವೇದಾಂತಬೋಧನೆ, ಸಂಶೋಧನೆ, ಗ್ರಂಥಗಳ ಪ್ರಕಟಣೆ, ಪತ್ರಿಕೆಯ ಪ್ರಕಟಣೆ, ಕಾರ್ಯಾಲಯದ ಸ್ಥಾಪನೆ ಹೀಗೆ ಎಲ್ಲ ಮಾರ್ಗ ಗಳಿಂದಲೂ ಅವರು ಶಾಂಕರವೇದಾಂತಕ್ಕೆ ಹೊಸರೂಪವನ್ನು ಕೊಟ್ಟರು.

ಕೃಷ್ಣದ್ವೈಪಾಯನರು ಅಖಂಡವಾದ ವೇದರಾಶಿಯನ್ನು ಲೋಕೋಪಕಾರಕ್ಕಾಗಿ ವಿಭಾಗಮಾಡಿ ವೇದವ್ಯಾಸರೆಂದು ಪ್ರಥಿತರಾದರು. ಅದೇ ವೇದಸಾರವನ್ನು ಗೀತೆಯ ರೂಪದಲ್ಲಿ ಸ್ಮೃತಿಗ್ರಂಥವಾಗಿ ಪರಿವರ್ತಿಸಿದರು. ಮತ್ತೆ ಮಹಾಭಾರತದ ಕಥೆಯನ್ನು ಆಧಾರವಾಗಿಟ್ಟುಕೊಂಡು ವೇದಾಂತಬೋಧನೆ ಮಾಡಿದರು. ಅದನ್ನು ಮತ್ತೂ

ಸರಳಗೊಳಿಸಿ, ಪುರಾಣಗಳ ರೂಪದಲ್ಲಿ ಬೋಧಿಸಿದರು. ಈ ಸಂದರ್ಭದಲ್ಲಿ, ಈ ರೀತಿಯಾದ ಅಗಾಧವಾದ ವಾಙ್ಮಯವನ್ನು ಬರೆಯಲು ಅವರಿಗೆ ಮಹಾಗಣಪತಿಯು ಲಿಪಿಕಾರನಾಗಿ ಸಹಾಯಮಾಡಿದನೆಂದು ತಿಳಿದುಬರುತ್ತದೆ. ಪೂಜ್ಯಪಾದರಿಂದ ರಚಿತ ವಾಗಿರುವ ಶಾಂಕರ ಸಿದ್ಧಾಂತಗ್ರಂಥಗಳ ಅಗಾಧತೆಯನ್ನು ಕಂಡು ಭಗವಂತರಾದ ವೇದವ್ಯಾಸರೂ ಚಕಿತರಾಗಬಹುದು. ಇಂತಹ ಮಾತು ಉತ್ಪ್ರೇಕ್ಷೆಯೆನಿಸಿದರೂ, ಸವ್ಯಸಾಚಿಯಾದ ಸ್ವಾಮೀಜಿಯವರು ತಾವೇ ಸ್ವತಃ ಲಿಪಿಕಾರ, ಪರಿಶೋಧಕ, ಮುದ್ರಕ, ಪ್ರಚಾರಕ, ವಿಕ್ರೇತೃ ಹೀಗೆ ಎಲ್ಲವೂ ಆಗಿ ಅಸಾಧಾರಣವಾದ ಕಾರ್ಯವನ್ನು ಸಾಧಿಸಿ ರುತ್ತಾರೆ. ಆದ್ದರಿಂದಲೇ ಕೇಂದ್ರ ಮತ್ತು ರಾಜ್ಯಸರಕಾರಗಳಿಂದ ಹಲವು ಪ್ರಶಸ್ತಿಗಳಿಂದ ವಿಭೂಷಿತರಾಗಿರುವ ಪಂಡಿತವರೇಣ್ಯರೂ ಕೂಡ ಸ್ವಾಮೀಜಿಯವರನ್ನು ಮುಕ್ತಕಂಠ ದಿಂದ ಪ್ರಶಂಸಿರುತ್ತಾರೆ. ಕಾಂಚೀಪುರದ ಕಾಮಕೋಟಿಪೀಠಾಧೀಶ್ವರರಾಗಿದ್ದ ಶ್ರೀಚಂದ್ರಶೇಖರೇಂದ್ರಸರಸ್ವತೀಸ್ವಾಮಿಗಳು ನಮ್ಮ ಪೂಜ್ಯಪಾದರನ್ನು,

**ಆಸುಪ್ತೇರಾಮೃತೇಃ ಕಾಲಂ ನಯೇದ್ವೇದಾಂತಚಿಂತಯಾ**

ಎಂಬ ಉಕ್ತಿಯ ಸಾಕಾರಮೂರ್ತಿಗಳೆಂದು ಬಣ್ಣಿಸಿರುತ್ತಾರೆ. ಇಂತಹ ಮಹಾನು ಭಾವರನ್ನು ಪರಿಚಯಿಸುವ ಪೇಶಲ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

## ಪೂಜ್ಯಪಾದರ ಜನ್ಮಗ್ರಾಮದ ಸ್ಥಾನನಿರ್ದೇಶನ

ಭಾರತದೇಶವು ಕರ್ಮಭೂಮಿಯೂ ಅಹುದು; ಪುಣ್ಯಭೂಮಿಯೂ ಹೌದು. **'ಭಾ'** ಎಂಬ ಪದಕ್ಕೆ **'ತೇಜಸ್ಸು'** ಎಂದು ಅರ್ಥವಾಗುತ್ತದೆ. **'ರತ'** ಎಂದರೆ ಆಸಕ್ತ ವೆಂದಾಗುತ್ತದೆ. ದೀಪ್ತಿಮತ್ತ್ಯಾದಿಗುಣಗಳಿಂದ ಕೂಡಿದ ಮನುಜನು ಭರತಭೂಮಿ ಯಲ್ಲಿ ಜನಿಸಿ ಜನ್ಮಸಾರ್ಥಕ್ಯವನ್ನು ಪಡೆದುಕೊಳ್ಳುತ್ತಾನೆ.

ವಿಷ್ಣುಪುರಾಣದಲ್ಲಿ,

**ತದೇಷಾ ಕರ್ಮಭೂರನ್ಯಾ ಭೋಗಭೂಮಯಃ'**

ಎಂದು ಹೇಳುತ್ತಾ , ಈ ನಾಡಿನಲ್ಲಿ ಜನ್ಮಸಹಸ್ರಪುಣ್ಯಸಂಚಯದಿಂದ ಒಮ್ಮೆ ನರನು ಜನ್ಮ ವನ್ನು ಪಡೆಯುತ್ತಾನೆಂದು ಪ್ರಶಂಸೆಮಾಡಿದೆ. ಹಿಮಾಲಯವೆಂಬ ಕಿರೀಟದಿಂದ ಶೋಭಿತ ಳಾದ, ಸಾಗರವೆಂಬ ಪಾದೋದಕದಿಂದ ಪವಿತ್ರಳಾದ ಭಾರತಮಾತೆಯ ಪುತ್ರಿಯ ರೂಪದಿಂದ ಈ ಕರ್ನಾಟಕ ಭೂಮಿಯು ವಿರಾಜಿಸುತ್ತಿದೆ. ಗೋದಾವರೀ –ಕಾವೇರಿ ನದಿಗಳ ಮಧ್ಯಂಗತವಾದ, ಕಮನೀಯವಾದ ಶೋಭೆಯುಳ್ಳ, ಕರ್ನಾಟಕ ಪ್ರದೇಶವು

ಜನರ ಕಣ್ಮನಗಳಿಗೂ ಆನಂದವನ್ನು ತರಬಲ್ಲದು. ಸುಜನರಿಂದ ಶ್ರೀಮಂತವಾದ, ಚಿತ್ರವಿಚಿತ್ರವಾದ ಸಸ್ಯರಾಜಿಗಳಿಂದ ಮನೋಹರವಾಗಿರುವ, ಅನೇಕ ಪವಿತ್ರವಾದ ತೀರ್ಥಕ್ಷೇತ್ರಗಳಿಂದ ಶೋಭಿಸುವ, ಮುಗಿಲುಮುಟ್ಟುವ ಗಿರಿಗಳಿಂದ ಯುಕ್ತವಾಗಿರುವ, ಸುಂದರವಾದ ಕಾನನಗಳಿಂದ ಕಂಗೊಳಿಸುವ ನಾಡು ನಮ್ಮದು. ಇದರ ಸೌಂದರ್ಯದಿಂದ ಆಕರ್ಷಿತನಾದ ಶ್ರೀಹರಿಯು ವೈಕುಂಠವನ್ನು ತೊರೆದು ಬಂದು, ಯದುಶೈಲದಲ್ಲಿ ವಾಸಿಸುತ್ತಿದ್ದಾನೆ. ಕೈಲಾಸದ ಕಠಿನಶಿಲೆಗಳನ್ನು ಹತ್ತುವಾಗ ಪಾರ್ವತಿಯ ಕೋಮಲ ಪಾದಗಳು ಗಾಯಗೊಂಡುದನ್ನು ಕಂಡು, ಅದನ್ನು ಸಹಿಸದ ಶಿವನು, ತನ್ನ ಅತಿಪ್ರಿಯವಾದ ಕೈಲಾಸವನ್ನು ತ್ಯಜಿಸಿ, ಉಮಾಸಹಿತನಾಗಿ, ಕಪಿಲಾ ನದೀತೀರದಲ್ಲಿರುವ ಗರಳಪುರೀ ಕ್ಷೇತ್ರದಲ್ಲಿ ವಾಸಮಾಡುತ್ತಿದ್ದಾನೆ. ಕರ್ನಾಟಕದ ಜನರ ಹೃದಯದಲ್ಲಿ ವಿಷಮತೆಯಾಗಲಿ, ಮಾತಿನಲ್ಲಿ ಅನನ್ಯತೆಯಾಗಲಿ, ಹೃದಯದಲ್ಲಿ ಅಪಹ್ನುತಿಯಾಗಲಿ ಕಿಂಚಿತ್ತೂ ಕಂಡು ಬರುವುದಿಲ್ಲ, ಇವು ಕಾವ್ಯಗಳಲ್ಲಿ ಗುಣಗಳಾಗಿ ವಿರಾಜಿಸುತ್ತಿವೆ.

ಮೇಲೆ ಹೇಳಿರುವ ಕವಿಪ್ರಶಂಸೆಯು ಬರಿಯ ಉತ್ಪ್ರೇಕ್ಷೆಯಲ್ಲ, ಈ ನಾಡಿನ ಜನರು ಗುಣಜ್ಞರೂ, ಶಿವಂಕರವಾದ ಆಚಾರಪರರೂ ಆಗಿರುತ್ತಾರೆಂಬುದು ಸತ್ಯ ಸಂಗತಿ. ಆದ್ದರಿಂದಲೇ ಆಧ್ಯಾತ್ಮಿಕವಾದ ಉನ್ನತಿಯನ್ನು ಬಯಸುವ ಸಾಧಕರು, ಇಲ್ಲಿ ಬಂದು ತಮ್ಮ ತಮ್ಮ ದಾರ್ಶನಿಕ ಸಿದ್ಧಾಂತಗಳನ್ನು ಸ್ಥಾಪನೆ ಮಾಡಿ ಯಶಸ್ವಿಗಳಾದರು. ಇಂತಹ ಕರ್ನಾಟಕರಾಜ್ಯದಲ್ಲಿ ಒಟ್ಟು ಇಪ್ಪತ್ತಕ್ಕಿಂತ ಹೆಚ್ಚು ಜಿಲ್ಲೆಗಳಿವೆ. ಇವುಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯು ಒಂದು. ಈ ಪ್ರದೇಶವು ಕರ್ನಾಟಕದ ದಕ್ಷಿಣಭಾಗದಲ್ಲಿದೆ. ಪರ್ವತಶ್ರೇಣಿಗಳಿಂದ ಯುಕ್ತವಾಗಿರುವ ಈ ವಿಭಾಗವು ಏಲಕ್ಕಿ, ಲವಂಗಾದಿಗಳಿಂದ ಸಮೃದ್ಧವಾಗಿದೆ. ಈ ಪ್ರದೇಶದ ಕ್ಷೇತ್ರವಿಸ್ತಾರವು 720 ಚದುರ ಕಿಲೋಮೀಟರ್ ಆಗಿದೆ. ಇದರ ಜನಸಂಖ್ಯೆ ಹತ್ತುಲಕ್ಷಕ್ಕೂ ಮೀರಿದೆ. ಈ ಪ್ರದೇಶವು 13.5 ಡಿಗ್ರಿ ಅಕ್ಷಾಂಶದಲ್ಲಿ ಮತ್ತು 75 ಡಿಗ್ರಿ ರೇಖಾಂಶದಲ್ಲಿ ಇರುತ್ತದೆ. ಈ ರೀತಿ ಇರುವ ಚಿಕ್ಕಮಗಳೂರು ವಿಭಾಗದಲ್ಲಿ ಕಡೂರು ಎಂಬುದೊಂದು ತಾಲ್ಲೂಕು. ಕಡೂರಿನಿಂದ ಸುಮಾರು ಹತ್ತು ಕಿಲೋಮೀಟರ್ ದೂರದಲ್ಲಿ **ಯಲ್ಲಂಬಳಸೆ** ಎಂಬ ಗ್ರಾಮವು ವಿರಾಜಮಾನವಾಗಿದೆ. ಈ ಪ್ರದೇಶವು ಒಳ್ಳೆಯ ಮಳೆ ಮತ್ತು ಸಸ್ಯಸಮೃದ್ಧಿಯಿಂದ ಪ್ರಕೃತಿರಮಣೀಯವೆನಿಸಿದೆ. ಇದೇ ಗ್ರಾಮವು ಪೂಜ್ಯಪಾದರ **ಜನ್ಮಸ್ಥಳವು.**

## ಯಲ್ಲಂಬಳಸೆ ಗ್ರಾಮದ ಭೌಗೋಳಿಕ ಪರಿಚಯ

ದೇಶ ದೇಶಗಳಲ್ಲಿ ಭಾರತವು ರಮ್ಯ
ಅಲ್ಲಿರುವ ಕರ್ನಾಟಕವು ರಮ್ಯತರವು !
ಅದರಲ್ಲಿಯೂ ರಮ್ಯ ಚಿಕ್ಕಮಗಳೂರು
ಯಲ್ಲಂಬಳಸೆಯಂತೂ ಎಲ್ಲಕ್ಕೂ ಮಿಗಿಲು.

ಕನ್ನಡ ಭಾಷೆಯಲ್ಲಿ **'ಯಲ್ಲಂಬಳಸೆ''** ಎಂಬ ಪದವನ್ನು 'ಎಲ್ಲವನ್ನೂ ಬಳಸಿ' ಎಂದರೆ **'ಸರ್ವವನ್ನೂ ಆವರಿಸಿ'** ಎಂದು ಅರ್ಥಮಾಡಬಹುದು. ವೇದಾಂತದ ಪ್ರಕಾರ ಬ್ರಹ್ಮವು ಎಲ್ಲವನ್ನೂ ಆವರಿಸಿರುತ್ತದಲ್ಲವೇ? ಅದ್ವೈತಚಾರ್ಯರಾದ ಸ್ವಾಮೀಜಿ ಯವರ ಜನ್ಮಗ್ರಾಮಕ್ಕೆ ಈ ಹೆಸರು ಅನ್ವರ್ಥನಾಮವೆಂದು ಹೇಳಬಹುದಲ್ಲವೆ?

ಆ ಕಾಲದಲ್ಲಿ ಕಡೂರು ಪಟ್ಟಣದಿಂದ ಯಲ್ಲಂಬಳಸೆ ಗ್ರಾಮಕ್ಕೆ ವಾಹನ ಸೌಕರ್ಯಗಳೇನೂ ಇರಲಿಲ್ಲ, ಶ್ರೀಮಂತರು ಎತ್ತಿನಗಾಡಿಗಳಲ್ಲಿ ಸಂಚರಿಸುತ್ತಿದ್ದರು. ಅಂದಿನ ಗ್ರಾಮಗಳು ನವನಾಗರೀಕಸೌಲಭ್ಯಗಳಿಂದ ದೂರವಾಗಿದ್ದರೂ, ಹಿಂದೂ ಧರ್ಮದ ಕೇಂದ್ರಬಿಂದುಗಳಾಗಿ, ಶಾಂತಿಪೂರ್ಣವಾತಾವರಣದಿಂದ ಕೂಡಿರುತ್ತಿದ್ದವು. ಯಲ್ಲಂಬಳಸೆ ಗ್ರಾಮದ ಬಾಗಿಲಿನ ಎಡಭಾಗದಲ್ಲಿ ಗೋಶಾಲೆ, ದಕ್ಷಿಣಭಾಗದಲ್ಲಿ ಮುಸಲ್ಮಾನರ ಪ್ರಾರ್ಥನಾಮಂದಿರ, ಕೆಲವು ಅಶ್ವತ್ಥ, ಬಿಲ್ವ, ಅತ್ತಿ ಮರಗಳು ಕಾಣ ಸಿಗುತ್ತಿದ್ದವು. ಗ್ರಾಮದಲ್ಲಿ ಒಂದು ಜಲಾಶಯ ಮತ್ತು ಬತ್ತದ ಗದ್ದೆಗಳು ಭೂಮಿ ಯನ್ನು ಹಸಿರಾಗಿಯೂ, ಫಲವತ್ತಾಗಿಯೂ ಇರುವಂತೆ ಕಾಪಾಡುತ್ತಿದ್ದವು. ಗ್ರಾಮದ ಒಳಗೆ ಬಂದರೆ, ಸಣ್ಣ ಸಣ್ಣ ರಸ್ತೆಗಳು ಮತ್ತು ಅವುಗಳ ಇಕ್ಕೆಲಗಳಲ್ಲಿ ವೇದಜ್ಞರ ವಸತಿಗಳು ವಿರಾಜಿಸುತ್ತಿದ್ದವು. ಇದಕ್ಕೆ ಸಮಾನಾಂತರವಾಗಿದ್ದ ರಸ್ತೆಗಳಲ್ಲಿ ಅಕ್ಕಸಾಲಿಗರು, ರೈತರು ಮತ್ತು ವ್ಯಾಪಾರಿಗಳೂ ವಾಸಮಾಡುತ್ತಿದ್ದರು. ಗ್ರಾಮದಲ್ಲಿ ಹನುಮಂತ, ಬಸವ, ಸೋಮೇಶ್ವರ, ಹೊನ್ನಮ್ಮದೇವಿ, ವೀರೇಶ್ವರ ಮತ್ತು ಚೆನ್ನಕೇಶವ ದೇವಾಲಯ ಗಳು ಜನರ ಆಸ್ತಿಕಭಾವನೆಯ ಮತ್ತು ಪರಮತಸಹಿಷ್ಣುತೆಯ ದ್ಯೋತಕಗಳಾಗಿ ವೈಭವಸ್ಥಿತಿಯಲ್ಲಿದ್ದವು. ದೇವಾಲಯಗಳ ಹಿಂಬದಿಯಲ್ಲಿ ಕುರುಬರು, ಕುಂಬಾರರು, ಅಗಸರು ಮತ್ತು ಮುಸಲಮಾನರು ವಾಸಿಸುತ್ತಿದ್ದರು. ಈ ಇಡಿಯ ಗ್ರಾಮ ರಚನೆಯು ಆ ಕಾಲದ ಸಾಮಾಜಿಕ ವ್ಯವಸ್ಥೆಯನ್ನು ಸೂಚಿಸುತ್ತದೆ. ಎಲ್ಲ ದೇವಾಲಯಗಳ ಉತ್ಸವಾದಿ ಸಮಾರಂಭಗಳಲ್ಲಿ ಎಲ್ಲ ವರ್ಗಗಳ ಜನರೂ ಭಾಗವಹಿಸುತ್ತಿದ್ದರು. ಈ ಬಗೆಯ ಧರ್ಮಶ್ರದ್ಧೆಯು ಅವರ ಐಕ್ಯತೆಯ ಸಂಪಾದನೆಗೆ ಪ್ರಧಾನ ಹೇತು

ವಾಗಿದ್ದಿತು. ಒಂದೇ ಉದ್ಯೋಗದಲ್ಲಿ ನಿರತವಾಗಿರುವ ಕುಟುಂಬಗಳು ಒಟ್ಟಿಗೆ ವಾಸಮಾಡುವುದು ಸಮಾಜದ ಹಿತರಕ್ಷಣೆಗಾಗಿ ಮಾಡಿರುವ ಉಪಾಯವಾಗಿದೆ. ಈ ರೀತಿಯ ವ್ಯವಸ್ಥೆಯು ನಮ್ಮ ದೇಶದಲ್ಲಿ ಮಾತ್ರವಲ್ಲದೆ ಅನ್ಯದೇಶಗಳಲ್ಲಿಯೂ ಕಂಡು ಬರುತ್ತದೆ. ಉದಾಹರಣೆಗೆ ಇರಾನ್ ದೇಶದಲ್ಲಿಯೂ ಅಥರ್ವವೆಂಬ ಆಚಾರ್ಯ ವರ್ಗ, ರಥೇಷ್ಯ ಎಂಬ ಯೋಧರ ಗುಂಪು, ವೈಶ್ಯ ಮತ್ತು ಸೇವಕರೆಂಬ ನಾಲ್ಕು ಭಾಗಗಳು ಇದ್ದುವೆಂದು ತಿಳಿದುಬರುತ್ತದೆ. ಜನರಲ್ಲಿ ಅರ್ಥ ಮತ್ತು ಕರ್ಮಗಳನ್ನು ಒಳಗೊಂಡಂತೆ ಮತ್ತೆ ಅದಕ್ಕೂ ಹೆಚ್ಚಿನದಾದ ಧರ್ಮಶ್ರದ್ಧೆಯು ಎಲ್ಲಿ ಇರುತ್ತದೆಯೋ ಅಲ್ಲಿ ಜೀವನವು ಸುಖಮಯವಾಗಿರುತ್ತದೆ. ಆದ್ದರಿಂದಲೇ ಅಂದಿನ ಕಾಲದ ಗ್ರಾಮಜೀವನದಲ್ಲಿ ಸಮರಸತೆಯನ್ನು ಕಾಣುತ್ತೇವೆ.

## ಯಲ್ಲಂಬಳಸೆ ಗ್ರಾಮದ ಆಧ್ಯಾತ್ಮಿಕೇತಿಹಾಸ

ಈ ಗ್ರಾಮವು ಧರ್ಮರತರಾದ ಜನರ ಆವಾಸಸ್ಥಾನವೆಂದು ಕಂಡುಬರುತ್ತದೆ. ಪೂರ್ವಕಾಲದಿಂದಲೂ ಈ ಗ್ರಾಮದ ಜನರು ಪುಣ್ಯಶೀಲರು, ಪಾಪಭೀರುಗಳೂ ಆಗಿದ್ದರು. ಹೂವು, ಹಣ್ಣು, ತರಕಾರಿ, ಹಾಲು, ಮೊಸರು ಮುಂತಾದವುಗಳನ್ನು ಲೋಭತನ ದಿಂದ ಮಾರುವುದು ಮಹಾಪಾಪವೆಂದು ಅವರು ಭಾವಿಸುತ್ತಿದ್ದರೆಂಬುದು ಅವರ ಧಾರ್ಮಿಕತೆಗೆ ದ್ಯೋತಕವಾಗಿದೆ. 'ಎಲ್ಲಿ ಎಲ್ಲೆಡೆಯೂ ಸುಭಿಕ್ಷತರವಾಗಿದೆಯೋ, ಅಲ್ಲಿ ಧರ್ಮನಿತ್ಯನಾದ ಪಾಂಡವನ ಅಜ್ಞಾತವಾಸವೆಂದು ನಿಶ್ಚಯಿಸು' - ಎಂದು ಯುಧಿಷ್ಠಿರನ ವಿಷಯದಲ್ಲಿ ಭೀಷ್ಮನಿಂದ ಹೇಳಲ್ಪಟ್ಟ ಮಾತು ಧರ್ಮರತರಾದ ಯಲ್ಲಂಬಳಸೆಯ ಗ್ರಾಮವಾಸಿಗಳು ವಿಷಯದಲ್ಲಿಯೂ ಸತ್ಯವಾಗಿತ್ತು. ಅಲ್ಲಿನ ಜನರು ರೋಗರಹಿತರೂ, ಸಂತುಷ್ಟರೂ, ಸ್ವಧರ್ಮನಿರತರೂ, ಸುಖಿಗಳೂ ಮತ್ತು ಶಾಂತಿಪ್ರಿಯರೂ ಆಗಿದ್ದರು. ಇದು ನಮ್ಮ ಪೂಜ್ಯಪಾದರ ಜನ್ಮಕ್ಕೆ ಸಕಲರೀತಿಯಲ್ಲಿ ಸರಿಯಾದ ಸ್ಥಳವಾಗಿತ್ತು.

* * * * *

# ಅಧ್ಯಾಯ - 2
# ಪೂಜ್ಯಪಾದರ ಜನನ

## ವಂಶ ಪರಿಚಯ

ಯಲ್ಲಂಬಳಸೆ ಗ್ರಾಮದಲ್ಲಿ ಸ್ಮಾರ್ತಸಂಪ್ರದಾಯವನ್ನು ಅನುಸರಿಸುತ್ತಿದ್ದ ನರಸಪ್ಪನೆಂಬ ದ್ವಿಜಶ್ರೇಷ್ಠರು ವಾಸಿಸುತ್ತಿದ್ದರು. ಇವರ ಮಗನೇ ಮಹಾನುಭಾವರಾದ 'ನಾರಾಯಣ' ಎಂಬುವವರು. ಜನರು ಅವರನ್ನು 'ನಂಜುಂಡಯ್ಯ' ಎಂದು ಸಂಬೋಧಿಸುತ್ತಿದ್ದರು. ಇವರು ಸರ್ಕಾರದ ಕಾರ್ಯಾಲಯವೊಂದರಲ್ಲಿ 'ರೆಕಾರ್ಡ್ ಕೀಪರ್' ಎಂಬ ಉದ್ಯೋಗವನ್ನು ಮಾಡುತ್ತಿದ್ದರು. ಲಕ್ಷ್ಮೀದೇವಮ್ಮನವರು ಇವರ ಧರ್ಮಪತ್ನಿ. ಚೆನ್ನರಾಯಪಟ್ಟಣದ ಸಮೀಪದಲ್ಲಿರುವ 'ಆಣತಿ' ಎಂಬ ಗ್ರಾಮವು ಈಕೆಯ ತವರುಮನೆ. ಸ್ವಭಾವತಃ ಧರ್ಮರತರಾದ ಮತ್ತು ಸುಸಂಸ್ಕೃತರಾದ ಹಾಗೂ ಆದರ್ಶಕುಟುಂಬಿಗಳಾದ ಈ ದಂಪತಿಗಳು ತಮ್ಮ ಸಂತಾನಗಳ ಅಕಾಲಿಕಮರಣ ಗಳಿಂದ ದುಃಖಿತರಾಗಿ ವ್ರತೋಪವಾಸವೇ ಮುಂತಾದವುಗಳಿಂದ ಕಾಲಯಾಪನ ಮಾಡುತ್ತಿದ್ದರು. ಅಂದಿನ ದಿನಗಳೆಂದರೆ ಸಾಂಕ್ರಾಮಿಕ ರೋಗಗಳಿಂದ ಪೀಡಿತ ವಾದುದಾಗಿತ್ತು. ಗ್ರಾಮಗಳಲ್ಲಿ ವೈದ್ಯಕೀಯ ಸೌಲಭ್ಯಗಳಾದರೋ ದುರ್ಲಭವಾಗಿತ್ತು. ಹೀಗಾಗಿ ಜನಿಸಿದ ಹದಿನಾರು ಮಕ್ಕಳಲ್ಲಿ ಏಳು ಮಕ್ಕಳು ಮಾತ್ರ ಉಳಿದವು. ಇವರಲ್ಲಿ ಆರನೆಯವನಾದ ''ಸುಬ್ಬರಾಯನು ಅಭಿನವಶಂಕರ'' ಎಂದು ಪ್ರಸಿದ್ಧಿಯನ್ನು ಪಡೆದು ಈ ಪ್ರಬಂಧದ ಕಾರಣಿಕ ಪುರುಷನಾದನು.

ನಿಯಮಿತವಾದ ಆಚಾರ ಪರಾಯಣರಾದ ನಂಜುಂಡಯ್ಯನವರು ಧನವಂತ ರಲ್ಲದಿದ್ದರೂ ಯದೃಚ್ಛಾಲಾಭಸಂತುಷ್ಟರಾಗಿದ್ದರು. ಪ್ರತಿದಿನವೂ ಸೂರ್ಯೋದಯಕ್ಕೆ ಮೊದಲೇ ಎದ್ದು ಶ್ರೌತಸ್ಮಾರ್ತವಿಹಿತವಾದ, ಸ್ನಾನ, ಆಹ್ನಿಕ, ದೇವತಾರ್ಚನೆ ಮುಂತಾದವು ಗಳನ್ನು ಸಾಂಗವಾಗಿ ಪೂರೈಸಿ ವಿಧಿಪೂರ್ವಕವಾಗಿ ವಿಷ್ಣುಸಹಸ್ರನಾಮ ಪಾರಾಯಣ ವನ್ನು ಮಾಡುತ್ತಿದ್ದರು. ಕಾರ್ಯಾಲಯದಿಂದ ಹಿಂದಿರುಗಿದ ನಂತರ ಮಕ್ಕಳ ಪಾಠ ಪ್ರವಚನಗಳಿಗೆ ಗಮನ ಕೊಡುತ್ತಿದ್ದರು. ಅವರಲ್ಲಿ ಧರ್ಮನಿಷ್ಠೆಯಿತ್ತೇ ಹೊರತು, ಧರ್ಮಾಂಧತೆಯಿರಲಿಲ್ಲ, ಹಬ್ಬಹರಿದಿನಗಳಲ್ಲಿ ದೇವಪಿತೃಕಾರ್ಯಗಳನ್ನು ಯಥಾಕಾಲ ದಲ್ಲಿ ಯಥಾಕ್ರಮವಾಗಿ ಭಕ್ತಿ ಮತ್ತು ಶ್ರದ್ಧೆಯಿಂದ ಆಚರಿಸುತ್ತಿದ್ದರು. ಅಂತೆಯೇ ಮಕ್ಕಳ ಜಾತಕರ್ಮ, ನಾಮಕರಣಾದಿ ಸಂಸ್ಕಾರಗಳನ್ನು ವಿಧಿವತ್ತಾಗಿ ಪೂರೈಸುತ್ತಿದ್ದರು.

ಎಲ್ಲರ ಪ್ರೀತ್ಯಾದರಗಳನ್ನು ಸಂಪಾದಿಸಿ ಆದರ್ಶ ಗೃಹಸ್ಥರಾಗಿದ್ದ ನಂಜುಂಡಯ್ಯನವರು ಸುಬ್ಬರಾಯರಿಗೆ ತಕ್ಕ ತಂದೆಯೆನಿಸಿದ್ದರು.

ಕುಲ, ಶೀಲ ಮತ್ತು ಸತ್ವಸಂಪನ್ನರಾದ ತಾಯಿ ಲಕ್ಷ್ಮೀದೇವಮ್ಮನವರು ಅವರಿಗೆ ತಕ್ಕ ಆದರ್ಶ ಗೃಹಿಣಿಯಾಗಿದ್ದರು. ಹಸು-ಕರುಗಳ ಯೋಗಕ್ಷೇಮ, ಮನೆ ಕೆಲಸಗಳನ್ನು ಸಮಯಕ್ಕೆ ಸರಿಯಾಗಿ ನಿರ್ವಹಿಸಿ, ಸಂಜೆ ಹೆಂಗಸರೊಂದಿಗೆ ಸೇರಿ ಯಕ್ಷಗಾನದ ಪದಗಳನ್ನು ಹಾಡುತ್ತ, ಅವುಗಳ ಅರ್ಥವನ್ನು ಅವರು ವಿವರಿಸುತ್ತಿದ್ದರು. ಈ ರೀತಿ ಅವರ ಮನೆಯು ಆದರ್ಶನಾರೀಸಮಾಜದಂತೆ ಭಾಸವಾಗುತ್ತಿತ್ತು. ಮನೆಗೆ ಬಂದವರು ಯಾರೂ ಬರಿಗೈಯಲ್ಲಿ ಹಿಂದಿರುಗುತ್ತಿರಲಿಲ್ಲ. ಆಯುರ್ವೇದವನ್ನು ಬಲ್ಲ ಅವರು ತಮ್ಮ ಅನುಭವದ ಬಲದಿಂದ ಬಡವರಿಗೆ ಔಷಧೋಪಚಾರಗಳನ್ನು ನಡೆಸುತ್ತಿದ್ದರು. ಓತಪ್ರೋತರೂಪದಿಂದ ಅವರ ಹೃದಯದಲ್ಲಿದ್ದ ಪರೋಪಕಾರಭಾವಕ್ಕೆ ಯಾರೂ ಪರಕೀಯರಾಗಲೀ, ಅಪರಿಚಿತರಾಗಲೀ ಇರಲಿಲ್ಲ. ಈ ರೀತಿಯ ಕರ್ತವ್ಯ ಪರತೆ, ಧರ್ಮಶ್ರದ್ಧೆ, ಶಿಕ್ಷಣದಲ್ಲಿ ಆಸಕ್ತಿ, ಮುಂತಾದ ಅನುಸರಣೀಯ ಗುಣಗಳು ತಮ್ಮ ತಾಯಿಯಿಂದಲೇ ತಮಗೆ ಬಂದುವೆಂದು ಶ್ರೀಚರಣರು ಯಾವಾಗಲೂ ಭಾವಿಸುತ್ತಿದ್ದರು.

## ಶ್ರೀಗಳವರ ಜನ್ಮದಿನ

**ಪರಿವರ್ತಿನಿ ಸಂಸಾರೇ ಮೃತಃ ಕೋ ವಾ ನ ಜಾಯತೇ ।**
**ಸ ಜಾತೋ ಯೇನ ಜಾತೇನ ಯಾನಿ ವಂಶಃ ಸಮುನ್ನತಿಮ್ ॥**

ದಿನವೂ ಬದಲಾಗುತ್ತಿರುವ ಈ ಪ್ರಪಂಚದಲ್ಲಿ ಹುಟ್ಟಿದವರೆಲ್ಲರೂ ಸಾಯಲೇ ಬೇಕು. ಯಾರಿಂದ ವಂಶವು ಉನ್ನತಿಯನ್ನು ಪಡೆಯುತ್ತದೆಯೋ ಅವನೇ ನಿಜವಾಗಿ ಜನಿಸುದುದು ಸಾರ್ಥಕ.

ಹಿಂದೆ ಹೇಳಿದ ಸುಸಂಸ್ಕೃತವಾದ ವಂಶದಲ್ಲಿ ಸುಬ್ಬರಾಯರು 1802ನೇ ಶತಾಬ್ದದ ಪ್ರಮಾಥೀನಾಮ ಸಂವತ್ಸರದ ದಕ್ಷಿಣಾಯನದಲ್ಲಿ, ಮಾರ್ಗಶೀರ್ಷಮಾಸದ ಕೃಷ್ಣಪಕ್ಷದ ಅಷ್ಟಮಿಯ ದಿನ ಜನ್ಮತಾಳಿದರು. ಆ ದಿನ ಸೋಮವಾರವಾಗಿದ್ದು, ಹಸ್ತ ನಕ್ಷತ್ರಯುಕ್ತವಾಗಿದ್ದಿತ್ತು. ಪ್ರಶಾಂತರಮಣೀಯವಾದ ಸೂರ್ಯೋದಯಕಾಲದಲ್ಲಿ ಈ ವೇದಾಂತ ಸೂರ್ಯನ ಜನನವಾಯಿತು. ಪ್ರಚಲಿತ ಇಸವಿಯ ಪ್ರಕಾರ ಕ್ರಿಸ್ತಾಬ್ದಿಯ 1880ರ ಜನವರಿ ತಿಂಗಳ 5ನೆಯ ದಿನ ಇದಾಗಿದ್ದಿತು. (5.1.1880) ಜನನ ಕಾಲದ ಆಧಾರದಿಂದ ಶಿಶುವಿನ ಭಾವಿ ಅಭ್ಯುದಯ ಮತ್ತು ಜೀವನದ ಪ್ರಮುಖ

ಘಟನೆಯನ್ನು ಗುರುತಿಸಬಹುದೆಂದು ಜ್ಯೋತಿಷ್ಯವನ್ನು ತಿಳಿದವರು ಹೇಳುತ್ತಾರೆ. ಅದಲ್ಲದಿದ್ದರೂ, ಶ್ರೀಗಳವರ ಜನ್ಮಕಾಲವನ್ನು ಈ ರೀತಿ ವಿಶ್ಲೇಷಿಸಬಹುದು.

1. **ಸಂವತ್ಸರಫಲ** – ಶ್ರೀಗಳವರು ಪ್ರಮಾಥಿ ಸಂವತ್ಸರದಲ್ಲಿ ಜನಿಸಿದರು. ಇದು ಅವರಲ್ಲಿದ್ದ ಭವಬಂಧನಪ್ರಮಥನ ಸಾಮರ್ಥ್ಯವನ್ನು ತೋರಿಸುತ್ತದೆ.

2. **ಮಾಸಫಲ –** ಶ್ರೀಚರಣರು ಮಾರ್ಗಶೀರ್ಷಮಾಸದಲ್ಲಿ ಜನಿಸಿದರು. ಭಗವಂತನು ಗೀತೆಯಲ್ಲಿ **'ಮಾಸಾನಾಂ ಮಾರ್ಗಶೀರ್ಷೋಽಹಂ'** ಎಂದು ಈ ತಿಂಗಳ ಪ್ರಾಮುಖ್ಯವನ್ನು ಸ್ಪಷ್ಟಪಡಿಸಿರುತ್ತಾನೆ. ಅಲ್ಲಿಯೇ ವಿಶಿಷ್ಟವಾದ ತೇಜೋರಾಶಿಗಳೆಲ್ಲರೂ ಭಗವಂತನ ಅಂಶವೆಂದೂ ತಿಳಿಸಿರುತ್ತಾನೆ. ಈ ಮಾರ್ಗಶೀರ್ಷದಲ್ಲಿ ಜನಿಸಿದ ಶ್ರೀಗಳು ಭಗವದಂಶಯುಕ್ತರಾಗಿಯೇ ಜನಿಸಿದರೆಂಬುದು ಅವರ ವಿಶೇಷಸಾಮರ್ಥ್ಯದಿಂದ ಸ್ಪಷ್ಟವಾಗುತ್ತದೆ. ಕ್ರಿಸ್ತೀಯ ಶತಾಬ್ದದ ಪ್ರಕಾರ ಅವರು ಜನವರಿ ತಿಂಗಳಿನಲ್ಲಿ ಜನ್ಮ ಪಡೆದರು. ವರ್ಷದ ಪ್ರಾರಂಭದ ಆ ತಿಂಗಳು ಸರ್ವತ್ರ ಪ್ರಥಮನಾಗುವ ಮತ್ತು ಗುರುವಾಗುವ ಶ್ರೀಗಳವರಿಗೆ ಯೋಗ್ಯವಾದುದಾಗಿದೆ.

3. **ತಿಥಿಫಲ** – ಕೃಷ್ಣಪಕ್ಷದ ಬಹುಳ ಅಷ್ಟಮಿಯು ಆ ಪಕ್ಷದ ಮಧ್ಯಕಾಲ. ಕೃಷ್ಣಪಕ್ಷದಲ್ಲಿ ಚಂದ್ರ ಕ್ಷೀಣಿಸುತ್ತಾನೆ. ಅಷ್ಟಮಿಯಂದು ಸರಿಯಾಗಿ ಅರ್ಧಕಲೆಗಳು ನಷ್ಟವಾಗುತ್ತವೆ. ವೇದಾಂತವೂ ಅಂದಿನ ಕಾಲಕ್ಕೆ ತಮೋಬಾಧಿತವಾಗಿ ಮುಂದೆ ಇನ್ನೂ ಅಂಧಕಾರ ಕವಿಯುವ ಸ್ಥಿತಿಯಲ್ಲಿತ್ತು. ತಮಸ್ಸಿನಿಂದ ಜ್ಯೋತಿಯೆಡೆಗೆ ಒಯ್ಯಲು ಮಹಾಚೇತನವೊಂದರ ಆವಶ್ಯಕತೆ ಬಹಳವಾಗಿತ್ತು.

4. **ವಾರಫಲ :** ಅವರು ಜನಿಸಿದ್ದು ಸೋಮವಾರದಂದು. ಚಂದ್ರನು ಈ ದಿನದ ಅಧಿಪತಿ. ಕತ್ತಲೆಯನ್ನು ಹೋಗಲಾಡಿಸಿ, ತನ್ನ ಬೆಳದಿಂಗಳಿನಿಂದ ಚಂದ್ರನು ಜಗತ್ತನ್ನು ಆನಂದಗೊಳಿಸುವಂತೆ, ಆನಂದೈಕರೂಪವಾದ ಮೋಕ್ಷಮಾರ್ಗದ ಮಾರ್ಗದರ್ಶಕರ ಜನನಕ್ಕೆ ಸೂಕ್ತವಾದ ವಾರವಿದು. ಜನರ ಮನಸ್ಸಿನ ಅಂಧಕಾರವನ್ನು ಇಂತಹ ಗುರುಗಳು ಮಾತ್ರ ಹೋಗಲಾಡಿಸಬಲ್ಲರು.

5. **ಲಗ್ನಫಲ –** ಆ ಕಾಲದಲ್ಲಿ ಧನುರ್ಲಗ್ನವಿತ್ತು. ಧನುರ್ಧಾರಿಯಾದ ಕೋದಂಡ ರಾಮ ಶ್ರೀಗಳವರ ಆರಾಧ್ಯದೈವ. ಅಜ್ಞಾನವೆಂಬ ಅಂಧಕಾರವನ್ನು ಉನ್ಮೂಲನೆ ಮಾಡಲು ಅದ್ವೈತವೆಂಬ ಧಮರ್ಧಾರಿಯಾಗಿ ಭೂಮಿಯಲ್ಲಿ ವಿರಾಜಮಾನರಾದವರು ಅವರು.

6. **ಕಾಲಫಲ :** ಸೂರ್ಯೋದಯಕ್ಕೆ ಸರಿಯಾಗಿ ನಮ್ಮ ಗುರುಗಳೆಂಬ ಅದ್ವೈತ ಬಾಲ ಸೂರ್ಯಜಗತ್ತನ್ನು ಬೆಳಗಲು ಸಿದ್ಧರಾಗಿ ಭೂಮಿಗಿಳಿದರು.

7. **ನಕ್ಷತ್ರಫಲ** – ಶಿಶುವಿನ ಜನ್ಮಕಾಲದಲ್ಲಿ ಹಸ್ತನಕ್ಷತ್ರವಿದ್ದಿತು. ಭವಾರ್ಣವವನ್ನು ದಾಟಲು ಜನರಿಗೆ ಹಸ್ತಾವಲಂಬನ ನೀಡುವುದಕ್ಕಾಗಿ ಅವರು ಭೂಮಿಗೆ ಬಂದರು.

ಹೀಗೆ ಶ್ರೀಗಳವರ ಜನ್ಮಕಾಲವು ಎಲ್ಲ ರೀತಿಯಿಂದಲೂ ಕಲ್ಯಾಣಕಾರಕ ವಾಗಿತ್ತೆಂಬುದರಲ್ಲಿ ಸಂಶಯಲೇಶವೂ ಇಲ್ಲ, ವಸ್ತುತಃ ಇಂತಹ ಮಹಾತ್ಮರ ಜನನ ದಿಂದ ಆ ಕಾಲವೇ ಅನುಗ್ರಹೀತವಾಯಿತೆಂದು ಹೇಳುವುದು ಉಚಿತವೇ ಹೊರತು ಕಾಲದಿಂದ ಮಹಾತ್ಮರ ಮಹತ್ತ್ವವು ವೃದ್ಧಿಯಾಗುವುದೆಂದು ತಿಳಿಸುವುದು ಸೂಕ್ತವಲ್ಲ.

* * * * *

# ಅಧ್ಯಾಯ - 3

## ಶ್ರೀಗಳವರ ಮಾತಾಪಿತೃಭಕ್ತಿ

**'ಯಥಾ ಮಾತೃಮಾನ್ ಪಿತೃಮಾನ್ ಆಚಾರ್ಯವಾನ್ ಪುರುಷೋ ವೇದ'**

**'ಬೆಳೆಯುವ ಪೈರು ಮೊಳಕೆಯಲ್ಲಿ'** ಎಂಬೊಂದು ಗಾದೆ ಮಾತಿದೆ. ಉತ್ತಮ ವಾದ ಬೀಜವನ್ನು ಒಳ್ಳೆಯ ಮಣ್ಣಿರುವ ಹೊಲದಲ್ಲಿ ಹಾಕಿದರೆ, ಅದು ಸಮೃದ್ಧವಾದ ಫಲವನ್ನು ನೀಡುತ್ತದೆ. ಹಾಗೆಂತಲೇ ಸ್ವಭಾವತಃ ಜನ್ಮದಿಂದಲೇ ಪ್ರತಿಭಾವಂತರಾದ ಶ್ರೀಗಳವರಿಗೆ ಒಳ್ಳೆಯ ವಂಶದಲ್ಲಿ ಜನನ. ಸಂಪ್ರದಾಯಸ್ಥರಾದ ಮಾತಾಪಿತೃಗಳು, ಉತ್ತಮವಾದ ಹಳ್ಳಿಯ ಆಧ್ಯಾತ್ಮಿಕ ಪರಿಸರಗಳು ಮುಂದೆ ಕಾರಣಪುರುಷರಾಗಲು ಕಾರಣೀಭೂತವಾದ ಅಂಶಗಳಾಗಿವೆ.

ಯಲ್ಲಂಬಳಸೆಯೆಂಬ ಈ ಹಳ್ಳಿಯಲ್ಲಿ ಸುಂಕದ ನರಸಪ್ಪನೆಂಬ ಸದ್ವಂಶೀಯ ರಾದ ಒಬ್ಬೂರುಕಮ್ಮೆ ಪಂಗಡದ ಹರಿತಸ ಗೋತ್ರದ ಸ್ಮಾರ್ತ ಬ್ರಾಹ್ಮಣರಿದ್ದರು. ಇವರೇ ನಮ್ಮ ಶ್ರೀಗಳವರ ಅಜ್ಜಂದಿರು. ಇವರು ಸನಾತನ ಸಂಪ್ರದಾಯವನ್ನು ನಿಷ್ಠೆಯಿಂದ

ಪಾಲಿಸುತ್ತಿದ್ದವರಾಗಿದ್ದಲ್ಲದೆ, ಊರಿನಲ್ಲಿ ಎಲ್ಲರಿಗೂ ಉಪಕಾರಿಗಳಾದ ಸತ್ಪುರುಷ ರಾಗಿದ್ದರು. ಆದ್ದರಿಂದಲೇ ಅವರ ಮನೆಯು ಮಕ್ಕಳ ಕಾಲದಲ್ಲಿಯೂ ಸುಂಕದ ನರಸಪ್ಪನವರ ಮನೆಯೆಂದೇ ಪ್ರಸಿದ್ಧವಾಗಿದ್ದಿತು. ಇವರ ಪುತ್ರರೇ ಶ್ರೀಗಳವರ ತಂದೆ ಯವರಾದ **ನಂಜುಂಡಯ್ಯ**ನವರು. ಇವರು ಸರ್ಕಾರದ ರೆಕಾರ್ಡ್ ಕೀಪರ್ ಹುದ್ದೆ ಯಲ್ಲಿದ್ದರೂ ತಮ್ಮ ಸಂಪ್ರದಾಯವನ್ನು ಗೌರವ ಮತ್ತು ಶ್ರದ್ಧೆಗಳಿಂದ ಪಾಲಿಸುತ್ತಿದ್ದರು. ಈ ಶ್ರದ್ಧೆಯೇ ಮುಂದೆ ಶ್ರೀಗಳವರ ಅದ್ವೈತಸೇವೆಗೆ ಮೂಲಧನವಾಯಿತು. ಈ ವಿಷಯವನ್ನು ಅವರು ಅನೇಕ ಸಂದರ್ಭಗಳಲ್ಲಿ ಪ್ರಕಟಪಡಿಸಿರುತ್ತಾರೆ. ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆಯಲ್ಲವೆ?

ರಾಯರಿಗೆ ಸ್ವಲ್ಪ ತಿಳುವಳಿಕೆ ಬರುವ ವಯಸ್ಸಾಗುವ ಹೊತ್ತಿಗೆ ಅವರ ತಂದೆಯವರು ವೃದ್ಧರಾಗಿ, ತಮ್ಮ ಸರ್ಕಾರಿ ಹುದ್ದೆಯಿಂದ ನಿವೃತ್ತರಾಗಿದ್ದರು. ಅವರನ್ನು ನೇರವಾಗಿ ಮಾತನಾಡಿಸುವಷ್ಟು ಧೈರ್ಯವು ಯಾರಿಗೂ ಸಾಲದಾಗಿದ್ದರೂ, ಅವರು ಉಗ್ರ ಸ್ವಭಾವದವರಾಗಿರಲಿಲ್ಲ, ಸ್ವಾಭಾವಿಕವಾಗಿಯೇ ಮಿತಭಾಷಿಗಳಾಗಿದ್ದ ಅವರು ಕರ್ಮ ಯೋಗಿಗಳಾಗಿದ್ದರು. ಕಾಡುಹರಟೆಯಲ್ಲಿ ಕಾಲಕಳೆಯುವ ಸ್ವಭಾವಕ್ಕೆ ವಿರುದ್ಧವಾಗಿದ್ದ ಅವರ ಕರ್ತವ್ಯನಿಷ್ಠೆ ಮಕ್ಕಳಿಗೆಲ್ಲ ಮಾದರಿಯಾಗಿತ್ತು. ಮನೆಯ ಯಜಮಾನರು ಹೀಗೆ ಇದ್ದರೆ, ಆ ಮನೆಯಲ್ಲಿ ಸುವ್ಯವಸ್ಥಿತವಾಗಿ ಎಲ್ಲರೂ ತಮ್ಮ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಅವರ ದಿನಚರಿಯನ್ನು ಸ್ವಲ್ಪದರಲ್ಲಿ, ಹೀಗೆ ವಿವರಿಸಬಹುದು.

ಅವರು ಪ್ರತಿದಿನವೂ ಅರುಣೋದಯಕ್ಕೆ ಮೊದಲೇ ಏಳುತ್ತಿದ್ದರು. ಒಂದು ಬಾರಿ ತಮ್ಮ ತೋಟವನ್ನು ಸುತ್ತುಹಾಕಿಕೊಂಡು ಬಂದು, ಹತ್ತುಗಂಟೆಯ ವೇಳೆಗೆ ಸ್ನಾನ, ಆಹ್ನಿಕ, ದೇವರ ಪೂಜೆ ಮತ್ತು ವಿಷ್ಣುಸಹಸ್ರನಾಮ ಪಾರಾಯಣಗಳನ್ನು ಪೂರೈಸುತ್ತಿದ್ದರು. ಹನ್ನೊಂದು ಗಂಟೆಗೆ ಭೋಜನ ಮಾಡಿ ಗದುಗಿನ ಭಾರತ, ಸಾಹಿತ್ಯ ಮತ್ತು ಧರ್ಮಕೃತಿಗಳ ಅವಲೋಕನ ಮನೆಗೆ ಸಂಬಂಧಿಸಿದ ಕೃತ್ಯಗಳನ್ನು ನೆರವೇರಿಸು ತ್ತಿದ್ದರು. ಬಿಸಿಲು ತಂಪುತ್ತಲೂ ಇನ್ನೊಂದು ಬಾರಿ ತೋಟಕ್ಕೆ ಹೋಗಿ ಬಂದು, ಒಮ್ಮೊಮ್ಮೆ ದೇವಾಲಯಗಳನ್ನು ಸಂದರ್ಶಿಸುತ್ತಿದ್ದರು. ಸಾಯಂಕಾಲ ಹುಡುಗರಿಗೆ ಬಾಯಿಪಾಠ ಹೇಳುವುದನ್ನು ತಪ್ಪಿಸುತ್ತಿರಲಿಲ್ಲ, ನಂತರ ಸಂಧ್ಯಾವಂದನೆ, ದೇವರಿಗೆ ಮಂಗಳಾರತಿ ಮುಗಿಸಿ ಊಟ ಮಾಡಿ, ನಂತರ ವಿಶ್ರಾಂತಿ ಪಡೆಯುತ್ತಿದ್ದರು. ಈ ಎಲ್ಲ ಕೆಲಸಗಳನ್ನು ಅವರು ಯಥಾಕಾಲ ನಿಯಮಿತವಾಗಿ ಮಾಡಿ ಮುಗಿಸುತ್ತಿದ್ದರು.

ತಂದೆಯ ಗುಣಗಳು ಮಕ್ಕಳಲ್ಲಿ ಸಹಜವಾಗಿ ಮೂಡಿಬರುವುದಲ್ಲದೆ, ಅವರಲ್ಲಿ ಗೌರವ ಭಾವನೆಯನ್ನು ಹೆಚ್ಚಿಸುತ್ತವೆ. ನಂಜುಂಡಯ್ಯನವರಿಗೆ ರಹಸ್ಯ ಎಂಬುದು ತಿಳಿಯದು. ಅವರ ಜೀವನ ತೆರೆದ ಪುಸ್ತಕದಂತಿದ್ದು, ಅನುಕರಣೀಯವಾದ ಗುಣ ಗಳು ಎದ್ದುಕಾಣುತ್ತಿದ್ದವು. ಅವರು ಎಂದೂ ಸಾಲವನ್ನು ತಂದು ಆಡಂಬರದ ಜೀವನ ವನ್ನಾಗಲೀ, ಮನೆಯ ಹೆಚ್ಚಿನ ಖರ್ಚನ್ನಾಗಲೀ ಬಯಸುತ್ತಿರಲಿಲ್ಲ. ''ಹಾಸುಗೆಯಿದ್ದಷ್ಟು ಕಾಲುಚಾಚು'' ಎಂಬ ಮಾತಿಗೆ ಅವರ ಜೀವನ ಜೀವಂತ ಉದಾಹರಣೆಯಾಗಿತ್ತು. ಮತ್ತೊಬ್ಬರಿಗೆ ಸಾಲವನ್ನು ಕೊಟ್ಟಾಗಲೂ ಹೆಚ್ಚಿನ ಬಡ್ಡಿಹಾಕಿ, ಲೇವಾದೇವಿ ಮಾಡು ವುದು ಅವರಿಗೆ ಹಿಡಿಸುತ್ತಿರಲಿಲ್ಲ. ಅವರು ಎಂದೂ ಯಾವ ವ್ಯಾಜ್ಯವನ್ನೂ ಹೂಡಿ, ಕೋರ್ಟು ಕಛೇರಿಗಳನ್ನು ಹತ್ತಿದವರಲ್ಲ. ಯಾವ ಪಕ್ಷಕ್ಕೂ ಸೇರದೆ ಉದಾಸೀನ ರಾಗಿಯೇ ಇರುತ್ತಿದ್ದರು.

ಧರ್ಮಾನುಷ್ಠಾನದಲ್ಲಿ ಮಿತಿ ಮೀರಿದ ಶ್ರದ್ಧೆ, ಮಡಿ, ಮುಂತಾದ ಅತಿರೇಕ ವಿಲ್ಲದೆ, ಗೃಹಸ್ಥಧರ್ಮವನ್ನು ಪಾಲಿಸುವುದು ಶ್ರೀಗಳವರಿಗೆ ತಂದೆಯವರಿಂದಲೇ ಬಂದ ಗುಣ. ಪಿತೃಕಾರ್ಯ, ಪೂಜೆಪುನಸ್ಕಾರಗಳು, ಕಾಲಕಾಲಕ್ಕೆ ಮಕ್ಕಳಿಗೆ ಚೂಡಾ ಕರ್ಮ, ಉಪನಯನ ಮತ್ತು ವಿವಾಹಾದಿಗಳನ್ನು ಎಚ್ಚರಿಕೆಯಿಂದಲೂ, ಶ್ರದ್ಧೆ ಯಿಂದಲೂ ನಡೆಸುತ್ತಿದ್ದರು. ಪರಸ್ಥಳದಿಂದ ಬಂದ ಬ್ರಾಹ್ಮಣರಿಗೆ ಮನೆಯಲ್ಲಿ ನಿತ್ಯ ಅತಿಥಿಸತ್ಕಾರ ನಡೆಯುತ್ತಿತ್ತು. ದೊಡ್ಡ ಕುಟುಂಬವನ್ನು ಸಮರ್ಥವಾಗಿ ನಿರ್ವಹಿಸುತ್ತ, ಯಾವ ಆಡಂಬರವಿಲ್ಲದೆ ಸಕಲರ ಗೌರವ ಮತ್ತು ಅಭಿಮಾನಗಳಿಗೆ ಪಾತ್ರರಾಗಿದ್ದರು. ಈ ಎಲ್ಲ ರೀತಿಯ ಸದ್ಗುಣಗಳು ಮತ್ತು ಮನೆಯ ಆಸ್ತಿಕ ವಾತಾವರಣವು ಶ್ರೀಗಳವರ ಬಾಲ್ಯದಲ್ಲಿ ಬಹಳ ಪ್ರಭಾವ ಬೀರಿತು. ಮುಂದೆ ತಮ್ಮ ಎಲ್ಲ ಕರ್ತವ್ಯಗಳನ್ನು ನಿರ್ವಹಿಸುವಾಗ ಅವರು ತಂದೆಯವರ ನಡತೆ ಮತ್ತು ವಿಧಾನಗಳನ್ನು ನೆನಪಿಸಿ ಕೊಳ್ಳುತ್ತಿದ್ದರಲ್ಲದೆ, ಅವರಂತೆಯೇ ನಡೆದುಕೊಳ್ಳುತ್ತಿದ್ದರು. ಧರ್ಮವೇ ದೊಡ್ಡ ಆಸ್ತಿ ಯೆಂಬುದನ್ನು ಮತ್ತು ವಿದ್ಯಾಭ್ಯಾಸದಲ್ಲಿ ಮುಖ್ಯವಾಗಿ ಶ್ರದ್ಧೆಯಂತೆ ಫಲವೆಂಬು ದನ್ನು, ಕಷ್ಟದಲ್ಲಿ ಕುಂದದೆ, ಸುಖದಲ್ಲಿ ಅಹಂಕಾರ ಪಡದೆ ಸಮಾನತೆಯಿಂದ ಜೀವನವನ್ನು ಕಾಣಬೇಕೆಂಬುದನ್ನು ಅವರಿಗೆ ತಂದೆಯವರ ನಡವಳಿಕೆಯೇ ತಿಳಿಸಿ ಕೊಟ್ಟಿತು. ಪುಸ್ತಕದಿಂದ ಓದಿ ಬರುವ ಪಾಠವಲ್ಲ, ಚಿಕ್ಕಂದಿನಲ್ಲಿ ಇಂತಹ ನೈತಿಕಶಿಕ್ಷಣ ದೊರೆಯದರಿಂದಲೇ ತಮ್ಮ ಮುಂದಿನ ಹಾದಿ ಸುಗಮವಾಯಿತೆಂದು ಅವರು ತಮ್ಮ ತಂದೆಯವರನ್ನು ಸದಾ ಸ್ಮರಿಸುತ್ತಿದ್ದರು.

ಪಾಠದ ವಿಷಯದಲ್ಲಿಯೂ ತಂದೆಯವರು ಶ್ರೀಗಳವರ ಪ್ರಥಮ ಗುರುಗಳು. ಉಪನಯನ ಸಂಸ್ಕಾರವನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿ, ಬ್ರಹ್ಮೋಪದೇಶದಿಂದ ಹಿಡಿದು ಮುಂದೆ ಸಂಧ್ಯಾವಂದನೆಯ ಮಂತ್ರಗಳು, ಕೆಲವು ಸ್ತೋತ್ರಗಳು, ಕೃಷ್ಣ ಮತ್ತು ಶಿವನ ಅಷ್ಟೋತ್ತರಶತನಾಮಗಳು. ಇಂದ್ರಾಕ್ಷಿ, ಶಿವಕವಚ ಮುಂತಾದವವನ್ನು ಕಲಿಸಿಕೊಟ್ಟರು. ಬಾಲ್ಯದಲ್ಲಿ ಕಲಿತ ವಿದ್ಯೆ ಜೀವನವಿಡೀ ಪ್ರಭಾವಬೀರುತ್ತವೆ. ಊಟದ ಸಮಯದಲ್ಲಿಯೂ ಹರೇ ರಾಮಮಂತ್ರ, ವಿಷ್ಣುಸಹಸ್ರನಾಮಗಳನ್ನು ಹೇಳಿಕೊಡುತ್ತಿದ್ದರು. ಇದರಿಂದ ಊಟ ಕೇವಲ ದೇಹವನ್ನು ಬೆಳೆಸುವುದಕ್ಕಲ್ಲ, ಮನಸ್ಸನ್ನು ವಿಕಾಸಮಾಡುವುದಕ್ಕೆ ಎಂಬ ಅಂಶವನ್ನು ಶ್ರೀಗಳವರು ಕಂಡುಕೊಂಡರು. ಮುಂದೆ **''ಅನ್ನಂ ಬ್ರಹ್ಮೇತಿ ವ್ಯಜನಾತ್....''** ಮುಂತಾದ ಉಪನಿಷದ್ವಾಕ್ಯಗಳ ಅನುಭವ ಪೂರ್ಣವಾದ ಅರ್ಥಮೀಮಾಂಸೆಗೆ ಇದು ಓಂಕಾರವಾಯಿತು. ದೇವರ ಪೂಜೆಯನ್ನು ಮಾಡುವ ವಿಧಾನವೂ ಅವರಿಗೆ ತಂದೆಯಿಂದಲೇ ಉಪದೇಶಿಸಲ್ಪಟ್ಟಿತು. ಶಿವರಾತ್ರಿಯಂತಹ ವಿಶೇಷದಿನಗಳಲ್ಲಿ ತಂದೆಯವರೇ ದೇವರಪೂಜೆಯನ್ನು ಮಾಡಿ, ತೆಲುಗು ಅಕ್ಷರದ ಪುಸ್ತಕದಿಂದ ಸಹಸ್ರನಾಮವನ್ನು ರಾಯರಿಂದ ಓದಿಸುತ್ತಿದ್ದರು. ಅಂದಿನ ಕಾಲಕ್ಕೆ ಸಂಸ್ಕೃತದ ಗ್ರಂಥಗಳು ವಿಶೇಷವಾಗಿ ತೆಲುಗು ಲಿಪಿಯಲ್ಲಿ ಪ್ರಕಟವಾಗುತ್ತಿದ್ದವು. ಮುಂದೆ ಸಂಸ್ಕೃತ ಗ್ರಂಥಗಳನ್ನು ಓದಲು ಈ ತೆಲುಗು ಲಿಪಿಯನ್ನು ಪರಿಚಯ ಮಾಡಿಕೊಟ್ಟದ್ದು ಬಹಳ ಪ್ರಯೋಜನವಾಯಿತೆಂದು ಅವರು ಸದಾ ನೆನಪಿಗೆ ತಂದುಕೊಳ್ಳುತ್ತಿದ್ದರು.

ಬೇರೆ ಬೇರೆ ಮತಧರ್ಮಗಳ ವಿಚಾರವಾಗಿಯೂ ಅವರ ತಂದೆಯವರಿಗೆ ಆಸಕ್ತಿಯಿತ್ತು. ಒಂದು ಸಲ ಅವರು ಹರಾಜಿನಲ್ಲಿ ಬೈಬಲ್ ಪುಸ್ತಕವನ್ನು ಕೊಂಡು ತಂದಿದ್ದರಂತೆ ! ಆದರೆ ಬೇರೆ ಧರ್ಮಗಳ ಖಂಡನೆಯನ್ನಾಗಲೀ, ಪ್ರಶಂಸೆಯನ್ನಾಗಲೀ ಮಾಡುತ್ತಿರಲಿಲ್ಲ, ಕೇವಲ ವಿಷಯವನ್ನು ತಿಳಿಯುವ ಕುತೂಹಲವನ್ನು ಬೆಳೆಸಿಕೊಂಡಿದ್ದರು. ಮುಂದೆ ಶ್ರೀಗಳವರಲ್ಲಿಯೂ ಇಂತಹುದೇ ಸ್ವಭಾವವನ್ನು ನಾವು ಕಾಣುತ್ತೇವೆ. ಪರಮತಸಹಿಷ್ಣುತೆ ಅವರಲ್ಲಿದ್ದ ಉತ್ತಮಗುಣ. ಅಂದಿಗೆ ಕ್ರಿಶ್ಚಿಯನ್ ಮತಪ್ರಚಾರ ಹೆಚ್ಚಾಗಿತ್ತು. ಅಂತಹ ಕಾಲದಲ್ಲಿ ತಮ್ಮ ಧರ್ಮ ಮತ್ತು ಸಂಪ್ರದಾಯವನ್ನು ಉಳಿಸಿಕೊಂಡು ಮಕ್ಕಳಲ್ಲಿಯೂ ಶ್ರದ್ಧೆಯನ್ನು ಬೆಳೆಸುವ ಕರ್ತವ್ಯವನ್ನು ಅವರು ಚೆನ್ನಾಗಿ ಪಾಲಿಸಿದರು.

ಪರವೂರಿನಿಂದ ಬರುವ ಬ್ರಾಹ್ಮಣರಲ್ಲಿ ಬಹಳವಾಗಿ ರಾಯರ ಮನೆಯಲ್ಲಿಯೇ ತಂಗುತ್ತಿದ್ದುದು ಅವರ ಸಹೃದಯತೆ ಮತ್ತು ಅತಿಥಿಸತ್ಕಾರದ ಆಸಕ್ತಿಯ

ದ್ಯೋತಕವಾಗಿತ್ತು. ಬೀರೂರು ರಾಮಣ್ಣನೆಂಬ ರಾಮಭಕ್ತರು ಪ್ರತಿವರ್ಷ ವಿಜೃಂಭಣೆಯಿಂದ ರಾಮೋತ್ಸವವನ್ನು ನಡೆಸುತ್ತಿದ್ದರು. ಅವರು ಮಹಾಜನರಿಂದ ಕಾಣಿಕೆಯನ್ನು ಸಂಗ್ರಹಿಸಲು ಬಂದು ಇವರ ಮನೆಯಲ್ಲಿಯೇ ತಂಗುತ್ತಿದ್ದರು. ಹೀಗೆ ಬಂದವರಿಗೆಲ್ಲ ಇಲ್ಲಿ ಸ್ವಾಗತ ಇದ್ದೇ ಇರುತ್ತಿತ್ತು. ಇಂತಹ ವಾತಾವರಣವನ್ನು ಸೃಜಿಸಿ ರಾಯರಂತಹ ಮಹೋನ್ನತ ವ್ಯಕ್ತಿಗಳನ್ನು ತಯಾರುಮಾಡುವುದರಲ್ಲಿ ಮನೆಯವರ ಪಾತ್ರ ಮಹತ್ವದ್ದಾಗಿದೆ. ಇಂತಹ ತಂದೆಯಿಂದಲೇ ರಾಯರು **'ಪಿತೃಮಾನ್'** ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಒಬ್ಬ ತಂದೆ ತನ್ನ ಮಗನನ್ನು ಉನ್ನತವಾದ ಜೀವನಕ್ಕೆ ಅಣಿಗೊಳಿಸಲು ಬೇಕಾದ ಎಲ್ಲ ಸಹಕಾರ ಮತ್ತು ಪರಿಸರವನ್ನು ಅವರ ತಂದೆಯವರು ಹೊಗಳಿಕೆಯಲ್ಲದೆ ಸಹಜವಾಗಿ ಸೃಷ್ಟಿಸಿದ್ದರು. ಇಂತಹ ತಂದೆಯವರನ್ನು ಅವರು ತಮ್ಮ 31ನೆಯ ವಯಸ್ಸಿನಲ್ಲಿ ಕಳೆದುಕೊಳ್ಳಬೇಕಾಯಿತು. ಅವರ ತಂದೆಯವರು ಕುಳಿತಿದ್ದವರು ಬೀದಿಯಲ್ಲಿ ಬಿದ್ದಿದ್ದ ಸಗಣಿಯ ತೊಪ್ಪೆಯನ್ನು ತೆಗೆದುಕೊಳ್ಳಲು ಎದ್ದವರು ಕಾಲು ಜಾರಿ ಬಿದ್ದುಬಿಟ್ಟರು. ಜ್ವರಬಂದು ಎರಡು ಮೂರು ದಿನಗಳಲ್ಲಿಯೇ ಕೊನೆಯ ಬಾರಿಗೆ ಗಂಗಾಪ್ರಾಶನ ಮಾಡಿ ಕಣ್ಣುಮುಚ್ಚಿದರಂತೆ! ಹುಡುಗರೆಲ್ಲ ಆಗ ಭಜ ಗೋವಿಂದಂ ಎಂಬ ಸ್ತೋತ್ರವನ್ನು ಹೇಳುತ್ತಿದ್ದರಂತೆ! ಇದಲ್ಲವೇ ಶರಣರ ಸಾವು!

ರಾಯರಿಗೆ ಮಾತ್ರ ತಂದೆಯವರ ಅಂತ್ಯದರ್ಶನ ಸಿಕ್ಕಲಿಲ್ಲ. ಅವರು ಆಗ ದಾವಣಗೆರೆಯಲ್ಲಿ ಉದ್ಯೋಗದಲ್ಲಿದ್ದರು. ವಿಷಯ ತಿಳಿದು ಊರಿಗೆ ಬರುವ ವೇಳೆಗೆ ಅಣ್ಣತಮ್ಮಂದಿರು ಉತ್ತರಕರ್ಮಗಳನ್ನು ನೆರವೇರಿಸಿಬಿಟ್ಟಿದ್ದರು. ಆಗ ಈಗಿನಂತೆ ವೇಗವಾಗಿ ವಿಷಯ ತಲಪುವ ವ್ಯವಸ್ಥೆಯಿರಲಿಲ್ಲ. ನಿಜವಾಗಿ ಹೇಳಬೇಕೆಂದರೆ, ಯಾವಾಗಲೂ ತಮ್ಮ ಮನದಲ್ಲಿಯೇ ಇರುವ, ತಮ್ಮ ನಡೆ-ನುಡಿಯಿಂದ ಅವರನ್ನು ಅನುಕ್ಷಣವೂ, ಸ್ಮರಿಸುವ ಶ್ರೀಗಳವರ ಮನದಲ್ಲಿ ಅವರು ಶಾಶ್ವತವಾಗಿ ಇರುವಾಗ ಅಂತ್ಯದರ್ಶನಕ್ಕೆ ಅರ್ಥವೇ ಇಲ್ಲವೆಂದು ಪರಮಾತ್ಮನ ಇಚ್ಛೆಯಿರಬಹುದು. ಆದರೂ ಬಾಹ್ಯವಿಯೋಗದ ದುಃಖ ಬಾಧಿಸದೇ ಇರದು. ತಮ್ಮ ಸ್ವಗ್ರಾಮದಿಂದ ಮತ್ತೆ ದಾವಣಗೆರೆಗೆ ಹಿಂದಿರುಗಿ ಹೋಗುವಾಗ ಅವರಿಗೆ ಗಡೀಪಾರು ಶಿಕ್ಷೆಯ ಅನುಭವವಾಯಿತೆಂದು ಅವರೇ ಹೇಳಿಕೊಂಡಿದ್ದಾರೆ. ಆದರೂ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಡೆಸಬೇಕಾದ ಪಾಠವನ್ನು ಅವರು ತಂದೆಯಿಂದಲೇ ಕಂಡುಕೊಂಡಿದ್ದರು. ಅದರಂತೆ ನಡೆಯುವುದೇ ಪಿತೃಋಣತೀರಿಸುವ ಉತ್ತಮಮಾರ್ಗ.

ತಾಯಿಯವರಾದ **ಲಕ್ಷ್ಮೀದೇವಮ್ಮನ**ವರು ಹಾಸನ ಜಿಲ್ಲೆಯ ಚೆನ್ನರಾಯ ಪಟ್ಟಣದ ಆಣತಿಯೆಂಬ ಗ್ರಾಮದವರು. ಹೆಸರಿಗೆ ತಕ್ಕಂತೆ ಅವರು ಗೃಹಲಕ್ಷ್ಮಿಯೇ

ಆಗಿದ್ದರು. ಅವರನ್ನು ಊರಿನವರು ಅಚ್ಚಣ್ಣಮ್ಮನವರೆಂದು ಕರೆಯುತ್ತಿದ್ದರು. ಬೆಳಗಿನ ಜಾವದಲ್ಲಿಯೇ ಎದ್ದು, ಉದಯರಾಗದಿಂದ ಆರಂಭಿಸಿ, ದನಕರುಗಳ ಸಂರಕ್ಷಣೆ, ತುಳಸೀಕಟ್ಟೆ ಮತ್ತು ಅಂಗಳವನ್ನು ಸಾರಿಸಿ, ರಂಗವಲ್ಲಿಗಳಿಂದ ಅಲಂಕರಿಸುವುದು, ಪೂಜೆ, ಅಡಿಗೆ ಎಲ್ಲದರಲ್ಲೂ ಅವರದು ಅಚ್ಚುಕಟ್ಟು. ನೀರುಸೇದುವುದು, ಭತ್ತ ಕುಟ್ಟುವುದು, ಹರಳೆಣ್ಣೆ-ಕೊಬ್ಬರಿಎಣ್ಣೆಗಳನ್ನು ಮಾಡಿಕೊಳ್ಳುವುದು, ಹೀಗೆ ಮನೆಗೆ ಬೇಕಾದ ಎಲ್ಲವನ್ನೂ ಆಳುಕಾಳುಗಳ ಸಹಾಯವಿಲ್ಲದೆಯೇ ಮಾಡಿಕೊಳ್ಳುತ್ತಿದ್ದರು. ಹೀಗೆ ತಮ್ಮ ಕೆಲಸವನ್ನು ತಾನೇ ಮಾಡಿಕೊಳ್ಳುವುದು ಮತ್ತು ಆಲಸ್ಯವಿಲ್ಲದೆ ದುಡಿಯುವುದು ತಾಯಿಯಿಂದ ರಾಯರು ಕಲಿತ ಪ್ರಥಮಪಾಠ. ಹೆಚ್ಚು ಓದಿದ ವರಲ್ಲದಿದ್ದರೂ, ಅವರು ಹೆಚ್ಚಿನ ತಿಳುವಳಿಕೆಯನ್ನು ಹೊಂದಿದ್ದರು. ಯಕ್ಷಗಾನದ ಪದಗಳನ್ನು ಹಾಡುತ್ತ, ಅರ್ಥವನ್ನು ವಿವರಿಸುತ್ತಿದ್ದರು. ಇದರಿಂದ ಅವರ ಮನೆ ಮಹಿಳಾಸಮಾಜದಂತೆ ಭಾಸವಾಗುತ್ತೆಂದು ರಾಯರೆ ಹೇಳಿರುತ್ತಾರೆ. ವಯಸ್ಸಾಗಿದ್ದರೂ ಅರಿಸಿನ ಕುಂಕುಮದಿಂದ ಶೋಭಿತವಾಗಿದ್ದ ತಾಯಿಯ ಮುಖ ವಿಶಿಷ್ಟವಾದ ಕಾಂತಿ ಯಿಂದ ಕೂಡಿತ್ತೆಂದು ಶ್ರೀಗಳವರು ಬಹಳ ಸಲ ನೆನಪಿಸಿಕೊಳ್ಳುತ್ತಿದ್ದರು. ನಿರಂತರ ವಾದ ದುಡಿಮೆಯಲ್ಲಿಯೂ ನಗುಮುಖದ ಅವರ ಪ್ರೇಮದ ತಂಬೆಳಕು ಎಲ್ಲರ ಮೇಲೂ ಸಮಾನವಾಗಿ ಬೀರಲ್ಪಡುತ್ತಿತ್ತು.

ರಾಯರಿಗೆ ತಂದೆಯವರಲ್ಲಿ ಗೌರವ ಹೆಚ್ಚಾಗಿದ್ದಂತೆ, ತಾಯಿಯವರಲ್ಲಿ ಪ್ರೀತಿ ಅತ್ಯಧಿಕವಾಗಿತ್ತು. ದೇವರಲ್ಲಿ ಭಕ್ತಿಯಿರಬೇಕೆಂಬ ಪಾಠವನ್ನು ತಾಯಿಯಿಂದಲೇ ಕಲಿತೆನೆಂದು ಅವರು ಹೇಳಿಕೊಂಡಿದ್ದಾರೆ. ತಂದೆತಾಯಿಯರಿಬ್ಬರೂ ದೇವರ ಸಮಾನ ರೆಂಬ ಭಾವನೆ ಇದಕ್ಕೆ ಪೋಷಕವಾಗಿದ್ದಿತು. ಮಾತಾಪಿತೃಭಕ್ತಿ ಜೀವನ ಪರ್ಯಂತ ತಮ್ಮ ಮನಸ್ಸಿನಲ್ಲಿ ನಿಶ್ಚಲವಾಗಿತ್ತೆಂದು ಅವರು ದೃಢವಾಗಿ ಅರಿತಿದ್ದರು. ಪ್ರತಿದಿನವೂ ಅವರನ್ನು ನಮಸ್ಕರಿಸದಿದ್ದರೂ, ವಿಶೇಷ ಸಂದರ್ಭಗಳಲ್ಲಿ ನಮಸ್ಕರಿಸುವಾಗ ಭಕ್ತಿಭಾವ ದಿಂದ ಅವರ ಮನ ತುಂಬಿ ಬರುತ್ತಿತ್ತು. ಬಾಲ್ಯದಲ್ಲಿ ಸಹಜವಾಗಿ ಅವರನ್ನು ಅನೇಕ ರೋಗಗಳು ಬಾಧಿಸುತ್ತಿದ್ದವು. ತಾಯಿಯವರ ಉಪಚಾರದಿಂದಲೇ ತಾವು ಅಷ್ಟು ದೀರ್ಘಕಾಲ ಬಾಳುವುದು ಸಾಧ್ಯವಾಯಿತೆಂದು ಅವರುಹೇಳಿಕೊಂಡಿರುತ್ತಾರೆ. ಕರ್ತವ್ಯತತ್ಪರತೆ, ಓದು ಬರಹದಲ್ಲಿ ವಿಶೇಷವಾದ ಆಸಕ್ತಿ, ಧರ್ಮದಲ್ಲಿ ಪ್ರೀತಿಯೇ ಮುಂತಾದ ಆದರ್ಶವಾದ ಗುಣಗಳನ್ನು ಅವರು ತಾಯಿಯ ಸಾಮೀಪ್ಯದಿಂದ ಮೈಗೂಡಿಸಿಕೊಂಡರು.

ಲಕ್ಷ್ಮೀದೇವಮ್ಮನವರು ತಮ್ಮ ಮಕ್ಕಳಿಗೆ ಮಾತ್ರವಲ್ಲದೆ ಬಡಬಗ್ಗರಿಗೂ ತಾಯಿಯಾಗಿದ್ದರೆಂದು ಹೇಳಬಹುದಾ. ಕೇಳಿದವರನ್ನು ಅವರು ಎಂದಿಗೂ ಬರಿಗೈಯಲ್ಲಿ ಕಳುಹಿಸುತ್ತಿರಲಿಲ್ಲ, ಜೊತೆಗೆ ಅನುಭವದ ತಿಳುವಳಿಕೆಯಿಂದ ಬಸುರಿ ಬಾಣಂತಿ ರೋಗಿಗಳಿಗೆ ಸಮಾಯಾನುಸಾರ ಔಷಧೋಪಚಾರಮಾಡುತ್ತಿದ್ದರು. ಪರೋಪಕಾರವು ಅವರ ಜೀವನವು ಅವಿಭಾಜ್ಯ ಅಂಗವಾಗಿತ್ತು. ಇಂತಹ ಜನನಿಯೇ ಮೊದಲ ಗುರುವಾದರೆ, ಜನನಿಯಿಂದ ಪಾಠ ಕಲಿತ ಜನರು ಧನ್ಯರಾಗುವುದರಲ್ಲಿ ಸಂದೇಹವಾಗಲಿ, ಆಶ್ಚರ್ಯವಾಗಲೀ ಇಲ್ಲ, ಹೀಗೆ ರಾಯರು **'ಮಾತೃಮಾನ್'** ಎನ್ನಿಸಿಕೊಂಡರು.

ಬಾಲ್ಯವು ಕಳೆದು ರಾಯರು ಉದ್ಯೋಗಿಯಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸಿದ ನಂತರವೂ ತಾಯಿಯ ಸಲಹೆ ಮತ್ತು ಬೆಂಬಲಗಳನ್ನು ಬಹಳವಾಗಿ ಆಶ್ರಯಿಸಿದ್ದರು. ಅವರು ಮೊದಲು ಉದ್ಯೋಗಕ್ಕೆ ಸೇರಿಕೊಂಡ ನಂತರ ಅವರ ತಾಯಿಯವರೇ ಜೊತೆಯಲ್ಲಿ ಬಂದು, ರಾಯರ ಮಡದಿಗೆ ಸಂಸಾರ ಹೂಡಲು ಬೇಕಾದ ತಿಳುವಳಿಕೆಯನ್ನು ನೀಡಿದವರು. ಇದೇ ಸಂದರ್ಭದಲ್ಲಿ ರಾಯರಿಗೆ ಹಿಮ್ಮಡಿಯಲ್ಲಿ ಹುಣ್ಣು ಆಗಿ, ಆಪರೇಷನ್‌ನಿಂದಲೂ ಗುಣವಾಗಲಿಲ್ಲ, ಆ ಊರಿನಲ್ಲಿ ಪ್ಲೇಗ್ ಹಾವಳಿಯೂ ಹೆಚ್ಚಾಗಿದ್ದುದರಿಂದ ಕೆಲಸಕ್ಕೆ ರಜಾ ಬರೆದು ಹಿಂದಿರುಗಿ ಬರುವಂತೆ ತಾಯಿಯವರೇ ಪ್ರೋತ್ಸಾಹ ನೀಡಿದರು. ಬೆಂಗಳೂರಿಗೆ ಹೋಗಿ ವಿದ್ಯಾಭ್ಯಾಸವನ್ನು ಮುಂದುವರಿಸುವಂತೆ ಅವರ ಸಲಹೆ ನೀಡಿದರು. ಹಣಕ್ಕಿಂತಲೂ ಮಗನ ವಿದ್ಯಾಭ್ಯಾಸ ಮುಖ್ಯವೆಂದು ಮನಗಂಡವರಾಗಿದ್ದರು ಆಕೆ.

ರಾಯರು ಶಾಲಾ ಉಪಾಧ್ಯಾಯರಾಗಿ ಹೊಳಲ್ಕೆರೆಯಲ್ಲಿದ್ದಾಗ, ತಾಯಿಯವರು ಕೆಲವು ದಿನಗಳು ಅಲ್ಲಿಗೆ ಬಂದು, ಮಗನ ಸಂಸಾರವನ್ನು ಕಣ್ಣು ತುಂಬಾ ನೋಡಿ ಆಶೀರ್ವದಿಸಿದರು. ಅದೇ ಕೊನೆಯ ಭೇಟಿಯೆಂಬುದನ್ನು ಆಕೆ ಮನಗಂಡಿರಬಹುದು. ಅಲ್ಲಿಂದ ಚಿಕ್ಕಮಗಳೂರಿನಲ್ಲಿದ್ದ ರಾಯರ ಅಣ್ಣನ ಮನೆಗೆ ಹೋದರು. ಅಲ್ಲಿ ಪ್ಲೇಗ್ ಉಪದ್ರವ ವಿಪರೀತವಾಗಿದ್ದು, ಎಲ್ಲರೂ ಊರ ಹೊರಗೆ ಷೆಡ್ಡಿನಲ್ಲಿ ವಾಸ ಮಾಡುತ್ತಿದ್ದರು. ತಾಯಿಯವರಿಗೆ ಪ್ಲೇಗ್ ಅಂಟಿರಲಿಲ್ಲ, ಆದರೆ ಮಿತಿಮೀರಿದ ಕೆಲಸ ಮತ್ತು ಸ್ವಲ್ಪ ಆಲಸಿಕೆಯಿಂದ ಅವರು ಅಲ್ಲಿಯೇ ಕೊನೆಯುಸಿರೆಳೆದರು. ಗಂಡ ಮತ್ತು ಮಕ್ಕಳ ಮುಂದೆ ಅನಾಯಾಸವಾಗಿ, ಮುತ್ತೈದೆಯಾಗಿ ಸ್ವರ್ಗಸ್ಥರಾಗುವ ಪುಣ್ಯ ಅವರದಾಗಿತ್ತು. ಅವರ ಕರ್ಮಾಂತರಗಳ ಸಂದರ್ಭದಲ್ಲಿ ಕಡೂರಿನ ರಂಗಶಾಸ್ತ್ರಿಗಳು ಗರುಡಪುರಾಣವನ್ನು ಓದಿದರಂತೆ; ಪಾಪಿಗಳಿಗೆ ಉಂಟಾಗುವ ನರಕಗಳ ಜೊತೆಗೆ, ಪುಣ್ಯವಂತರಿಗೆ ದೊರಕುವ ಸತ್ಫಲಗಳ ವರ್ಣನೆ ಯಥಾವತ್ತಾಗಿ ಪರಿಣಾಮಕಾರಿಯಾಗಿತ್ತು. ಪುಣ್ಯಪುರುಷರಾದ ಅಭಿನವಶಂಕರರೆನಿಸುವ ಯೋಗ್ಯತೆಯಲ್ಲಿ ಮಗನನ್ನು

ಪಡೆದು, ಅವರನ್ನು ಸರಿಯಾದ ಮಾರ್ಗದಲ್ಲಿ ತಿದ್ದಿ, ಬೆಳೆಸಿ, ತಮ್ಮ ಕರ್ತವ್ಯವನ್ನು ಯಥಾವತ್ತಾಗಿ ಪೂರೈಸಿದ ಆ ಮಹಾತಾಯಿಗೆ ಸ್ವರ್ಗಲೋಕವೂ ಕಡಮೆಯ ಫಲಪ್ರದವೇ ಅಲ್ಲವೇ?

ಹೀಗೆ ಶ್ರೀಗಳವರ ಮಾತಾಪಿತೃಗಳು ಮಗನನ್ನು ತಿದ್ದಿ, ಬೆಳೆಸಿ ಇಡೀ ಲೋಕಕ್ಕೆ ಬೆಳಕಾಗುವಂತೆ ಮಾಡಿದವರು. ಶೈಶವದಲ್ಲಿ ನಿಷ್ಠೆಯಿಂದ ವಿದ್ಯಾಭ್ಯಾಸ, ಗೃಹಸ್ಥಧರ್ಮದಲ್ಲಿ ಕರ್ತವ್ಯಗಳ ಸರಿಯಾದ ನಿರ್ವಹಣೆಯ ಜೊತೆಜೊತೆಗೆ ಕಾರ್ಯತತ್ಪರತೆಯನ್ನು ಮೈಗೂಡಿಸಿಕೊಳ್ಳುವಂತೆ ಆದುದು ಅವರಿಗೆ ತಾಯಿತಂದೆಯರಿಂದ ಬಂದ ಅಪೂರ್ವವಾದ ಆಸ್ತಿ. ಆ ಶಾಂತಿ ಮತ್ತು ತತ್ಪರತೆ ತಾಯಿಯಿಂದ ಮಗನಿಗೆ ಬಂದು, ಅವರ ಅಂತರಂಗದಲ್ಲಿ ನಿರಂತರವಾಗಿ ಸ್ಥಾಯೀಸ್ಥಾನವನ್ನು ಪಡೆದಿತ್ತು. ಆದ್ದರಿಂದಲೇ ಮುಂದೆ ಅವರು ತಮ್ಮಂದಿರು ಮಗಳಿಗೂ ಲಕ್ಷ್ಮೀದೇವಿಯೆಂದು ತಾಯಿಯ ಹೆಸರನ್ನೇ ಇಟ್ಟು ಅವರಂತೆಯೇ ಆಗಬೇಕೆಂದು ಬಯಸಿದರು. ದೈವಾನುಗ್ರಹದಿಂದ ಕೊನೆಯಲ್ಲಿ ಅವರ ಸೇವಾಕೈಂಕರ್ಯವನ್ನು ಕೈಗೊಂಡು, ಸ್ವಾಮೀಜಿಯವರನ್ನು ಮಗನಂತೆ, ಗುರುವಂತೆ ಸೇವಿಸಿದ ಮತ್ತೂರಿನ ಚೆನ್ನಕೇಶವಶಾಸ್ತ್ರಿಗಳ ಪುತ್ರಿಯವರ ಹೆಸರೂ ಲಕ್ಷ್ಮೀದೇವಮ್ಮನೇ ಆಗಿದ್ದಿತು.

ಶ್ರೀಗಳವರು, ಧರ್ಮವೆಂಬ ದೊಡ್ಡ ಆಸ್ತಿಯನ್ನು, ಓದುವುದರಲ್ಲಿರಬೇಕಾದ ನಿಷ್ಠೆಯನ್ನು, ಮಾತಾಪಿತೃಗಳಿಂದ ಧಾರಾಳವಾಗಿ ಪಡೆದು, ಅದಕ್ಕೆ ಸದಾ ಕೃತಜ್ಞರಾಗಿದ್ದರು. ಇಂದು ಅಧ್ಯಾತ್ಮಪ್ರಕಾಶಕಾರ್ಯಾಲಯ ಮತ್ತು ಪತ್ರಿಕೆಗಳ ಉತ್ತಮ ಕಾರ್ಯ ನಿರ್ವಹಿಸುವಂತೆ ಉಳಿದು ಬೆಳೆದಿರುವುದು ತಮ್ಮ ಮಾತಾಪಿತೃಗಳ ಬೆಂಬಲ ಮತ್ತು ಆಶೀರ್ವಾದಗಳ ಫಲವೆಂದು ಅವರ ದೃಢವಿಶ್ವಾಸವಾಗಿತ್ತು. ಇಲ್ಲದಿದ್ದರೆ ಇದನ್ನು ಹುಟ್ಟು ಹಾಕಿರುವುದಿರಲಿ, ಇಂತಹ ಅಪೂರ್ವ ಸಾಹಸದಲ್ಲಿ ತಮಗೆ ಪಾಲೂ ಸಿಕ್ಕುತ್ತಿರಲಿಲ್ಲವೆಂದು ಅವರು ಹೇಳುತ್ತಿದ್ದರು. ಚಿಕ್ಕಂದಿನಲ್ಲಿ ಸರಿಯಾದ ಬೀಜಾವಾಪವೇ ಮುಂದಿನ ವೃಕ್ಷದ ಗುಣಲಕ್ಷಣಗಳನ್ನು ನಿರ್ಧರಿಸುತ್ತದೆಯಲ್ಲವೇ?

ಶ್ರೀಗಳವರು ಪ್ರತಿ ಲೇಖನವನ್ನು ಬರೆಯುವಾಗಲೂ **'ಲಕ್ಷ್ಮೀನಾರಾಯಣಾಭ್ಯಾಂ ನಮಃ'** ಎಂದು ಲಕ್ಷ್ಮೀನಾರಾಯಣರಿಗೆ ಅದನ್ನು ಅರ್ಪಣೆಮಾಡುವ ವಾಡಿಕೆಯನ್ನು ಇಟ್ಟುಕೊಂಡಿದ್ದರು. ಇದು ಅವರ ತಾಯಿತಂದೆಯರ ಸ್ಮರಣೆಯೇ ಆಗಿತ್ತು. ಅಲ್ಲದೆ ತಂದೆತಾಯಿಯರಿಬ್ಬರೂ ಸಾಕ್ಷಾತ್ ಲಕ್ಷ್ಮೀನಾರಾಯಣರಂತೆಯೇ ಎಲ್ಲ ವಿಧದಲ್ಲಿಯೂ ಪರಸ್ಪರ ಅನುರೂಪರಾಗಿದ್ದುದರಿಂದ ಮಕ್ಕಳ ಮೇಲೆ ಆರೋಗ್ಯಕರವಾದ ಪರಿಣಾಮವನ್ನು ಬೀರಿದ್ದಲ್ಲದೆ, ಅವರ ಮುಂದಿನ ಜೀವನವನ್ನು ಉಪಯುಕ್ತವಾಗುವಂತೆ ರೂಪಿಸಲು ಸಾಧ್ಯವಾಯಿತು.

# ಅಧ್ಯಾಯ - 4

## ಬಾಲ್ಯ ಮತ್ತು ವಿದ್ಯಾಭ್ಯಾಸ

ಸ್ವಾತಂತ್ರ್ಯ ಪೂರ್ವಯುಗವಾದ ಅಂದಿನ ದಿನಗಳಲ್ಲಿ ವಿದ್ಯಾಭ್ಯಾಸ ಕಠಿನ ತಮವೂ ಪ್ರಯಾಸದಾಯಕವೂ ಆಗಿತ್ತು. ಅದರಲ್ಲಿಯೂ ಗ್ರಾಮಾಂತರ ಪ್ರದೇಶ ಗಳಲ್ಲಿ ಕನಿಷ್ಠಸೌಲಭ್ಯವೂ ಇರಲಿಲ್ಲ. ಹಳ್ಳಿಯಲ್ಲಿದ್ದ ಒಬ್ಬರೇ ಉಪಾಧ್ಯಾಯರು ತಮ್ಮ ಮನೆಯ ಜಗುಲಿಯ ಮೇಲೇ ಶಾಲೆ ನಡೆಸುತ್ತ, ಮಕ್ಕಳಿಗೆ ಪಾಠವನ್ನು ಬೋಧಿಸು ತ್ತಿದ್ದರು. ವರ್ಗವಿಭಾಗಗಳಾಗಲೀ, ಬೋಧನಾ ಸಾಮಾಗ್ರಿಗಳಾಗಲೀ ಇರುತ್ತಿರಲಿಲ್ಲ. ಹೆಚ್ಚು ವಿಷಯಗಳನ್ನು ಕಂಠಪಾಠ ಮಾಡುತ್ತಿದ್ದರು. ನಿಯಮಿತವಾದ ಪಠ್ಯಕ್ರಮ ವಾಗಲೀ, ವೇಳಾಪಟ್ಟಿಯಾಗಲೀ ಇರುತ್ತಿರಲಿಲ್ಲ. ಮಕ್ಕಳು ಮರಳಿನ ಮೇಲೆ ಅಕ್ಷರ ಗಳನ್ನು ತಿದ್ದಿ ಕಲಿಯುತ್ತಿದ್ದರು. ಇವುಗಳನ್ನು ಚರಂತಮಠಗಳೆಂದು ಕರೆಯುತ್ತಿದ್ದರು. ಅಲ್ಲಿಯೇ ಶ್ರೀಗಳವರ ಬಾಲ್ಯವಿದ್ಯಾಭ್ಯಾಸ ಆರಂಭವಾಯಿತು.

ಕಾಲಕ್ರಮದಲ್ಲಿ ಆ ಗ್ರಾಮದಲ್ಲಿಯೂ ಸರ್ಕಾರಿ ಶಾಲೆ ಆರಂಭವಾಯಿತು. ಮುದ್ರಿತಪುಸ್ತಕ, ಕಪ್ಪುಹಲಗೆ ಮುಂತಾದ ಸಾಧನಗಳು ಬಳಕೆಗೆ ಬಂದವು. ಹೀಗೆ ಪುರಾತನ ಮತ್ತು ಆಧುನಿಕ ವಿಧಾನಗಳೆರಡರಲ್ಲಿಯೂ ಶ್ರೀಗಳವರ ಪ್ರಾರಂಭಿಕ ವಿದ್ಯಾಭ್ಯಾಸ ನಡೆಯಿತು. ಎರಡೂ ಪದ್ಧತಿಗಳ ಉತ್ತಮ ವಿಷಯಗಳನ್ನು ಅವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರು. ಶಾಲೆಗೆ ಸೇರುವಾಗ ಅವರ ಹೆಸರನ್ನು 'ವೈ. ಸುಬ್ಬರಾಯ' ಎಂದು ನಮೂದಿಸಲಾಯಿತು. ಸಂನ್ಯಾಸಸ್ವೀಕಾರ ಪರ್ಯಂತ ಅವರು ಇದೇ ಹೆಸರಿನಿಂದ ಕರೆಯಲ್ಪಡುತ್ತಿದ್ದರು. ಅವರ ಪ್ರಾರಂಭಿಕ ವೇದಾಂತ ಕೃತಿಗಳು ಇದೇ ಹೆಸರಿನಿಂದ ಪ್ರಕಟವಾಗಿರುವುದನ್ನು ಇಂದೂ ಕಾಣಬಹುದಾಗಿದೆ.

ಬ್ರಾಹ್ಮಣ ಸಮಾಜದಲ್ಲಿ ಉಪನಯನ ಸಂಸ್ಕಾರವು ಒಂದು ಪ್ರಮುಖ ಘಟ್ಟ ವಾಗಿದೆ. ಶಾಲೆಯ ವಿದ್ಯಾಭ್ಯಾಸವು ಮೊದಲೇ ಆರಂಭವಾದರೂ, ವೈದಿಕವಿಷಯದ ಅಭ್ಯಾಸಕ್ಕೆ ಉಪನಯನ ಸಂಸ್ಕಾರದ ಅವಶ್ಯಕತೆಯಿದೆ. ಮೊದಲಿನಿಂದಲೂ, ವೈದಿಕ ವಿಷಯಗಳು ಬಾಲಕ ಸುಬ್ಬರಾಯರನ್ನು ಆಕರ್ಷಿಸುತ್ತಿತ್ತು. ಸಂಸ್ಕೃತದ ಮಂತ್ರಗಳು ಅವರಿಗೆ ಅರ್ಥವಾಗದಿದ್ದರೂ ಅದರ ಮಾಧುರ್ಯ ಅವರ ಕುತೂಹಲವನ್ನು ಕೆರಳಿಸುತ್ತಿತ್ತು. ಅವೆಲ್ಲವೂ ಸಂಸ್ಕೃತ ಭಾಷೆಯಲ್ಲಿ ಇರುವುದೆಂದು ತಿಳಿದಾಗ, ಆ

ಭಾಷೆಯನ್ನು ಕಲಿಯಲೇಬೇಕೆಂಬ ಆಸೆ ಚಿಕ್ಕವಯಸ್ಸಿನಲ್ಲಿಯೇ ಅವರ ಮನಸ್ಸಿನಲ್ಲಿ ಬೇರೂರಿತು. ಅದಕ್ಕೆ ತಕ್ಕಂತೆ ಮನೆಯ ವಾತಾವರಣವೂ ಸಂಪ್ರದಾಯನಿಷ್ಠವಾಗಿದ್ದುದರಿಂದ, ಅವರ ಸಂಸ್ಕಾರಕ್ಕೆ ಸೂಕ್ತ ವಾತಾವರಣ ನಿರ್ಮಾಣವಾಗಿತ್ತು.

ಉಪನಯನ ಕಾಲದಲ್ಲಿ ಶ್ರೀಗಳವರ ವಯಸ್ಸು ಹನ್ನೊಂದುವರ್ಷವಾಗಿತ್ತು. ಅಷ್ಟು ಹೊತ್ತಿಗಾಗಲೇ ಅವರಿಗೆ ತಂದೆಯಿಂದ ಸಾಕಷ್ಟು ಸಂಸ್ಕೃತ ಸ್ತೋತ್ರಗಳ ಪರಿಚಯವಾಗಿತ್ತು. ಪ್ರತಿದಿನ ಅವರ ತಂದೆಯವರು ಮಕ್ಕಳಿಗೆಲ್ಲ ವಿಷ್ಣುಸಹಸ್ರನಾಮ ಸ್ತೋತ್ರ, ಇಂದ್ರಾಕ್ಷಿ, ಶಿವಕವಚ ಮುಂತಾದ ಅನೇಕ ಸ್ತೋತ್ರಗಳನ್ನು ಹೇಳಿಕೊಡುತ್ತಿದ್ದರು. ಈ ಎಲ್ಲ ಸ್ತೋತ್ರಗಳೂ ಅವರಿಗೆ ಬಾಯಿಪಾಠವಾಗಿ ಬಿಟ್ಟಿದ್ದವು. ಅವುಗಳನ್ನು ಹೇಳುವುದರಲ್ಲಿ ಅವರಿಗೆ ಅತೀವವಾದ ಆಸಕ್ತಿಯಿತ್ತು. ಉಳಿದ ಹುಡುಗರಿಗಿಂತ ಅವರು ಈ ರೀತಿ ಸ್ತೋತ್ರಗಳನ್ನು ಬಹಳ ಸುಲಭವಾಗಿ ಮತ್ತು ಆಸಕ್ತಿಯಿಂದ ಕಲಿಯುತ್ತಿದ್ದರು. ಈ ಅಭ್ಯಾಸ ಅವರ ಮುಂದಿನ ನಿಯಮಿತ ವಿದ್ಯಾಭ್ಯಾಸ ಮತ್ತು ಶಿಸ್ತಿಗೆ ನಾಂದಿಯಾಯಿತು. ಉಪನಯನದಲ್ಲಿ ಪುರೋಹಿತರು ಉಚ್ಚರಿಸುತ್ತಿದ್ದ ಮಂತ್ರಗಳ ಅರ್ಥವನ್ನು ತಿಳಿಯಲು ಅವರ ಮನ ಹಾತೊರೆಯುತ್ತಿತ್ತು.

## ಪರಸ್ಥಳದಲ್ಲಿ ವಿದ್ಯಾಭ್ಯಾಸ

ಉಪನೀತರಾದ ಸುಬ್ಬರಾಯರು ಮೂಡಿಗೆರೆ ಪಟ್ಟಣದಲ್ಲಿ ಸಹೋದರಿಯ ಮನೆಯಲ್ಲಿದ್ದುಕೊಂಡು ಮಾಧ್ಯಮಿಕವಿದ್ಯಾಭ್ಯಾಸವನ್ನು ಆರಂಭಿಸಿದರು. ಸ್ವಲ್ಪ ಕಾಲದ ನಂತರ ತರೀಕೆರೆಯಲ್ಲಿದ್ದ ಅಣ್ಣನ ಮನೆಗೆ ಹೋದರು. ಹೀಗೆ ವಿದ್ಯಾಭ್ಯಾಸವನ್ನು ಮುಂದುವರಿಸಿ, ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಧನಾಭಾವದಿಂದ ಅವರ ವಿದ್ಯಾಭ್ಯಾಸ ಅತಿಕಷ್ಟದಿಂದ ನಡೆಯುತ್ತಿತ್ತು. ಆದರೂ ಮುಂದಿನ ವರ್ಷ ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ, ತಮ್ಮ 15ನೆಯ ವಯಸ್ಸಿನಲ್ಲಿ ಆಂಗ್ಲಭಾಷೆಯ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮಶ್ರೇಣಿಯಲ್ಲಿ ಉತ್ತೀರ್ಣರಾದರು.

ಮುಂದೆ ಪ್ರೌಢಶಾಲೆಯ ವಿದ್ಯಾಭ್ಯಾಸಕ್ಕಾಗಿ ಅವರು ತಮ್ಮ ಅಣ್ಣಂದಿರ ಜೊತೆ ಚಿಕ್ಕಮಗಳೂರು ನಗರವನ್ನು ಸೇರಿದರು. ಅಲ್ಲಿ ಹರಿಯಪ್ಪನೆಂಬ ನ್ಯಾಯವಾದಿಗಳಿದ್ದರು. ಅವರು ಮಹಾಭಾಗವತರೂ ಆಗಿದ್ದರು. ಅವರು ತಮ್ಮ ಮನೆಯಲ್ಲಿ ಈ ವಿದ್ಯಾರ್ಥಿಗಳಿಗೆ ವಸತಿಸೌಕರ್ಯವನ್ನು ಕಲ್ಪಿಸಿಕೊಟ್ಟರು. ಆದರೆ ಊಟದ ಸಮಸ್ಯೆ ಪರಿಹಾರವಾಗಲಿಲ್ಲ. ಅಂದಿನ ಕಾಲದಲ್ಲಿ ಬಹಳಷ್ಟು ವಿದ್ಯಾರ್ಥಿಗಳು ಅನ್ನವ್ಯವಸ್ಥೆಗಾಗಿ

ವಾರಾನ್ನದ ವಿಧಾನವನ್ನು ಅವಲಂಬಿಸುತ್ತಿದ್ದರು. ಈ ಬಾಲಕನೂ ಅದೇ ವಿಧಾನವನ್ನು ಆಶ್ರಯಿಸಬೇಕಾಯಿತು.

**'ವಿದ್ಯಾತುರಾಣಾಂ ನ ಸುಖಂ ನ ನಿದ್ರಾ'** ಎಂಬ ಉಕ್ತಿಯು ಶ್ರೀಗಳವರಿಗೆ ನೂರಕ್ಕೆ ನೂರರಷ್ಟು ಅನ್ವಯವಾಗುತ್ತಿತ್ತು. ವಾರದ ಪ್ರತಿಯೊಂದು ದಿನವೂ ಬೇರೆ ಬೇರೆ ಮನೆಗಳಿಗೆ ಊಟಕ್ಕೆ ಹೋಗಬೇಕು. ಶಾಲೆಗೆ ಸರಿಯಾಗಿ ಹಾಜರಾಗಬೇಕು. ಪಾಠಗಳನ್ನು ನಿಯಮಿತವಾಗಿ ಓದಬೇಕು. ಧನದ ಅಭಾವದಿಂದ ಅವರ ಬಳಿ ಬೇಕಾದ ಪುಸ್ತಕಗಳೂ ಇರುತ್ತಿರಲಿಲ್ಲ, ಇಂದಿನಂತೆ ಗ್ರಂಥಾಲಯದ ಸೌಕರ್ಯಗಳೂ ಇರುತ್ತಿರಲಿಲ್ಲ. ಜೊತೆಯ ಹುಡುಗರು ಇವರಂತೆಯೇ ಬೇರೆ ಬೇರೆ ಗ್ರಾಮಗಳಿಂದ ಬಂದು ಕಷ್ಟಪಟ್ಟು ವಿದ್ಯಾಭ್ಯಾಸ ಮಾಡುತ್ತಿದ್ದರು. ಯಾರಿಗೆ ಯಾರೂ ಹೆಚ್ಚು ಸಹಾಯ ಮಾಡುವ ಸ್ಥಿತಿಯಲ್ಲಿ ಇರುತ್ತಿರಲಿಲ್ಲ. ಆದರೆ ವಿದ್ಯಾರ್ಥಿಗಳು ತಮ್ಮ ಪೋಷಕರ ಕಷ್ಟವನ್ನು ಅರ್ಥಮಾಡಿಕೊಂಡು ಶ್ರಮವಹಿಸಿ ಕಲಿಯುತ್ತಿದ್ದರು. ಈ ಸಂದರ್ಭದಲ್ಲಿ ಅವರ ಶಾಲೆಯ ಮುಖ್ಯೋಪಾಧ್ಯಾಯರಾದ ವಿ. ಸುಬ್ರಹ್ಮಣ್ಯಅಯ್ಯರ್‌ರು ವಿದ್ಯಾರ್ಥಿಗಳಿಗೆ ವರಪ್ರಸಾದ ರೂಪವಾಗಿ ಅನೇಕ ರೀತಿಯ ಸಹಾಯವನ್ನು ಮಾಡಿದರು. ಅವರು ಪ್ರತಿಕ್ಷಣವೂ ವಿದ್ಯಾರ್ಥಿಗಳ ಅಭಿವೃದ್ಧಿಯಲ್ಲಿಯೇ ದತ್ತದೃಷ್ಟಿಯುಳ್ಳವರೂ, ಸಂಸ್ಕೃತಭಾಷೆಯಲ್ಲಿ ಸಾಕಷ್ಟು ಪರಿಣತರೂ, ನಿತ್ಯಕರ್ಮಾನುಷ್ಠಾನಗಳಲ್ಲಿ ಅನಿತರ ಸಾಧಾರಣವಾದ ದೀಕ್ಷಾಬದ್ಧರೂ ಆಗಿದ್ದರು. ಅಯ್ಯರ್‌ರವರ ಬೋಧನಾ ವಿನ್ಯಾಸವು ಮತ್ತು ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಸಮಯೋಚಿತವಾದ ಸಹಾಯವು ಅವರ ವಿದ್ಯಾಭ್ಯಾಸ ಮತ್ತು ಪುನರ್ಮನನಶಕ್ತಿಗೆ ಪ್ರೇರಕವಾಗಿದ್ದವು. ಅವರಿಂದ ಕೊಡಲ್ಪಡುತ್ತಿದ್ದ ಉತ್ತೇಜನವು ಕಾಲಿದಾಸನ ಉಕ್ತಿಯನ್ನು ನೆನಪಿಗೆ ತರುತ್ತದೆ. ಇಂತಹ ಉಪಾಧ್ಯಾಯರುಗಳ ಪ್ರೋತ್ಸಾಹದಿಂದ ಪರಿಮಿತವಾದ ಸೌಕರ್ಯಗಳ ಮಧ್ಯದಲ್ಲಿಯೇ ಸುಬ್ಬರಾಯರು ಸಫಲಪ್ರಯತ್ನರಾದರು. ಭೂಗೋಳವೊಂದನ್ನುಳಿದು, ಆಂಗ್ಲಭಾಷೆ, ಗಣಿತವೇ ಮುಂತಾದ ಉಳಿದ ಎಲ್ಲ ಪಠ್ಯವಿಷಯಗಳಲ್ಲಿ ಅನಿತರಸಾಧಾರಣಸಿದ್ಧಿಯನ್ನು ಸಾಧಿಸಿದರು. ವಿಶೇಷವಾಗಿ ಕನ್ನಡಭಾಷೆಯಲ್ಲಿ ಅವರ ಪ್ರಾವೀಣ್ಯತೆ ಅಸಾಧಾರಣವಾಗಿದ್ದಿತು. ಅವರ ಗುರುಗಳಾಗಿದ್ದ ಕನ್ನಡ ವಿದ್ವಾನ್ ಕೃಷ್ಣಾಚಾರ್ಯರು ಭಾಷೆಯ ಸ್ವರೂಪ ಮತ್ತು ಮಹತ್ವವನ್ನು ಮನಮುಟ್ಟುವಂತೆ ವಿವರಿಸಿ ಬಾಲಕರ ಆಸಕ್ತಿಯನ್ನು ಹೆಚ್ಚಿಸುತ್ತಿದ್ದರು. ಅತಿಯಾದ ಧನಾಭಾವವನ್ನು ಎದುರಿಸುತ್ತಿದ್ದರೂ ಸುಬ್ಬರಾಯರು, **'ಕರ್ನಾಟಕ ಕಾವ್ಯಕಲಾನಿಧಿ'** ಎಂಬ ಮಾಸ ಪತ್ರಿಕೆಯನ್ನು ಖರೀದಿಸಿ ಓದುತ್ತಿದ್ದರು. ಇದು ಅವರ

ಜ್ಞಾನದಾಹದ ದ್ಯೋತಕವಾಗಿದೆ. ಅವರ ಸ್ಮರಣಶಕ್ತಿಯೂ ಅದ್ಭುತವಾಗಿದ್ದಿತು. 'ನೆಸ್ ಫೀಲ್ಡ್' ಎಂಬುವವನ ವ್ಯಾಕರಣ ಗ್ರಂಥವು ಅವರಿಗೆ ಪೂರ್ಣವಾಗಿ ಕಂಠಸ್ಥವಾಗಿತ್ತು. **'ಆಚಾರ್ಯವಾನ್ ಪುರುಷೋ ವೇದ'** ಎಂಬ ಮಾತಿನಂತೆ ಬಾಲಕನು ಬೀಜಗಣಿತ, ರೇಖಾಗಣಿತಗಳಂತಹ ವಿಶಿಷ್ಟ ವಿಷಯಗಳಲ್ಲಿಯೂ ಹೆಚ್ಚಿನ ಕೌಶಲ್ಯವನ್ನು ಹೊಂದಿದನು. ಅವರ ಗುರುಗಳಾಗಿದ್ದ ವೆಂಕಟಸ್ವಾಮಿ ಅಯ್ಯರ್, ಟಿ.ವಿ. ಕೃಷ್ಣರಾಯರು ಮುಂತಾದ ವರೆಲ್ಲರೂ ಅಧ್ಯಯನ ಮತ್ತು ಅಧ್ಯಾಪನಗಳಲ್ಲಿ ಪ್ರತಿಷ್ಠಿತರಾಗಿದ್ದರು. ವಿದ್ಯಾರ್ಥಿಯಾದ ಸುಬ್ಬರಾಯರು ಅಂತಹ ಶಿಕ್ಷಣವೇತ್ತರಿಂದ ಪ್ರಭಾವಿತರಾಗಿ, **'ಶಿಷ್ಯಾದಿಚ್ಛೇತ್ ಪರಾಜಯಂ'** ಎಂಬ ಮಾತನ್ನು ಪ್ರಮಾಣೀಕರಿಸಿದರು. ವಿಶೇಷವಾಗಿ ಮುಖ್ಯೋಪಾಧ್ಯಾಯರಾದ ಸುಬ್ರಹ್ಮಣ್ಯ ಅಯ್ಯರ್‌ರವರ ಸಹಕಾರದಿಂದ 'ಮೆಟ್ರಿಕ್ಯೂಲೇಷನ್' ಪರೀಕ್ಷೆಯಲ್ಲಿ ಪ್ರಥಮಶ್ರೇಣಿಯಲ್ಲಿ ಉತ್ತೀರ್ಣರಾದರು.

## ಬೆಂಗಳೂರು ನಗರದಲ್ಲಿ ಉಚ್ಚಶಿಕ್ಷಣ

ಪ್ರೌಢ ವಿದ್ಯಾಭ್ಯಾಸವನ್ನು ಪೂರೈಸಿದ ನಂತರ, ಅವರು ಇನ್ನೂ ಹೆಚ್ಚು ಓದಲು ಆಸಕ್ತರಾಗಿದ್ದರು. ಸ್ವಾತಂತ್ರ್ಯಪೂರ್ವದ ಆ ಕಾಲದಲ್ಲಿ ಬೆಂಗಳೂರುನಗರವೊಂದನ್ನುಳಿದು ಉಳಿದೆಲ್ಲಿಯೂ ಉನ್ನತವಿದ್ಯಾಭ್ಯಾಸಕ್ಕೆ ಅವಕಾಶವಿರಲಿಲ್ಲ, ರಾಯರ ಮನೆಯ ಆರ್ಥಿಕ ಪರಿಸ್ಥಿತಿಯೂ ಉತ್ತೇಜಕವಾಗಿರಲಿಲ್ಲ, ಆದರೂ ವಿದ್ಯಾಭ್ಯಾಸವನ್ನು ಮುಂದುವರಿಸುವ ಉತ್ಕಟೇಚ್ಛೆಯಿಂದ ರಾಯರು ಬೆಂಗಳೂರು ನಗರದಲ್ಲಿ 'ಎಫ್.ಎ' ತರಗತಿಗೆ ಪ್ರವೇಶವನ್ನು ಪಡೆದರು. ಅಲ್ಲಿ ಪ್ರಾಧ್ಯಾಪಕರಾಗಿದ್ದ ಲೆನಾರ್ಡ ಎಂಬುವರು ಆಂಗ್ಲ ಗದ್ಯಭಾಗವನ್ನೂ, ಟೇಟ್ ಎಂಬುವವರು ಪದ್ಯಭಾಗವನ್ನೂ ಬೋಧಿಸುತ್ತಿದ್ದರು. ಅವರುಗಳ ಅಧ್ಯಾಪನವಿಧಾನದಿಂದ ಪ್ರಭಾವಿತರಾದ ಸುಬ್ಬರಾಯರು ಆಂಗ್ಲಭಾಷೆಯ ಮೇಲೆ ಒಳ್ಳೆಯ ಪ್ರಾವೀಣ್ಯವನ್ನು ಸಂಪಾದಿಸಿದರು. ಅದರಿಂದ ಮುಂದೆ ಆಂಗ್ಲಭಾಷೆಯಲ್ಲಿ ಅದ್ವೈತಗ್ರಂಥಗಳನ್ನು ರಚಿಸುವುದು ಅವರಿಗೆ ಸಾಧ್ಯವಾಯಿತು. ಇಲ್ಲಿಯ ಛಾತ್ರದಶೆಯಲ್ಲಿ ರಾಯರಿಗೆ ಎರಡು ರೂಪಾಯಿಗಳ ಮಾಸಿಕ ವಿದ್ಯಾರ್ಥಿವೇತನವೂ ಲಭ್ಯವಾಯಿತು. ಎರಡು ಮನೆಗಳಿಗೆ ಹೋಗಿ ಬಾಲಕರಿಗೆ ಪಾಠಹೇಳಿ ಶುಲ್ಕರೂಪದಿಂದ ನಾಲ್ಕು ರೂಪಾಯಿಗಳನ್ನು ಸಂಪಾದಿಸುತ್ತಿದ್ದರು. ಇದರಿಂದ ಬೇಕಾದ ಪುಸ್ತಕ ಮತ್ತು ಬರೆಯುವ ಸಾಮಗ್ರಿಗಳನ್ನು ಕೊಂಡುಕೊಳ್ಳಲು ಸಾಧ್ಯವಾಗುತ್ತಿತ್ತು. **'ಧೀರಾಃ ತರಂತಿ ಆಪದಂ'** ಎಂಬ ಸೂತ್ರದಂತೆ ಪ್ರಯತ್ನಶೀಲರಾದ ಸುಬ್ಬರಾಯರು ಪ್ರಥಮ ವರ್ಷದ ಅಭ್ಯಾಸವನ್ನು ಮುಗಿಸುವುದರಲ್ಲಿ ಸಫಲರಾದರು.

ರಾಯರು ವಿದ್ಯಾಭ್ಯಾಸದ ವಿಷಯದಲ್ಲಿ ಇಷ್ಟು ಶ್ರದ್ಧಾಳುಗಳಾಗಿದ್ದರೂ ಅವರ ಆರ್ಥಿಕಸ್ಥಿತಿಯಿಂದಾಗಿ ಅದು ಕಷ್ಟಸಾಧ್ಯವಾಗಿತ್ತು. ಆದ್ದರಿಂದ ರಜೆಯ ಕಾಲದಲ್ಲಿ ಏನಾದರೂ ಉದ್ಯೋಗವನ್ನು ಮಾಡಿ, ಮುಂದಿನ ಅಭ್ಯಾಸಕ್ಕೆ ಅನುವು ಮಾಡಿಕೊಳ್ಳ ಬೇಕೆಂದು ಅವರು ಬಯಸಿದರು. ಈ ಪ್ರಯತ್ನದಿಂದ, ಅವರಿಗೆ ಕಡೂರಿನಲ್ಲಿ ಆರೋಗ್ಯಪರಿವೀಕ್ಷಕರ ಹುದ್ದೆಯು ದೊರಕಿತು. ಹೀಗೆ ಸ್ವಲ್ಪ ದಿನ ಈ ಉದ್ಯೋಗ ವನ್ನು ಮಾಡಿ, ಶ್ರಮಾರ್ಜಿತವಾದ ಹಣದಿಂದ, ಎರಡನೆಯ ವರ್ಷದ ಅಭ್ಯಾಸವನ್ನು ಮುಂದುವರಿಸಲು ಮತ್ತೆ ಬೆಂಗಳೂರನ್ನು ಸೇರಿದರು. ಈ ವರ್ಷ ಛಾತ್ರವೃಂದದ ಆದರಪಾತ್ರರಾಗಿದ್ದ ಮತ್ತು ಸ್ವಯಂ ಶಿಕ್ಷಣತಜ್ಞರಾಗಿದ್ದ ಕೃಷ್ಣಸ್ವಾಮಿಅಯ್ಯರ್‌ರು, ಸುಬ್ಬರಾಯರಿಗೆ ತಮ್ಮ ಮನೆಯಲ್ಲಿ ವಾಸಸ್ನಾನಾದಿಗಳ ಸೌಕರ್ಯವನ್ನು ಒದಗಿಸಿದರು. **'ದೈವಂ ಮಾನುಷರೂಪೇಣ ಕಲೌಕಾಲೇ ಅಕ್ಷಿಗೋಚರಂ'** (ಕಲಿಯುಗದಲ್ಲಿ ದೇವರು ಮನುಷ್ಯನ ರೂಪದಲ್ಲಿಯೇ ಕಾಣುತ್ತಾನೆ.) ಎಂಬ ಮಾತಿನ ಸಾರ್ಥಕತೆ ಯನ್ನು ಸುಬ್ಬರಾಯರು ಅಯ್ಯರ್ ಮಹಾನುಭಾವರ ವಿಷಯದಲ್ಲಿ ಪ್ರತ್ಯಕ್ಷವಾಗಿ ಕಂಡುಕೊಂಡರು.

ವಿದ್ಯಾಪಕ್ಷಪಾತಿಗಳಾದ ಅನೇಕ ಮಹಾನುಭಾವರುಗಳ ಸಹೃದಯತೆ ಮತ್ತು ಔದಾರ್ಯದ ಫಲವಾಗಿ ರಾಯರು ಉನ್ನತಶಿಕ್ಷಣಕ್ಷೇತ್ರದಲ್ಲಿಯೂ ಹೆಸರು ಗಳಿಸಿದರು. ಅಧ್ಯಯನ ಮತ್ತು ಅಧ್ಯಾಪನಗಳೆರಡರಲ್ಲಿಯೂ ಚತುರರಾದ ಅವರಿಗೆ ತಾವೂ ಆದರ್ಶ ಶಿಕ್ಷಕರಾಗಬೇಕೆಂಬುದೇಲಕ್ಷ್ಯವಾಗಿದ್ದಿತು. ಆದರೆ ಈ ಸಂದರ್ಭದಲ್ಲಿ ವಿಧಿಯು ವಿರುದ್ಧವಾಗಿದ್ದಿತು. ಜಾಗ್ರತವಾಗಿದ್ದರೂ ಕೃತಾಂತನು ಬಲವತ್ತರನಲ್ಲವೆ? ಅಂತೆಯೇ ರಾಯರ ಹಿರಿಯ ಅಣ್ಣಂದಿರು ಈ ಸಮಯದಲ್ಲಿ ಸ್ವರ್ಗಸ್ಥರಾದರು. ಇದರಿಂದ ಮನೆಯ ಆರ್ಥಿಕ ಸ್ಥಿತಿ ಇನ್ನೂ ಹದಗೆಟ್ಟಿತು. ಆದರೂ ವಿದ್ಯಾಕಾಂಕ್ಷಿಯಾದ ರಾಯರಿಗೆ ಅರ್ಧದಲ್ಲಿ ಶಿಕ್ಷಣವನ್ನು ತ್ಯಜಿಸಲು ಮನಸ್ಸಿರಲಿಲ್ಲ. ಈ ರೀತಿ ಕಠಿಣ ಸಂದರ್ಭ ದಲ್ಲಿಯೂ ತಮ್ಮ ಅಭ್ಯಾಸವನ್ನು ಮುಂದುವರಿಸಲು ಪ್ರಯತ್ನಿಸಿದರು. ಆದರೂ ದುರ್ದೈವದಿಂದ ಅವರು ವಿದ್ಯಾಭ್ಯಾಸವನ್ನು ನಿಲ್ಲಿಸಿ ಉದ್ಯೋಗವನ್ನು ಅರಸ ಬೇಕಾಯಿತು.

* * * * *

# ಅಧ್ಯಾಯ - 5

## ಸಂಸ್ಕೃತ ಮತ್ತು ವೇದಾಂತದ ವಿದ್ಯಾರ್ಥಿಯಾಗಿ ಸ್ವಾಮೀಜಿಯವರು

**ಅನೇಕಸಂಶಯೋಚ್ಛೇದಿ ಪರೋಕ್ಷಾರ್ಥಸ್ಯ ದರ್ಶಕಮ್ ।**
**ಸರ್ವಸ್ಯ ಲೋಚನಂ ಶಾಸ್ತ್ರಂ ಯಸ್ಯ ನಾಸ್ತ್ಯಂಧ ಏವ ಸಃ ॥**

ಅನೇಕ ಸಂಶಯಗಳನ್ನು ಚೂರುಮಾಡುವ, ಪರೋಕ್ಷವಾದ ವಿಷಯವನ್ನು ತಿಳಿಸಿ ಕೊಡುವ ಎಲ್ಲರ ನಿಜವಾದ ಕಣ್ಣುಗಳೆಂದರೆ ಶಾಸ್ತ್ರವು, ಇದು ಯಾರಲ್ಲಿ ಇರುವುದಿಲ್ಲವೋ ಅವನು ಕುರುಡನೇ ಸರಿ.

ಸುಬ್ಬರಾಯರ ಸಂಸ್ಕೃತ ಛಾತ್ರವೃತ್ತಿಯು ತಂದೆಯ ಬಳಿಯಿಂದಲೇ ಆರಂಭವಾಯಿತು. ಉಪನೀತನಾದ ಬಾಲಕನಿಗೆ ತಂದೆಯು ಸಂಧ್ಯಾವಂದನಾದಿ ಮಂತ್ರಗಳು, ಹರಿಹರರ ಅಷ್ಟೋತ್ತರ ಶತನಾಮಗಳು, ಇಂದ್ರಾಕ್ಷಿ ಶಿವಕವಚಾದಿ ಸ್ತೋತ್ರಗಳನ್ನು ಹೇಳಿಕೊಡುತ್ತಿದ್ದರು. ಹೀಗೆ ತಂದೆಯಿಂದ ವೇದೋಕ್ತಮಂತ್ರಗಳು ಮತ್ತು ಇತಿಹಾಸ ಪುರಾಣೋಕ್ತಶ್ಲೋಕಗಳ ಮೂಲಕ ಸಂಸ್ಕೃತದ ಅಧ್ಯಯನದ ಬೀಜಾವಾಪವು ಮಾಡಲ್ಪಟ್ಟಿತು. ಆದರೂ ಪಾಠ್ಯರೂಪವಾದ ಸಂಸ್ಕೃತದ ಅಭ್ಯಾಸವು ಅವರ ಭಾವನವರ ಮನೆಯಲ್ಲಿ ಆರಂಭವಾಯಿತು. ಮೂಡಿಗೆರೆ ಪಟ್ಟಣದಲ್ಲಿ ಅಕ್ಕನ ಮನೆಯಲ್ಲಿದ್ದಾಗ, ಅವರ ಭಾವನವರು, ಶಬ್ದರೂಪಾವಳಿಯನ್ನು ರಾಯರ ಕೈಗೆ ಕೊಟ್ಟು ಪ್ರತಿದಿನ ಒಂದೊಂದು ಶಬ್ದವನ್ನು ಕಂಠಪಾಠಮಾಡುವಂತೆ ವಿಧಿಸಿದ್ದರು. ಸ್ವಲ್ಪಕಾಲದ ನಂತರ ಸುಬ್ಬರಾಯರು ತಮ್ಮ ವಿದ್ಯಾಭ್ಯಾಸವನ್ನು ತರೀಕೆರೆ ಪಟ್ಟಣದಲ್ಲಿ ಮುಂದುವರಿಸಿದರು. ಅಲ್ಲಿ ಅವರ ಹಿರಿಯ ಅಣ್ಣಂದಿರಾದ ಶ್ರೀಕಂಠಯ್ಯನವರ ಮನೆಯಲ್ಲಿ ಅಪ್ಪಣ್ಣ ಪಂಡಿತರೆಂಬ ಸಂಸ್ಕೃತಜ್ಞರು ಹುಡುಗನಿಗೆ ಸಂಸ್ಕೃತವನ್ನು ಹೇಳಿಕೊಡುತ್ತಿದ್ದರು. ಬೇರೆ ಪಾಠ್ಯವಿಷಯಗಳನ್ನು ಬಿಟ್ಟು ಸಂಸ್ಕೃತಭಾಷೆಗೆ ಮಾತ್ರ ವ್ಯವಸ್ಥಿತವಾಗಿದ್ದ ಮನೆ ಪಾಠವು ಅವರ ಅಣ್ಣಂದಿರಿಗೆ ಸಂಸ್ಕೃತಭಾಷೆಯ ಬಗ್ಗೆ ಇದ್ದ ಪ್ರೇಮವನ್ನು ನಿರೂಪಿಸುತ್ತದೆ. ಹೀಗೆ ಮನೆಯಲ್ಲಿ ಸಂಸ್ಕೃತದ ಅಧ್ಯಯನಕ್ಕೆ ಪ್ರೋತ್ಸಾಹವು ದೊರೆತಂತೆ, ಶಾಲೆಯಲ್ಲಿಯೂ ಕೂಡ ಪೂರಕರೂಪದಿಂದ ಇಂತಹ ಅಧ್ಯಯನದ ಅವಕಾಶವು ಅವರಿಗೆ ದೊರಕಿತು. ಜ್ಞಾನದ ವಿಷಯದಲ್ಲಿ ಅವರಿಗೆ ಇದ್ದ ಈ ಆಸಕ್ತಿಯು ಚಿಕ್ಕಮಗಳೂರಿನಲ್ಲಿ ಶ್ರೀ ಹರಿಯಪ್ಪನವರ ಮನೆಯಲ್ಲಿ ಅವಿಚ್ಛಿನ್ನವಾಗಿ ಪ್ರವೃದ್ಧವಾಯಿತು. ರಾಯರು

ಪ್ರೌಢವಿದ್ಯಾಭ್ಯಾಸಕ್ಕಾಗಿ ಅವರ ಮನೆಯಲ್ಲಿ ವಾಸಮಾಡುತ್ತಿದ್ದಾಗ, ಅವರ ಸಹೋದರಿಯ ಅಪೇಕ್ಷೆಯಂತೆ **ಭಗವದ್ಗೀತೆ** ಮತ್ತು **ಜ್ಞಾನಸಿಂಧು**ವನ್ನು ಪಾರಾಯಣ ಮಾಡುತ್ತಿದ್ದರು.

ಶಾಲೆಯ ಮುಖ್ಯೋಪಾಧ್ಯಾಯರೂ ಬಹುಮುಖ ಪ್ರತಿಭಾಸಂಪನ್ನರೂ ಆದ ಸುಬ್ರಹ್ಮಣ್ಯ ಅಯ್ಯರ್‌ರವರು ಅರ್ಥಶಾಸ್ತ್ರ ಮತ್ತು ತತ್ತ್ವಶಾಸ್ತ್ರಗಳೆರಡರಲ್ಲೂ ಪಂಡಿತ ರಾಗಿದ್ದರು. ಅವರ ಮನೆಯಲ್ಲಿ ಸದಸದ್ವಿಷಯಕವಾದ ಚರ್ಚೆಗಳು ಪದೇ ಪದೇ ಜರುಗುತ್ತಿದ್ದವು. ಸಾಂಖ್ಯದರ್ಶನ ಮತ್ತು ವೇದಾಂತದರ್ಶನವನ್ನು ಕುರಿತೂ ಅರ್ಥ ಪೂರ್ಣವಾದ ತತ್ತ್ವಜಿಜ್ಞಾಸೆಯು ನಡೆಯುತ್ತಿತ್ತು. ಸುಬ್ಬರಾಯರು ವಾರಾನ್ನಕ್ಕಾಗಿ ಅವರ ಮನೆಗೂ ಹೋಗುತ್ತಿದ್ದರು. ಈ ವಿದ್ವದ್ಗೋಷ್ಠಿಗಳು ಬಾಲಕನ ಮೇಲೆ ಗಾಢ ವಾದ ಪರಿಣಾಮವನ್ನುಂಟುಮಾಡುತ್ತಿದ್ದವು. ಹೀಗೆ ಅವರ ಮನೆಯಲ್ಲಿ ಬಾಲಕನಿಗೆ ವೇದಾಂತದ ಪ್ರಥಮ ಪರಿಚಯವು ದೊರಕಿತು. ಅಲ್ಲದೆ ವೇದಾಂತದ ವಿಷಯದಲ್ಲಿ ಉನ್ನತ ಅಧ್ಯಯನವನ್ನು ಮಾಡಲು ಪ್ರೇರಣೆಯೂ ದೊರಕಿತು.

ತಮ್ಮ ಸಹೋದರಿಯ ಕ್ಷೇಮವಾರ್ತೆಯನ್ನು ತಿಳಿಯುವ ಉತ್ಸುಕತೆಯಿಂದ ಸುಬ್ಬರಾಯರು ಆಗಿಂದಾಗ್ಗೆ ಬಸವನಹಳ್ಳಿಗೆ ಹೋಗುತ್ತಿದ್ದರು. ಅವರ ಮನೆಯಲ್ಲಿ ವಿದ್ವಾನ್ ಸುಬ್ಬಾಶಾಸ್ತ್ರಿಗಳು ದೇವೀಪುರಾಣ ಮತ್ತು ತೈತ್ತರೀಯೋಪನಿಷತ್ತನ್ನು ವಾಚಿಸು ತ್ತಿದ್ದರು. ಆ ಸಂದರ್ಭದಲ್ಲಿ ಅಭಿನಯಪೂರ್ವಕವಾಗಿ ಮಾಡುತ್ತಿದ್ದ ಶಾಸ್ತ್ರಿಯವರ ಅರ್ಥವಿವರಣ ಕೌಶಲ್ಯವು ರಾಯರ ಮನಸ್ಸಿನಲ್ಲಿ ಬ್ರಹ್ಮಜಿಜ್ಞಾಸೆಯು ಜನಿಸಲು ಕಾರಣವಾಯಿತು. ಅದರಲ್ಲಿಯೂ **'ಯತೋ ವಾಚೋ ನಿವರ್ತಂತೇ । ಅಪ್ರಾಪ್ಯ ಮನಸಾ ಸಹ' (ತೈ.2.4.1)** ಎಂಬುವ ಬ್ರಹ್ಮವರ್ಣನೆಯಿಂದ ಬಾಲಕನ ಕುತೂಹಲವು ಇಮ್ಮಡಿಯಾಯಿತು. ಈ ಮಂತ್ರವು ಬಾಲಕನ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಬೀರಿತು. 'ಮನಸ್ಸಿನಿಂದಲೂ ಚಿಂತಿಸಲಾರದ ಬ್ರಹ್ಮದ ರೂಪವು ಹೇಗಿರಬಹುದೆಂದು' ಅವರ ಮನಸ್ಸಿನಲ್ಲಿ ಜಿಜ್ಞಾಸೆಯು ಆರಂಭವಾಯಿತು. ಅಂದಿ ನಿಂದ ಸುಬ್ಬರಾಯರು ವೇದಾಂತದ ಅಧ್ಯಯನದ ವಿಷಯದಲ್ಲಿ ಅಹರ್ನಿಶಿ ನಿಷ್ಠೆಯನ್ನು ಪಾಲಿಸಲಾರಂಭಿಸಿದರು. ಔಪಧನಿಷದಿಕ ದರ್ಶನವನ್ನು ಹೃದ್ಗತಮಾಡಿ ಕೊಳ್ಳಲು ಸೋಪಾನ ಪರಂಪರೆಯಿಂದ ಸಂಸ್ಕೃತಭಾಷಾಭ್ಯಾಸವು ಪರಮಾವಶ್ಯಕ ವೆಂದು ತಿಳಿದು, ಆ ಭಾಷೆಯ ಅಭ್ಯಾಸಕ್ಕೆ ಹೆಚ್ಚಿನ ಗಮನಕೊಡಲಾರಂಭಿಸಿದರು. ಭಾಗ್ಯವಶ ದಿಂದ ಅವರ ಗೆಳೆಯರಾದ ಶ್ರೀ ತಿಮ್ಮಪ್ಪನವರ ಮನೆಯಲ್ಲಿ, ಆಂಗ್ಲ ಭಾಷಾವ್ಯಾಖ್ಯಾನ ಸಹಿತವಾದ ರಘುವಂಶಮಹಾಕಾವ್ಯವು ದೊರಕಿತು. ಅಂದಿನಿಂದಲೇ ತದೇಕಚಿತ್ತದಿಂದ ಅದನ್ನು ಪಠಿಸಲು ಆರಂಭಿಸಿದರು. ಅದರಲ್ಲಿದ್ದ ಕ್ಲಿಷ್ಟಪದಗಳ ಅರ್ಥ

ಸ್ವಾರಸ್ಯವನ್ನು ಗ್ರಹಿಸಲು ಮೆಕ್ಡೋನಲ್ ಮಹಾಶಯರಿಂದ ಸಂಪಾದಿಸಲ್ಪಟ್ಟ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳ ಶಬ್ದಕೋಶವನ್ನು ಖರೀದಿಸಿದರು.

ಉನ್ನತವ್ಯಾಸಂಗಕ್ಕಾಗಿ ಬೆಂಗಳೂರು ನಗರಕ್ಕೆ ಬಂದ ನಂತರ, ಈ ದೇವಭಾಷೆ ಯಲ್ಲಿ ನೈಪುಣ್ಯತೆಯನ್ನು ಪಡೆಯಲು, ಸಂಸ್ಕೃತಮಹಾವಿದ್ಯಾಲಯದಲ್ಲಿ ಕಾವ್ಯದ ತರಗತಿಗೆ ಸೇರಿಕೊಂಡರು. ಆಗ ವಿದ್ವಾನ್ ಕರಿಗಿರಿಯಾಚಾರ್ಯರು ಒಳ್ಳೆಯ ಅಧ್ಯಾಪಕರೆಂದು ಛಾತ್ರವೃಂದದಲ್ಲಿ ವಿಶೇಷ ಸಂಮಾನಿತರಾಗಿದ್ದರು. ಅವರು ಪಾಠ ಮಾಡುತ್ತಿದ್ದುದು ''**ಕಿರಾತಾರ್ಜುನೀಯ**'' ಮತ್ತು ''**ದಶಕುಮಾರ ಚರಿತ**''ವೆಂಬ ಕಾವ್ಯದ್ವಯಗಳು. ಶ್ಲೋಕಗಳ ಪಠಣ, ಪದಚ್ಛೇದ, ಅರ್ಥವಿವರಣೆ, ಅಭಿಪ್ರಾಯ, ಭಾವಾರ್ಥವಿಸ್ತರಣ, ಅದರಲ್ಲಿ ಬರುವ ವ್ಯಾಕರಣಸೂತ್ರ ಮತ್ತು ಕೋಶ ವಾಕ್ಯಗಳ ಉದಾಹರಣೆ– ಹೀಗೆ ಕ್ರಮಬದ್ಧವಾದ ಪಾಠದಿಂದ ಭಾಷಾವ್ಯುತ್ಪತ್ತಿಯು ಅವರಿಗೆ ಲಭ್ಯ ವಾಯಿತು. ಗೃಹಪಾಠದಿಂದ ಸಂಗ್ರಹಿಸಲ್ಪಟ್ಟ ಹಣದಿಂದ ರಾಯರು **ಪಂಚೀಕರಣ** ಮತ್ತು **ವೇದಾಂತಸಾರ**ವೆಂಬ ಗ್ರಂಥಗಳನ್ನು ಕೊಂಡುಕೊಂಡರು. ಸರ್ವವೇದಾಂತ ಸಾರಭೂತವಾದ ಗ್ರಂಥವೆಂದರೆ ಭಗವದ್ಗೀತೆಯೇ ತಾನೆ? ಅದರ ವಿಶೇಷವಾದ ಅಧ್ಯಯನವನ್ನು ಮಾಡುವ ಉದ್ದೇಶದಿಂದ ಶಂಕರರಭಾಷ್ಯ ಸಮೇತವಾದ ಗೀತಾ ಗ್ರಂಥವನ್ನು ಯಾವುದೋ ಹಳೆಯ ಪುಸ್ತಕದ ಅಂಗಡಿಯಿಂದ ಪಡೆದುಕೊಂಡರು.

ಆಗ ರಾಯರು ಕೃಷ್ಣಸ್ವಾಮಿಅಯ್ಯರ್‌ರವರ ಮನೆಯಲ್ಲಿ ವಾಸಮಾಡುತ್ತ, ಅಧ್ಯಯನ ಮಾಡುತ್ತಿದ್ದರು. ಅಲ್ಲಿ ರಾಯರ ವೇದಾಂತದ ಅಭ್ಯಾಸವು ನವೀನತೆ ಯನ್ನು ಪಡೆಯಿತು. ರಾಯರು ಸ್ವಾಂತಃಸುಖಕ್ಕಾಗಿ ಪ್ರತಿದಿನ ಗೀತೆಯ ಮೂರು ಶ್ಲೋಕಗಳನ್ನು ಓದಬೇಕೆಂಬ ನಿಯಮವನ್ನು ಏರ್ಪಡಿಸಿಕೊಂಡಿದ್ದರು. ಅದರ ಅರ್ಥ ವನ್ನು ಅರಿಯಲು ಮತ್ತು ವ್ಯಾಕರಣ ನಿಯಮಗಳನ್ನು ಮನನ ಮಾಡಲು ಕಾಳೆ ಮಹಾಶಯನು ಸಂಪಾದಿಸಿರುವ ಸಂಸ್ಕೃತ ವ್ಯಾಕರಣವನ್ನು ಮತ್ತು ಬಾಲಬೋಧಿನೀ ಸಹಿತವಾದ ಸಿದ್ಧಾಂತಕೌಮುದೀ ಗ್ರಂಥವನ್ನೂ ಖರೀದಿಸಿ, ಅವುಗಳ ಸಹಾಯದಿಂದ ಪ್ರತಿದಿನ ಗೀತಾಭಾಷ್ಯವನ್ನು ಅಭ್ಯಾಸಮಾಡುತ್ತಿದ್ದರು. ವೇದಾಂತ ಗ್ರಂಥಗಳಲ್ಲಿ ಅವರ ಆಸಕ್ತಿ ಮತ್ತು ಆ ದಿಸೆಯಲ್ಲಿ ಅವರು ನಡೆಸುತ್ತಿದ್ದ ಪ್ರಯತ್ನವನ್ನು ಗಮನಿಸಿದ ಕೃಷ್ಣಸ್ವಾಮಿಅಯ್ಯರ್‌ರವರು ತಾವೇ ರಾಯರಿಗೆ **ವೇದಾಂತಪರಿಭಾಷೆ, ಸೂತಸಂಹಿತೆ** ಮತ್ತು **ಗೀತಾಭಾಷ್ಯ**ವನ್ನು ಹೇಳಿಕೊಡಲು ಆರಂಭಿಸಿದರು. ಇದಲ್ಲದೆ ಅವರು ವಾರಾನ್ನಕ್ಕೆ ಹೋಗುತ್ತಿದ್ದ ಎಲ್ಲ ಮನೆಗಳಲ್ಲೂ ಆಗಾಗ್ಗೆ ವೇದಾಂತದ ಚರ್ಚೆ, ಧರ್ಮ ಶಾಸ್ತ್ರ ಮತ್ತು ಸ್ಮೃತಿಗಳ ವಿಮರ್ಶೆಗಳು ಕಿವಿಗೆ ಬೀಳುತ್ತಿದ್ದವು. ಹೀಗೆ ಸುಬ್ಬರಾಯರು

ಎಲ್ಲಾ ಕಡೆಗಳಲ್ಲಿಯೂ ತಮ್ಮ ಅಭಿರುಚಿಗೆ ಅನುಸಾರವಾಗಿ ಅನುಕೂಲವಾದ ವಾತಾವರಣವನ್ನು ಪಡೆದು, ಅದನ್ನು ತಮ್ಮ ವಿದ್ಯಾಭಿವೃದ್ಧಿಗೆ ಉಪಯೋಗಿಸಿ ಕೊಳ್ಳುತ್ತಿದ್ದರು. ಅವರ ಮನಸ್ಸಿನಲ್ಲಿ ವೇದಾಂತದ ಬಗ್ಗೆ ಎಷ್ಟು ಆಸಕ್ತಿಯಿತ್ತೆಂದರೆ, ಒಮ್ಮೆ ರೈಲುಬಂಡಿಯಲ್ಲಿ ಹೋಗುವಾಗ ವಿವೇಕಚೂಡಾಮಣಿಯನ್ನು ಕೊಂಡುಕೊಂಡು, ಭೋಜನಾದಿಗಳಿಗೂ ಏಳದೆ ಪೂರ್ತಿಯಾಗಿ ಓದಿ ಮುಗಿಸಿದ್ದರು. ಅಧ್ಯಯನಪರತೆ, ಅನುಶೀಲನೆ ಮತ್ತು ಪರಿಶೀಲನೆಗಳು ಓತಪ್ರೋತರೂಪದಿಂದ ಬಾಲ್ಯದಿಂದಲೇ ಅವರ ಮನದಲ್ಲಿ ನೆಲೆಸಿದ್ದವು. ಆದರೂ ದುರದೃಷ್ಟದಿಂದ ಅವರು ಉನ್ನತ ಶಿಕ್ಷಣದ ಸೌಲಭ್ಯದಿಂದ ವಂಚಿತರಾಗಬೇಕಾಯಿತು.

ಲೋಕಯಾತ್ರೆಯ ನಿರ್ವಹಣೆಗಾಗಿ ಉದ್ಯೋಗಾಕಾಂಕ್ಷಿಗಳಾದ ರಾಯರು ಕಡೂರುಪಟ್ಟಣದಲ್ಲಿ ಒಂದು ಸರ್ಕಾರಿ ಕೆಲಸವನ್ನು ಹಿಡಿದರು. ಆದರೆ ಆ ವೃತ್ತಿಯಲ್ಲಿ ಅಧ್ಯಯನಕ್ಕೆ ಅವಕಾಶವಾಗಲೀ, ಶಿಕ್ಷಣತಜ್ಞರೊಂದಿಗೆ ಸಮಾಗಮವಾಗಲೀ ಸಾಧ್ಯ ವಿರಲಿಲ್ಲ. ಆದರೂ ಸಿಕ್ಕಿದ ವಿರಾಮದ ಸಮಯವನ್ನು ಅವರು ಸಂಸ್ಕೃತದ ಅಧ್ಯಯನಕ್ಕೆ ವಿನಿಯೋಗಿಸುತ್ತಿದ್ದರು. ವ್ಯಾಸಂಗಶೀಲರನ್ನು ಸರಸ್ವತಿಯು ಖಂಡಿತವಾಗಿ ಆಶ್ರಯಿಸುತ್ತಾಳೆ. ಆದ್ದರಿಂದಲೇ, ಭಾಸಮಹಾಕವಿಯು, **'ಮಾರ್ಗಾರಬ್ಧಾಃ ಸರ್ವ ಯತ್ನಾಃ ಫಲಂತಿ'** ಎಂದು ಹೇಳಿರುತ್ತಾನೆ. ಅದೇ ಸಮಯದಲ್ಲಿ ಕಡೂರಿನಲ್ಲಿ ಅಧ್ಯಯನ ವ್ಯಸನಿಗಳೂ ಸದಾಚಾರಸಂಪನ್ನರೂ ಆದ ಹೊಸಕೆರೆ ಚಿದಂಬರಯ್ಯನವರೆಂಬುವರು ಇದ್ದರು. ವೃತ್ತಿಯಿಂದ ಶಾಲೆಯೊಂದರಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಅವರು ಪ್ರವೃತ್ತಿ ಯಿಂದ ಅಧ್ಯಾತ್ಮವಿದ್ಯಾಪಿಪಾಸುಗಳಾಗಿದ್ದರು. ಬಹುಶ್ರುತರೂ, ಪ್ರಸಿದ್ಧ ಲೇಖಕರೂ ಆದ ಅವರು ಸುಬ್ಬರಾಯರೊಂದಿಗೆ ಸ್ನೇಹವನ್ನು ಸಂಪಾದಿಸಿದರು. ಆದ್ದರಿಂದಲೇ, **'ಸಮಾನಶೀಲವ್ಯಸನೇಷು ಸಖ್ಯಂ'** ಎಂದು ಹೇಳುವುದು.

ಪ್ರಾಯಶಃ ಇಂತಹ ಮೈತ್ರಿಯೇ ಊರ್ಜಿತವಾಗುತ್ತದೆ. ಚಿದಂಬರಯ್ಯನವರ ಗ್ರಂಥಗಳ ರಚನಾಕಾರ್ಯದಲ್ಲಿ ಸುಬ್ಬರಾಯರು ಅನೇಕ ವಿಧದಲ್ಲಿ ಸಹಾಯವನ್ನು ಮಾಡುತ್ತಿದ್ದರು. ಆದ್ದರಿಂದಲೇ ಚಿದಂಬರಯ್ಯನವರು ತಾವು ಅನುವಾದ ಮಾಡಿರುವ 'ಅನುಭವಾಮೃತ' ವೆಂಬ ಗ್ರಂಥದ ಪೀಠಿಕೆಯಲ್ಲಿ ''ಗ್ರಂಥದ ಕರ್ತೃತ್ವವು ಸ್ಥೂಲ ದೃಷ್ಟಿ ಯಿಂದ ಮಾತ್ರ ನನ್ನದು. ವಿಚಾರದೃಷ್ಟಿಯಿಂದ ಸುಬ್ಬರಾಯರೇ ಇದರ ಕರ್ತೃಗಳು. ಅವರು ಅಧ್ಯಾತ್ಮಗ್ರಂಥಗಳ ಪ್ರಕಟಣೆಯಲ್ಲಿ ದೀಕ್ಷಾಬದ್ಧರು ಮತ್ತು ಏಕಜೀವ ನ್ಯಾಯ ನಿಂದ ನನ್ನ ಮಿತ್ರರು'' ಎಂದು ಸುಬ್ಬರಾಯರನ್ನು ಕೃತಜ್ಞತೆಯಿಂದ ಸ್ಮರಿಸಿದ್ದಾರೆ.

ತಪಸ್ವಿಯು ಒಂಟಿಯಾಗಿರಬೇಕು ಮತ್ತು ಅಧ್ಯಯನವನ್ನು ಇಬ್ಬರು ಸೇರಿ ಮಾಡಬೇಕು. **(ಏಕಃ ತಪಸ್ವೀ ದ್ವಿರಧ್ಯಾಯೀ)** ಎಂಬುದು ಒಂದು ಲೋಕೋಕ್ತಿ. ಅದರಂತೆ ಇವರಿಬ್ಬರೂ ಸೇರಿ, ಪ್ರತಾಪರುದ್ರೀಯ, ಕುವಲಯಾನಂದ ಮುಂತಾದ ಅಲಂಕಾರ ಗ್ರಂಥಗಳನ್ನೂ ಪಂಚದಶೀ, ಗೀತಾತಾತ್ಪರ್ಯಬೋಧಿನಿ ಮುಂತಾದ ದಾರ್ಶನಿಕ ಗ್ರಂಥಗಳನ್ನೂ ಅಧ್ಯಯನ ಮಾಡಿದರು. ಈ ಮಿತ್ರರ ಸಹಾಯದಿಂದಲೇ ಸುಬ್ಬರಾಯರು ಅಧ್ಯಾಪಕವೃತ್ತಿಯನ್ನುಗಳಿಸಲು ಸಾಧ್ಯವಾಯಿತು. ಇದರಿಂದ ಈ ಇಬ್ಬರ ಸಹಾಧ್ಯಯನ ಸುಕರವಾಯಿತು. ರಂಗಣ್ಣನೆಂಬವರು ರಾಯರ ಮತ್ತೊಬ್ಬರು ಗೆಳೆಯರು, ರಾಯರ ವೇದಾಂತದ ಬಗೆಗಿನ ಆಸಕ್ತಿಯನ್ನು ಗಮನಿಸಿ, **'ರತ್ನಪ್ರಭಾ'** ಮತ್ತು **'ಭಾಮತೀ'** ಎಂಬ ಎರಡು ಬ್ರಹ್ಮಸೂತ್ರಭಾಷ್ಯಗಳನ್ನು ಅವರಿಗೆ ಕೊಡುಗೆಯಾಗಿ ನೀಡಿದರು. ಮನಸ್ವಿಯಾದ ಕಾರ್ಯಾಧಿಕಾರಿಯು ಸುಖದುಃಖಗಳನ್ನು ಪರಿಗಣಿಸದೆ ಸಿದ್ಧಿಯನ್ನು ಹೊಂದುತ್ತಾನೆ. ಅಂತೆಯೇ ಪ್ರತಿದಿನವೂ ಸುಬ್ಬರಾಯರು ಸ್ನಾನಾಹ್ನಿಕಾದಿಗಳನ್ನು ಯಥಾಸಮಯದಲ್ಲಿ ಪೂರೈಸಿ, ಶಂಕರಭಗವತ್ಪಾದರ ಭಾವ ಚಿತ್ರದ ಮುಂದೆ ಕುಳಿತು ಭಾಷ್ಯಗಳನ್ನು ಅಭ್ಯಾಸಮಾಡುತ್ತಿದ್ದರು. ಹೀಗೆ ಮಾಡುವುದರಿಂದ ಅದರ ಅರ್ಥಸ್ಫುರಣೆಯಾಗುವುದೆಂದು ಅವರಿಗೆ ವಿಶ್ವಾಸವಿದ್ದಿತು. ಭಾಷ್ಯಕಾರರ ಅನುಗ್ರಹದಿಂದ ಮನಸ್ಸಿನಲ್ಲಿ ಯಾವ ರೀತಿಯ ಭಾವನೆಯು ಇರುತ್ತದೋ, ಅಂತೆಯೇ ಸಿದ್ಧಿಯು ದೊರಕುತ್ತದೆ. ಮನೋವೈಜ್ಞಾನಿಕ ರೀತಿಯಲ್ಲಿಯೂ, ಈ ಮಾತು ಸತ್ಯ; ಏಕೆಂದರೆ ವಿಷಯಗಳನ್ನು ಗ್ರಹಿಸುವುದು ಮತ್ತು ಗ್ರಹಿಸದೆ ಇರುವುದಕ್ಕೆ ಮಾನಸಿಕ ಸ್ಥಿತಿಯೇ ಕಾರಣ. ಈ ರೀತಿಯ ಅಧ್ಯಯನ ಶೀಲತ್ವದಿಂದಲೇ ರಾಯರು ಮುಂದೆ ಅಪೂರ್ವವಾದ ಸಂಶೋಧನೆಗಳನ್ನು ನಡೆಸಲು ಶಕ್ತರಾದರು. ಇದರಿಂದಲೇ ಅವರು ಶಾಂಕರೋತ್ತರ ವ್ಯಾಖ್ಯಾನಪರಂಪರೆಗಳಿಂದ ಅಭಿಭೂತವಾಗದ ಶುದ್ಧವಾದ ಮನಸ್ಸಿನಿಂದ ಕ್ರಮವಾಗಿ ಶಾಂಕರಭಾಷ್ಯಗಳಲ್ಲಿ ಉಕ್ತವಾಗಿರುವ ವೇದಾಂತದ ಸಾರವನ್ನು ತಿಳಿಯಲು ಸಮರ್ಥರಾದರು. ಮಹಾಜನರು ಯಾವ ಪಥದಲ್ಲಿ ಸಂಚರಿಸುತ್ತಾರೋ ಅದೇ ಸರಿಯಾದ ದಾರಿಯೆಂಬುದು ನಿಜವಾದರೂ, ವ್ಯಾಖ್ಯಾನಗಳ ಪರಸ್ಪರ ವಿರುದ್ಧವಾದ ವಿಶ್ಲೇಷಣೆಯಿಂದ ಶುದ್ಧಶಾಂಕರಪ್ರಕ್ರಿಯೆಯ ಸ್ವರೂಪವು ಯಾವುದಿರಬಹುದೆಂಬ ಜಿಜ್ಞಾಸೆಯು ಸಹಜವಾಗಿ ಮನದಲ್ಲಿ ಉದಿಸುತ್ತದೆ. ವ್ಯಾಖ್ಯಾನಗಳ ಅಭಿಪ್ರಾಯಕ್ಕಿಂತ ಆಚಾರ್ಯರು ಭಾಷ್ಯದಲ್ಲಿ ಹೇಳಿರುವ ಅಭಿಪ್ರಾಯಕ್ಕೆ ಪ್ರಾಶಸ್ತ್ಯವಿರಬೇಕೆಂಬುದು ಸರ್ವಸಂಮತ. ಅನಂತರದಲ್ಲಿ ವಿಶೇಷ ವಿಷಯಗಳನ್ನು ತಿಳಿದುಕೊಳ್ಳಲು, ಬೇರೆ

ಆಚಾರ್ಯರುಗಳು ಅನುಗ್ರಹಿಸಿರುವ ವ್ಯಾಖ್ಯಾನಗಳನ್ನು ಪರಾಮರ್ಶಿಸಬಹುದು. ಇಲ್ಲದಿದ್ದರೆ ಭಾಷ್ಯಕಾರರ ಮೂಲವಾದ ಆಶಯವೆ ಕಣ್ಮರೆಯಾದೀತು. ಭಾಷ್ಯಗಳ ಅರ್ಥವನ್ನು ಗ್ರಹಿಸಲು ಭಗವತ್ಪಾದರ ಅನುಗ್ರಹವು ಅವಶ್ಯವಾಗಿ ಇರಬೇಕು. ಈ ರೀತಿಯ ಅನುಗ್ರಹಪೂರ್ವಕವಾದ ಅಧ್ಯಯನದಿಂದ ರಾಯರು ಮಾಡಿದ ವಾಙ್ಮಯ ತಪಸ್ಸಿನ ಸಾರ್ಥಕತೆಯನ್ನು ಮುಂದೆ ತಿಳಿಯಬಹುದು.

ಈ ರೀತಿಯ ಸಾಂಪ್ರದಾಯಿಕವಾದ ವಿದ್ಯೆಗಾಗಿ **'ಭಾಷ್ಯಶಾಂತಿ'**ಯೆಂಬ ಅಧ್ಯಯನದ ವಿಧಿಯು ವೇದಾಂತವಿದ್ಯಾಜಿಜ್ಞಾಸುಗಳಿಂದ ಅವಶ್ಯವಾಗಿ ಅನುಷ್ಠಿಸಲ್ಪಡ ಬೇಕು. ಆ ನಂತರ ಭಾಷ್ಯಗಳನ್ನು ಓದಲು ಮತ್ತು ಅರ್ಥಮಾಡಿಕೊಳ್ಳಲು ಯೋಗ್ಯತೆಯು ದೊರೆಯುತ್ತದೆ. ಸುಬ್ಬರಾಯರು ಕೂಡ ಇದಕ್ಕಾಗಿ ಪ್ರಯತ್ನಮಾಡುತ್ತಲೇ ಇದ್ದರು. ಯಾರು ನಿಗ್ರಹಾನುಗ್ರಹಸಮರ್ಥರೋ, ಅಧ್ಯಯನ ಮತ್ತು ಅಧ್ಯಾಪನದಲ್ಲಿ ಕುಶಲರೋ, ತಪಸ್ವಿಗಳೋ ಅಂತಹವರೇ ಅಧ್ಯಾತ್ಮವಿದ್ಯೆಯನ್ನು ಉಪದೇಶಿಸಲು ಅರ್ಹರಾಗಿರುತ್ತಾರೆ. ಸಮಗ್ರಭಾಷ್ಯವನ್ನು ಅಧ್ಯಯನಮಾಡುವ ಮೊದಲೇ ಸದ್ಗುರುಗಳಿಂದ ಭಾಷ್ಯಶಾಂತಿ ಯನ್ನು ಪರಿಗ್ರಹಿಸಬೇಕೆಂದು ಕುರ್ತುಕೋಟಿಯ ಮಹಾಭಾಗವತರು ಸುಬ್ಬರಾಯ ರಿಗೆ ಮತ್ತೆ ಮತ್ತೆ ನೆನಪಿಸುತ್ತಿದ್ದರು. ದೈವಾನುಗ್ರಹದಿಂದ, ಹೊಸಕೆರೆ ಚಿದಂಬರಯ್ಯ ನವರು ಮತ್ತು ಸುಬ್ಬರಾಯರು ಪಂಡಿತಪ್ರಕಾಂಡರು, ಶಿಷ್ಯವತ್ಸಲರೂ ಆದ ಹಾನಗಲ್ಲು ವಿರೂಪಾಕ್ಷಶಾಸ್ತ್ರಿಗಳನ್ನು ಭಾಷ್ಯಶಾಂತಿಗಾಗಿ ಪ್ರಾರ್ಥಿಸಿದರು. ಆದರೆ ಇದೇ ಸಂದರ್ಭ ದಲ್ಲಿ ಶೃಂಗೇರಿಯ ಜಗದ್ಗುರುಗಳು ಶಂಕರಾಲಯ ಮತ್ತು ಶಾರದಾ ಮಂದಿರವನ್ನು ಉದ್ಘಾಟನೆ ಮಾಡಲು ಕಾಲಟಿಗ್ರಾಮಕ್ಕೆ ಬರುವರೆಂದು ಕೇಳಿ, ಅವರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಅವರಿಬ್ಬರೂ ಬಯಸಿದರು. ಶಾಸ್ತ್ರಿಗಳಲ್ಲಿ ತಮ್ಮ ಪ್ರಾರ್ಥನೆ ಯನ್ನು ಸಲ್ಲಿಸಿದಾಗ ಹಾಗೆಯೇ ಆಗಲಿ ಎಂದು ಶಾಸ್ತ್ರಿಗಳೂ ತಮ್ಮ ಅಂಗೀಕಾರವನ್ನು ಸೂಚಿಸಿದರು. ಆಗ ಸುಬ್ಬರಾಯರು ಪುಣ್ಯಕ್ಷೇತ್ರವಾದ ಹರಿಹರದಲ್ಲಿ ವಾಸಿಸುತ್ತಿದ್ದರು. ಅಲ್ಲಿಗೆ ಸಾಧುಗಳು ಮತ್ತು ವಿದ್ವಾಂಸರು ಸದಾ ಬರುತ್ತಿರುತ್ತಿದ್ದರು. ಹೀಗೆ ಬಂದವರಲ್ಲಿ ಬೆಟಗೇರಿ ಕೃಷ್ಣಶಾಸ್ತ್ರಿಗಳ ಸ್ನೇಹವು ದೊರೆತು, ಅವರ ಜೊತೆ ಯಲ್ಲಿಯೇ ಕೃತ ಸಂಕಲ್ಪ ರಾದ ಮತ್ತು ಆಪ್ತ ಗೆಳೆಯರಾದ ಸುಬ್ಬರಾಯ ಮತ್ತು ಚಿದಂಬರಯ್ಯನವರು ಕಾಲಟಿಗೆ ಹೊರಟರು.

## ಭಾಷ್ಯಶಾಂತಿ ಮಹೋತ್ಸವ

ಸಾಕ್ಷಾತ್ ಶೃಂಗೇರಿಯ ಗುರುವರ್ಯರಾದ ಪರಮಪೂಜ್ಯ ಶ್ರೀ ಶ್ರೀಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀಸ್ವಾಮೀಗಳಿಂದ ನೆರವೇರಿಸಲ್ಪಡುವ ಶ್ರೀಶಂಕರಾ ಚಾರ್ಯರ ಮತ್ತು ಶ್ರೀಶಾರದಾದೇವಿಯ ವಿಗ್ರಹಪ್ರತಿಷ್ಠಾಪನಾಮಹೋತ್ಸವವನ್ನು ಪ್ರತ್ಯಕ್ಷವಾಗಿ ದರ್ಶಿಸುವುದು ಮತ್ತು ಅವರಿಂದಲೇ ಭಾಷ್ಯಶಾಂತಿದ್ವಾರಾ ಗುರೂಪದೇಶ ವನ್ನು ಸ್ವೀಕರಿಸುವುದು ರಾಯರ ಉದ್ದೇಶವಾಗಿತ್ತು. ಕಾಲಟಿಯಲ್ಲಿ ಏಳುದಿನಗಳ ಪರ್ಯಂತ ಪ್ರತಿಷ್ಠಾಕಲಾಪಗಳು ನಡೆದವು. ಮಾಘ ಶುಕ್ಲದ್ವಾದಶಿಯ ದಿನ ಐವತ್ತು ಸಾವಿರಕ್ಕಿಂತಲೂ ಹೆಚ್ಚು ಜನಸಮೂಹದ ಮಧ್ಯೆ ವೇದಘೋಷಪೂರ್ವಕವಾಗಿ ಪ್ರತಿಷ್ಠಾಪನಾ ಕಾರ್ಯಗಳು ವಿಜೃಂಭಣೆಯಿಂದ ನೆರವೇರಿದವು. ಅದನ್ನು ಕಣ್ಣಾರೆ ಕಂಡ ರಾಯರು ತಮ್ಮ ಜೀವನ ಸಾರ್ಥಕವಾದಂತೆ ಭಾವಿಸಿದರು.

ಮಹೋತ್ಸವದ ನಂತರ, ಅದೇ ದಿನ ಮಧ್ಯಾಹ್ನ ವಿದ್ವತ್ಸಭೆಯು ಆಯೋಜಿತ ವಾಗಿತ್ತು. ಅದರಲ್ಲಿ ಶೃಂಗೇರಿಯ ಗುರುವರ್ಯರು ಸನಾತನಧರ್ಮದ ಲಕ್ಷಣವನ್ನು ಕುರಿತು ಅನುಗ್ರಹಭಾಷಣವನ್ನು ಮಾಡಿದರು. ಅದನ್ನು ಕೇಳಿದ ರಾಯರು ತಮ್ಮನ್ನು ಕೃತಕೃತ್ಯರೆಂದು ಭಾವಿಸಿದರು. ದಿವ್ಯಲೋಕದ ದರ್ಶನವನ್ನು ಪಡೆದಂತೆ ಅವರ ಮನದಲ್ಲಿ ಹರ್ಷಾತಿರೇಕವು ಉಂಟಾಯಿತು.

ಯೋಗ್ಯವಾದ ಅವಕಾಶವನ್ನು ಭಾಷ್ಯಶಾಂತಿಗಾಗಿ ಬಳಸಿಕೊಳ್ಳಬೇಕೆಂದು ರಾಯರು ಶ್ರೀಚರಣರ ಸಹಾಯಾಧಿಕಾರಿಗಳಾಗಿದ್ದ ಶ್ರೀಕಂಠಶಾಸ್ತ್ರಿಗಳನ್ನು ಕೇಳಿ ಕೊಂಡರು. ಅವರು, 'ಈಗ ಸಮಯವಾಗುವುದಿಲ್ಲವೆಂದು ಆ ಪ್ರಾರ್ಥನೆಯನ್ನು ನಿರಾಕರಿಸಿಬಿಟ್ಟರು'. ನಿರಾಶರಾದ ಗೆಳೆಯರಿಬ್ಬರು ಬೆಟಗೇರಿ ಕೃಷ್ಣಶಾಸ್ತ್ರಿಗಳಲ್ಲಿ ತಮ್ಮ ದುಃಖವನ್ನು ತೋಡಿಕೊಂಡರು. ಕೃಷ್ಣಶಾಸ್ತ್ರಿಗಳು ತಾವು ಪ್ರಯತ್ನಿಸುವುದಾಗಿ ಹೇಳಿ ಅಂದಿನ ರಾತ್ರಿಯೇ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದರು. ಶ್ರೀಗಳವರು ಆನಂದದಿಂದ, 'ಇದೇ ಸುಲಗ್ನವು ಯಾರು ಯಾರು ಉತ್ಸುಕರಾಗಿ ದ್ದಾರೆಯೋ ಅವರೆಲ್ಲ ಅವಶ್ಯವಾಗಿ ಬರಲಿ' ಎಂದು ಅಪ್ಪಣೆ ಕೊಡಿಸಿದರು.

ಮಾರನೆಯ ದಿನವೇ ಅವರ ಅಪ್ಪಣೆಯಂತೆ ಶಾರದಾಮಂದಿರದಲ್ಲಿ ಭಾಷ್ಯ ಶಾಂತಿಯ ಮಹೋತ್ಸವವು ಆಯೋಜಿಸಲ್ಪಟ್ಟಿತು. ಸುಮಾರು ಇಪ್ಪತ್ತು ಜನ ಮುಮುಕ್ಷುಗಳು ಸಿದ್ಧರಾಗಿ ಬಂದರು. ಕೆಲವರು ಪಂಡಿತರು ಮತ್ತು ವಿದ್ವಾಂಸರು ಸೇರಿದರು. ಇಂತಹ ಜಿಜ್ಞಾಸುಗಳಿಂದ ಕೂಡಿದ ಆ ಪ್ರದೇಶವು ಬ್ರಹ್ಮಸಭೆಯಂತೆ

ರಾರಾಜಿಸುತ್ತಿತ್ತು. ಉಪನಿಷತ್ತಿನ ಸಾರವು ಅಂದು ಯಾರಿಂದ ಪ್ರತ್ಯಕ್ಷವಾಗಿ ಅನುಭವಿಸಲ್ಪಟ್ಟಿತ್ತೋ ಆ ಆಸ್ತಿಕಗಣವು ನಿಜವಾಗಿಯೂ ಧನ್ಯವು. ಯಥಾಕಾಲದಲ್ಲಿ ಶ್ರೀ ಸ್ವಾಮಿಗಳು ಎಲ್ಲರಿಗೂ ಶಾಂತಿಪಾಠದ ಮಂತ್ರಗಳನ್ನು ಕ್ರಮವಾಗಿ ಬೋಧಿಸಿದರು. ಅದನ್ನು ಅನುಸರಿಸಿ ಎಲ್ಲರೂ ಪುನಃ ಪಠಣಮಾಡಿದರು. ಅನಂತರ ಶ್ರೀಚರಣರು ಬ್ರಹ್ಮಸೂತ್ರ ಶಾಂಕರಭಾಷ್ಯದಲ್ಲಿ ಅಧ್ಯಾಸಭಾಷ್ಯದ ಅಭಿಪ್ರಾಯವನ್ನು ವಿವರಿಸಿದರು. ಆ ಸಂದರ್ಭದಲ್ಲಿ ಆನಂದಭಾಷ್ಪ ಪೂರಿತವಾದ ಕಂಠದಿಂದ, 'ಭಾಷ್ಯಕಾರರ ಜನ್ಮಭೂಮಿಯಾದ ಇದು ಪವಿತ್ರತಮವಾದುದು' **(ಭಾಷ್ಯಜನ್ಮಭೂಮೇರಿಯಂ ಜನ್ಮಭೂಮಿಃ)** ಎಂಬ ಅಪೂರ್ವವಾದ ಪ್ರಮೋದ ಧ್ವನಿಯು ಶ್ರೀಚರಣರ ಮುಖಾರವಿಂದದಿಂದ, ಅರವಿಂದದಲ್ಲಿ ಮಕರಂದವು ಸ್ರವಿಸುವಂತೆ ಆವಿರ್ಭವಿಸಿತು. ನ್ಯಾಯಪ್ರಸ್ಥಾನವನ್ನು ಅನುಸರಿಸಿ, ಸ್ಮೃತಿಪ್ರಸ್ಥಾನವೂ ಕೂಡ ಬೋಧಿಸಲ್ಪಡಬೇಕೆಂದು ನಿಶ್ಚಯಿಸಿ, ಗೀತೆಯ ಆದಿ ಮತ್ತು ಅಂತ್ಯಶ್ಲೋಕಗಳನ್ನು ಮತ್ತು ಅವುಗಳು ಭಾಷ್ಯಾರ್ಥವನ್ನು ವಿವರಿಸಿದರು. ಹೀಗೆ ಭಾಷ್ಯಾಚಾರ್ಯರ ಜನ್ಮಭೂಮಿಯಲ್ಲಿ ಆರ್ಷಮಾರ್ಗ ಪರಿಪಾಲನ ಜಾಗರೂಕರಾದ ಶೃಂಗಗಿರಿಯ ಮಹಾಸ್ವಾಮಿಗಳಿಂದ ಭಾಷ್ಯೋಪದೇಶವು ಸುಬ್ಬರಾಯರಿಗೆ ಪ್ರಾಪ್ತವಾಯಿತು. ಆಗಲೇ ಶ್ರೀ ಜಗದ್ಗುರುಗಳಿಂದ ಶ್ರೀ ಪಂಚಾಕ್ಷರೀ ಉಪದೇಶವೂ ಆಯಿತು. ಯೋಗಾಯೋಗವೆಂದರೆ ಇದೇ ಎಂದು ಹೇಳಬಹುದು. ಮಹಾತ್ಮರ ಉಪದೇಶವು ವೀರ್ಯವತ್ತರವಾದುದು. ಅಂತಹವರನ್ನು ಆಶ್ರಯಿಸಿದರೆ ಉನ್ನತಿಯು ದೊರಕುವುದರಲ್ಲಿ ಸಂಶಯವಿಲ್ಲ ಅಲ್ಲವೆ !

ಬೀಜಭೂತವಾದ ಈ ಪ್ರಸಂಗವು ಸುಬ್ಬರಾಯರ ಭವಿಷ್ಯಜೀವನದಲ್ಲಿ ಮಹತ್ತರವಾದ ಪರಿಣಾಮವನ್ನುಂಟುಮಾಡಿತು. ಆಚಾರ್ಯರ ಎಲ್ಲ ಗ್ರಂಥಗಳನ್ನೂ ಓದಿ, ಅರ್ಥಮಾಡಿಕೊಂಡು ಪ್ರಾಂತೀಯ ಭಾಷೆಗೆ ಅನುವಾದ ಮಾಡುವಸಾಮರ್ಥ್ಯ ಅವರಲ್ಲಿ ಉಂಟಾಯಿತು. ಈ ರೀತಿ ಅವರು ಕರ್ನಾಟಕದ ಜನತೆಗೆ ಮಹೋಪಕಾರವನ್ನು ಮಾಡಿದರು. ಸಾಂಪ್ರದಾಯಿಕವಾದ ರೀತಿಯಿಂದ ಆಚಾರ್ಯರ ಅಭಿಪ್ರಾಯಗಳ ಮರ್ಮವನ್ನು ತೆಗೆದು ತೋರಿಸಲು ಅವರಿಗೆ ಸಾಧ್ಯವಾಯಿತು. ಜಗದ್ಗುರುಗಳ ಹೃದಯಪೂರ್ವಕವಾಗಿ ಬಂದ ಅನುಗ್ರಹ ಹಾಗೂ ಸತತ ಪರಿಶ್ರಮದಿಂದ ಸುಬ್ಬರಾಯರಲ್ಲಿ ಎಂತಹ ನೈಪುಣ್ಯತೆಯು ವಿಕಾಸವಾಯಿತೆಂದರೆ, ಅವರು ಅದ್ವೈತಾಚಾರ್ಯರೇ ಆದರು. ಅವರು ಸ್ವತಂತ್ರವಾದ ಗ್ರಂಥಗಳನ್ನು ಲೀಲಾಜಾಲವಾಗಿ ರಚಿಸಬಲ್ಲವರಾದರು. ಆದ್ದರಿಂದಲೇ 'ಸತ್ಪಾತ್ರರಲ್ಲಿ ಇಡಲ್ಪಟ್ಟ ವಿದ್ಯೆಯು ವಿಶಿಷ್ಟವಾದ ಘನತೆಯನ್ನು ಪಡೆಯುತ್ತದೆ' ಎಂದು ತಿಳಿದವರು ಹೇಳುತ್ತಾರೆ.

ಸಫಲೀಕೃತ ಮನೋರಥರಾದ ಸುಬ್ಬರಾಯರು ಮತ್ತು ಚಿದಂಬರಯ್ಯನವರು ಕಾಲಟಿ ಗ್ರಾಮದಿಂದ ತಮ್ಮ ಊರಿಗೆ ಹಿಂದಿರುಗಿದರು. ಅನಂತರ ಅವರಿಬ್ಬರೂ ಮೊದಲು ಸಂಕಲ್ಪಿಸಿದ್ದ ಕಾರ್ಯಕ್ರಮದಂತೆ, ಪ್ರಕಾಂಡ ಪಂಡಿತರಾದ ವೇ.ಬ್ರ.ಶ್ರೀ ಹಾನಗಲ್ಲು ವಿರೂಪಾಕ್ಷಶಾಸ್ತ್ರಿಗಳಲ್ಲಿ ಭಾಷ್ಯಗಳ ಅಧ್ಯಯನವನ್ನು ಪ್ರಾರಂಭಿಸಿದರು. ಶಾಸ್ತ್ರಿಗಳು ಸಮಗ್ರಭಾರತದಲ್ಲಿ ಪಾರಂಗತರೆನಿಸಿದ ಪಂಡಿತರ ಮದ್ಯೆ, ಪ್ರಾಚೀನ ಮತ್ತು ನವೀನನ್ಯಾಯಗಳೆರಡರಲ್ಲಿಯೂ ಅನುಪಮವಾದ ಪ್ರಾವೀಣ್ಯವನ್ನು ಸಂಪಾದಿಸಿ, ಸಹೃದಯರೂ ವಿದ್ವಾಂಸರೂ ಆದ ಗೆಳೆಯರ ಮದ್ಯೆ **'ತರ್ಕಪಂಚಾನನ'** ಎಂಬ ಪ್ರಶಂಸೆಗೆ ಪಾತ್ರರಾಗಿದ್ದರು. ಆ ಸಂದರ್ಭದಲ್ಲಿ ವೈದಿಕವಿದ್ಯೆಯನ್ನು ಪ್ರಸಾರ ಮಾಡಲು ಮತ್ತು ವೇದ, ತರ್ಕ, ನ್ಯಾಯ, ವ್ಯಾಕರಣ, ಜ್ಯೋತಿಷ್ಯವೇ ಮುಂತಾದ ಶಾಸ್ತ್ರಗಳನ್ನು ಬೋಧಿಸಲು ಶೃಂಗೇರಿಯ ಮಠಾಧೀಶ್ವರಾದ ಶ್ರೀ ಶಿವಾಭಿನವನೃಸಿಂಹಭಾರತೀಸ್ವಾಮಿಗಳು, **'ಸದ್ವಿದ್ಯಾಸಂಜೀವಿನೀ'** ಎಂಬ ಸಂಸ್ಕೃತ ಮಹಾವಿದ್ಯಾಲಯವನ್ನು (ಉನ್ನತ ವಿದ್ಯಾಭ್ಯಾಸಕ್ಕಾಗಿ) ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಸ್ಥಾಪಿಸಿದರು. (ಕ್ರಿ.ಶ. 1895) ಜಗದ್ಗುರುಗಳೇ ಸ್ವತಃ ಮೂರು ವರ್ಷಗಳು ಅಲ್ಲಿ ವಿದ್ವಾಂಸರುಗಳಿಗೆ ಪ್ರಸ್ಥಾನತ್ರಯಭಾಷ್ಯವನ್ನು ಬೋಧಿಸಿದರು. ಶಾಸ್ತ್ರಿಗಳು ಗುರುಗಳ ಪ್ರಧಾನಶಿಷ್ಯರಾದರು. ಮಹಾಪುರುಷರಿಂದ ಸ್ವೀಕರಿಸಲ್ಪಟ್ಟ ಉಪದೇಶವು, ಅವರ ಮುಂದಿನ ಜೀವನದ ಮೇಲೆ ರಚನಾತ್ಮಕವಾದ ವಿಧಾನದಿಂದ ಪರಿಣಾಮವಿಶೇಷವನ್ನುಂಟು ಮಾಡಿತು. ಸದ್ಗುರು ಮುಖಾರವಿಂದದಿಂದ ಪರಿಗ್ರಹಿಸಲ್ಪಟ್ಟ ವಿದ್ಯೆಯುಳ್ಳ ಶಾಸ್ತ್ರಿಗಳು ಉಳಿದೆಲ್ಲವನ್ನು ಮರೆತು, ಬ್ರಹ್ಮಾನಂದ ಪರವಶರಾಗಿ, ಕ್ರಮಶಃ ಪೂರ್ಣಪ್ರಮಾಣದಿಂದ ಅನುಭವ ಪ್ರಮಾಣಿತವಾದ ವೇದಾಂತಶಾಸ್ತ್ರಕ್ಕೆ ತಮ್ಮನ್ನು ಸಮರ್ಪಿಸಿಕೊಂಡರು. ರಾಯರು ಇವರಲ್ಲಿ ವಿದ್ಯಾಭಾಸ್ಯ ಮಾಡಿ ಹುಬ್ಬಳ್ಳಿಯಲ್ಲಿ ಪ್ರಚಲಿತವಿದ್ದ ವೇದಾಂತ ಪರೀಕ್ಷೆಯಲ್ಲಿ ಬ್ರಹ್ಮಸೂತ್ರಭಾಷ್ಯದ ಚತುಃಸೂತ್ರಿವಿಭಾಗದಲ್ಲಿ ಬಹುಮಾನವನ್ನು ಪಡೆದರು (ಹತ್ತುರೂಪಾಯಿಗಳು). ಹೀಗೆ ಶ್ರುತಿ ಮತ್ತು ನ್ಯಾಯಪ್ರಸ್ಥಾನಗಳಲ್ಲಿ ಅಧಿಗತ ವಿದ್ಯಾಧನವುಳ್ಳ ರಾಯರು ಉಪನಿಷತ್‌ಸಾರಭೂತವಾದ ಗೀತೆಯನ್ನು ಕೂಡ ಆಮೂಲಾಗ್ರವಾಗಿ ಅಧ್ಯಯನ ಮಾಡಲು ಬಯಸಿದರು. ಆಗ ಹುಬ್ಬಳ್ಳಿಯಲ್ಲಿ ಇದ್ದ ರಾಯರು ಅಲ್ಲಿನ ಕುರ್ತಕೋಟಿ ಮಹಾಭಾಗವತರೆಂಬ ಭಕ್ತಶಿರೋಮಣಿಗಳ ಗೀತಾ ಪ್ರವಚನದಿಂದ ಪ್ರಭಾವಿತರಾದರು. ಮಹಾಭಾಗವತರು ಸನಾತನ ಮತ್ತು ಲೌಕಿಕ ವಿದ್ಯೆಗಳೆರಡರಲ್ಲೂ ಲಬ್ಧಪ್ರತಿಷ್ಠರಾಗಿದ್ದರು. ಬ್ರಹ್ಮಚೈತನ್ಯಮಹಾರಾಜರ ನೇರ ಶಿಷ್ಯರಾದ ಅವರು ತಮ್ಮ ಲೌಕಿಕ ವಿದ್ಯಾಭಿಮಾನವನ್ನು ತ್ಯಜಿಸಿ, ಎಲ್ಲೆಡೆಯಲ್ಲಿಯೂ ಗೀತೆಯಲ್ಲಿ

ಉಕ್ತವಾಗಿರುವ ಭಕ್ತಿಯ ಸೌರಭವನ್ನು ಹರಡುತ್ತಿದ್ದರು. ಅವರ ಲಯಚಿಂತನೋಪದೇಶದ ಪ್ರಕಾರದಿಂದ ಆತ್ಮದ ಪಾದತ್ರಯದ ಲಯಕ್ರಮದ ಮೇಲೆ ರಾಯರಿಗೆ ಅವಧಾನವುಂಟಾಯಿತು. ಹೀಗೆ ಎಲ್ಲ ಕಡೆಗಳಿಂದಲೂ ಅವರು ವಿದ್ಯೆಯ ಪ್ರಯೋಜನವನ್ನು ಪಡೆದು ಮುಂದಿನ ಮಹತ್ಕಾರ್ಯಕ್ಕೆ ತಮ್ಮನ್ನು ಅಣಿಗೊಳಿಸಿಕೊಂಡರು.

## ವೈಜ್ಞಾನಿಕ ಚಿಂತನಕ್ರಮೋಪದೇಶ

ಅಭ್ಯಾಸಮಾಡಿದ ವಿಷಯವನ್ನು ತಾನೇ ಚೆನ್ನಾಗಿ ಪರೀಕ್ಷಿಸಿ, ಅದರ ಸತ್ಯಾಸತ್ಯತೆಯನ್ನು ದೃಢೀಕರಿಸಿಕೊಳ್ಳುವುದು ವೈಜ್ಞಾನಿಕವಾದ ಚಿಂತನಕ್ರಮವಾಗಿದೆ. ಭಾರತೀಯ ವಿದ್ಯಾಭ್ಯಾಸಪದ್ಧತಿಯಲ್ಲಿ ಈ ಅಂಶವು ಮನನ ಮತ್ತು ನಿದಿಧ್ಯಾಸನಗಳೆಂದು ಕರೆಯಲ್ಪಡುತ್ತದೆ. ಆದರೆ ಉಪಾಧ್ಯಾಯರಾಗಲೀ, ಶಿಷ್ಯರಾಗಲೀ, ಈ ವಿಧಾನಗಳನ್ನು ಪೂರ್ಣವಾಗಿ ಅನುಸರಿಸುವುದು ಕಂಡುಬರುವುದಿಲ್ಲ, ಕೆಲವರಲ್ಲಿ ಪೂರ್ವಾಚಾರ್ಯರ ಅಭಿಪ್ರಾಯಗಳನ್ನು ಸಂದೇಹದೃಷ್ಟಿಯಿಂದ ಪರೀಕ್ಷಿಸಿ, ದೃಢಪಡಿಸಿಕೊಳ್ಳುವುದು ಉದ್ಧಟತನವೆಂಬ ಭಾವನೆಯಿದ್ದುದು ಕಂಡುಬರುತ್ತದೆ. ಆದರೆ ಜ್ಞಾನದ ವಿಷಯದಲ್ಲಿ ಪೂರ್ವೋತ್ತರ ಭೇದವಾಗಲೀ, ಉಚ್ಚನೀಚಭಾವನೆಯಾಗಲೀ ಇರಬಾರದು. ಸತ್ಯವಾದ ವಿಷಯವನ್ನು **'ಬಾಲಾದಪಿ ಶುಕಾದಪಿ'** ಗ್ರಹಣಮಾಡಬಹುದು. ಇಂತಹ ಮನೋವೈಶಾಲ್ಯವನ್ನು ಸುಬ್ಬರಾಯರು ಅವರ ಪ್ರಿಯ ಗುರುಗಳಾದ ಕೃಷ್ಣಸ್ವಾಮಿ ಅಯ್ಯರ್‌ರವರಿಂದ ಪಡೆದರು.

ಕ್ರಿ.ಶ. 1919ರಲ್ಲಿ ರಾಯರು ಬೆಂಗಳೂರಿಗೆ ವರ್ಗವಾಗಿ ಬಂದರು. ಆ ವೇಳೆಗೆ ವೇದಾಂತವೇ ಅವರ ಜೀವನ ಸರ್ವಸ್ವವಾಗಿತ್ತು. ಆರ್ಥಿಕವಾದ ಅಡಚಣೆಗಳಿದ್ದರೂ, ಗೃಹಪಾಠಗಳನ್ನು ಒಪ್ಪಿಕೊಳ್ಳದೆ, ಪೂರ್ಣಸಮಯವನ್ನು ವೇದಾಂತದ ಅಧ್ಯಯನಕ್ಕಾಗಿಯೇ ಮೀಸಲಾಗಿಟ್ಟಿದ್ದರು. ಬೆಂಗಳೂರಿನಲ್ಲಿ ಅವರಿಗೆ ಸರ್ವಶ್ರೀ ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳು, ವೆಂಕಟೇಶ ಶಾಸ್ತ್ರಿಗಳು, ನಂಜುಂಡಶಾಸ್ತ್ರಿಗಳು, ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳು, ಗಂಗಾಧರಶಾಸ್ತ್ರಿಗಳು ಮುಂತಾದ ಮಹಾವಿದ್ವಾಂಸರ ಪರಿಚಯ ಲಾಭವಾಯಿತು. ಇದರಿಂದ ಅವರ ವೇದಾಂತಜ್ಞಾನವು ಪುಟವಿಟ್ಟ ಚಿನ್ನವಾಯಿತು. ಇಲ್ಲಿಯೇ ಹದಿನೈದು ವರ್ಷಗಳ ನಂತರ, ಕೃಷ್ಣಸ್ವಾಮಿಅಯ್ಯರ್‌ರವರೊಂದಿಗೆ ಪುನರ್ಮಿಲನದ ಸುವರ್ಣಾವಕಾಶವು ದೊರಕಿತು. ಅವರಿಬ್ಬರ ಗುರುಶಿಷ್ಯಸಂಬಂಧವು ಶ್ರೀರಾಮಕೃಷ್ಣ ಪರಮಹಂಸರು ಮತ್ತು ವಿವೇಕಾನಂದರನ್ನು ನೆನಪಿಗೆ

ತರುತ್ತದೆ. ಪ್ರತಿದಿನವೂ ವಾಯುವಿಹಾರ ಸಮಯದಲ್ಲಿ ಅವರಿಬ್ಬರ ಮಧ್ಯೆ ಪ್ರೌಢ ವಿಚಾರಚರ್ಚೆಗಳು ನಡೆಯುತ್ತಿದ್ದವು. ಮುಂದಿನ ಶುದ್ಧಶಾಂಕರಪ್ರಕ್ರಿಯಾ ಸಂಶೋಧನೆಯ ವಿಷಯದಲ್ಲಿ ಇದು ಪ್ರಥಮಪ್ರಯತ್ನವು. ವೇದಾಂತಕ್ಷೇತ್ರದಲ್ಲಿ ಅವಸ್ಥಾತ್ರಯ ವಿಮರ್ಶೆಯ ವಿಧಾನದ ಔಚಿತ್ಯವೂ ಅಯ್ಯರ್‌ರವರಿಂದಲೇ ಸುಬ್ಬರಾಯರಿಗೆ ಮನದಟ್ಟಾಯಿತು.

## ಕೃಷ್ಣಸ್ವಾಮಿ ಅಯ್ಯರ್‌ರವರ ಸಾರಸ್ವತ ಸೇವಾ ಪರಿಚಯ

ಅಯ್ಯರ್ ಮಹಾಶಯರು ಸ್ವತಃ ವೇದಾಂತಕೃತಿಗಳ ರಚನಾಕಾರರಾಗಿದ್ದರು. ಅವರು ಆಂಗ್ಲಭಾಷೆಯಲ್ಲಿ *Fundamentals of Vedanta* ಎಂಬ ವಿಷಯ ವನ್ನು ಆಧರಿಸಿ ಪ್ರಸಿದ್ಧ ಉಪನ್ಯಾಸವೊಂದನ್ನು ಮಾಡಿದ್ದರು. ಈ ಉಪನ್ಯಾಸವು ಸುಬ್ಬರಾಯರಿಂದ **'ವೇದಾಂತ ಪ್ರಕ್ರಿಯಾರಹಸ್ಯಂ'** ಎಂಬ ಹೆಸರಿನಿಂದ ಸಂಸ್ಕೃತ ಭಾಷೆಗೆ ಅನುವಾದ ಮಾಡಲ್ಪಟ್ಟಿತು. ಸುಪ್ರಸಿದ್ಧವಿದ್ವಾಂಸರಾದ ಪಾಲ್ ಡಾಯ್ಸನ್ ಎಂಬುವರ *Elements of Metaphysics* ಗ್ರಂಥದ ಮೇಲೆ ಅಯ್ಯರ್‌ರವರು ಒಂದು ವಿಮರ್ಶಾತ್ಮಕ ಪ್ರಬಂಧವನ್ನು ಬರೆದರು. ಈ ಲೇಖನವು ವಿದೇಶಗಳಲ್ಲಿಯೂ ಮೆಚ್ಚುಗೆಯನ್ನು ಗಳಿಸಿತ್ತು. ಶ್ರೀವಿದ್ಯಾರಣ್ಯಮುನಿಪ್ರಣೀತವಾದ ಪಂಚದಶೀ ಗ್ರಂಥ ವನ್ನು ಆಂಗ್ಲಭಾಷೆಗೆ ಅನುವಾದ ಮಾಡಿದರು.

ಅವರ ಮಹೋನ್ನತ ಕೃತಿಯು, ಅವಸ್ಥಾತ್ರಯಪರೀಕ್ಷಣವನ್ನು ಆಧರಿಸಿ ರಚಿಸಿರುವ *Vedanta or The Science of Reality* ಎಂಬ ಗ್ರಂಥ. ಇದು ಕ್ರಿ.ಶ. 1930ರಲ್ಲಿ ಪ್ರಕಟಿತವಾಯಿತು. ದೇಶದ ದೈನಂದಿನ ಹಾಗೂ ವಾರಪತ್ರಿಕೆಗಳು ಆಗ ಈ ಗ್ರಂಥವನ್ನು ವಿಮರ್ಶಿಸಿ ಮುಕ್ತಕಂಠದಿಂದ ಪ್ರಶಂಸೆಮಾಡಿದವು. ಗ್ರಂಥದ ಪೀಠಿಕೆಯನ್ನು ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರು ಬರೆದಿರುತ್ತಾರೆ. ಈ ಬೃಹತ್ ಗ್ರಂಥವು ಐದುನೂರು ನಲವತ್ತಮೂರು ಪುಟಗಳನ್ನು ಒಳಗೊಂಡಿದೆ. ಇದರಲ್ಲಿ ವೇದಾಂತವು ವೈಜ್ಞಾನಿಕ ತತ್ತ್ವಾನುಸಾರದಿಂದ ವಿಶ್ಲೇಷಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಇಪ್ಪತ್ತೈದು ಅಧ್ಯಾಯಗಳಿವೆ. ಗ್ರಂಥದ ಪ್ರಥಮಾರ್ಧವು ಅವಸ್ಥಾತ್ರಯವನ್ನು ವೈಜ್ಞಾನಿಕ ವಾಗಿ ಚೆನ್ನಾಗಿ ವಿವೇಚಿಸುತ್ತದೆ. ಉತ್ತರಭಾಗವಾದರೋ ಪಾಶ್ಚಾತ್ಯಾ ತತ್ತ್ವಶಾಸ್ತ್ರದ ವಿಮರ್ಶೆಗೆ ವಿನಿಯೋಗಿಸಲ್ಪಟ್ಟಿದೆ. ಈ ಗ್ರಂಥವು ಸುಬ್ಬರಾಯರ ಮೇಲೆ ಪ್ರಗಾಢವಾದ ಪರಿಣಾಮವನ್ನುಂಟುಮಾಡಿತು. ಅಯ್ಯರ್‌ರ ಆಧುನಿಕ ಚಿಂತನದಿಂದ ರಾಯರು ಪ್ರಭಾವಿತರಾದರು. ಮೊದಲು ಅವರು ಸಾಂಪ್ರದಾಯಿಕವಾದ ವೇದಾಂತಾಧ್ಯಯನ ದಿಂದ ಸನಾತನ ಜ್ಞಾನಭಾಂಡಾಗಾರವನ್ನು ಸ್ವಾಯತ್ತೀಕರೆಸಿ ಕೊಂಡಿದ್ದರು. ಈಗ

ಅಯ್ಯರ್‌ರವರ ಸಂಪರ್ಕದಿಂದ ವೈಜ್ಞಾನಿಕ ವಿಶ್ಲೇಷಣಾ ಮನೋಭಾವನೆಯು ಜಾಗ್ರತವಾಯಿತು. ಬಹುಕಾಲದಿಂದ ಸತತ ಅಭ್ಯಾಸ ಮತ್ತು ಪಂಡಿತರ ಸಹವಾಸ ದಿಂದ ಸುಬ್ಬರಾಯರು ಉಪಾಧಿಗಳ ಮಾಲೆಯಿಲ್ಲದಿದ್ದರೂ, ಪಂಡಿತಪ್ರವರರೆನಿಸಿದರು. ಕ್ರಮವಾಗಿ ಮತ್ತು ಕಣಕಣವಾಗಿ ಎಲ್ಲ ದಿಕ್ಕುಗಳಿಂದಲೂ ಜ್ಞಾನವಾಹಿನಿಯನ್ನು ಸ್ವೀಕರಿಸಿ ವೇದಾಂತದಲ್ಲಿ ಪರಿಪೂರ್ಣವಿದ್ದರಾದುದಲ್ಲದೆ, ಅದರ ಸುಗಂಧವನ್ನು ಎಲ್ಲರಿಗೂ ವಿತರಿಸಲೂ ಕೂಡ ಸಾಮರ್ಥ್ಯವನ್ನು ಪಡೆದರು.

* * * * *

# ಅಧ್ಯಾಯ - 6

# ವಿವಾಹ ಮತ್ತು ಗೃಹಸ್ಥಾಶ್ರಮ

ಗೃಹಸ್ಥಾಶ್ರಮವು ಎಲ್ಲ ಉಳಿದ ಆಶ್ರಮಗಳಿಗೂ ಆಶ್ರಯಸ್ಥಾನವಾಗಿ ರುವುದರಿಂದ ಅದಕ್ಕೆ ಒಂದು ವಿಶಿಷ್ಟವಾದ ಸ್ಥಾನವಿದೆ. ಮನುವು ಕೂಡ ಗೃಹಸ್ಥಧರ್ಮ ವನ್ನು ವಿಶೇಷವಾಗಿ ಪ್ರಶಂಸೆ ಮಾಡಿರುತ್ತಾನೆ. ಬ್ರಹ್ಮಚರ್ಯಾಶ್ರಮದಲ್ಲಿ ಯಥಾಕ್ರಮ ವಾಗಿ ವಿದ್ಯಾಭ್ಯಾಸವನ್ನು ಪೂರೈಸಿ, ಗುರುಗಳ ಅಪ್ಪಣೆಯನ್ನು ಪಡೆದು ಗೃಹಸ್ಥಾಶ್ರಮ ವನ್ನು ಪ್ರವೇಶಿಸಬೇಕು. ಗೃಹಸ್ಥನ ಕರ್ಮಗಳನ್ನು ಚೆನ್ನಾಗಿ ನೆರವೇರಿಸಿ, ಋಣತ್ರಯ ದಿಂದ ಮುಕ್ತನಾಗಿ ವಾನಪ್ರಸ್ಥಾಶ್ರಮವನ್ನು ಅನುಸರಿಸಿ ಕೊನೆಯಲ್ಲಿ ಸಂನ್ಯಾಸದಿಂದ ದೇಹತ್ಯಾಗವನ್ನು ಮಾಡ ಬೇಕೆಂದು ಧರ್ಮಶಾಸ್ತ್ರ ಹೇಳುತ್ತದೆ. ಆದರೆ ಮಧ್ಯಯುಗ ದಲ್ಲಿ ಬಾಲ್ಯವಿವಾಹವು ಎಲ್ಲ ಕಡೆಯೂ ಬಳಕೆಗೆ ಬಂದಂತೆ ಕಾಣುತ್ತದೆ. ಕೇವಲ ಬಾಲಿಕೆಯರಷ್ಟೇ ಅಲ್ಲ, ಬಾಲಕರೂ ಕೂಡ ತಮ್ಮ ವಿದ್ಯಾಭ್ಯಾಸವು ಪೂರೈಸುವ ಮೊದಲೇ ಗೃಹಸ್ಥಾಶ್ರಮವನ್ನು ಸ್ವೀಕರಿಸುತ್ತಿದ್ದರು.

ಅಂದಿನ ಪದ್ಧತಿಗೆ ಅನುಗುಣವಾಗಿ ಸುಬ್ಬರಾಯರ ವಿವಾಹವು ಅವರ ಹದಿನಾಲ್ಕನೆಯ ವಯಸ್ಸಿನಲ್ಲಿಯೇ ನೆರವೇರಿತು. ವಧುವು ಅರಸೀಕೆರೆ ಪಟ್ಟಣದ ಶ್ರೀಮೈಲಾರಜೋಯಿಸರ ಮಗಳಾದ **ವೆಂಕಟಲಕ್ಷ್ಮಮ್ಮ**ನೆಂಬುವವರು. ಕಡೂರಿನಲ್ಲಿ ಇವರ ವಿವಾಹವು ವಿಜೃಂಭಣೆಯಿಂದ ನೆರವೇರಿತು. ಬಾಲ್ಯದಲ್ಲಿಯೇ ಪತಿಗೃಹಕ್ಕೆ

ಬಂದ ಆಕೆ ಮನೆಯ ಆಚಾರವ್ಯವಹಾರಗಳಿಗೆ ಹೊಂದಿಕೊಂಡು ಆದರ್ಶ ಗೃಹಿಣಿ ಯೆನಿಸಿದರು. ಶಾಲೆಯ ಶಿಕ್ಷಣ ಹೆಚ್ಚಾಗಿಲ್ಲದಿದ್ದರೂ ತಮ್ಮ ಚಾರಿತ್ರ್ಯ ಮತ್ತು ಸದ್ವರ್ತನೆಗಳಿಂದ ಪತಿಯ ಕಾರ್ಯಗಳಿಗೆ ಪ್ರೋತ್ಸಾಹದಾಯಿನಿಯಾದರು. ಪತಿಯ ಮಾತೇ ವೇದವಾಕ್ಯ ಮತ್ತು ಅವನ ಉನ್ನತಿಯೇ ಜೀವನದ ಧ್ಯೇಯವೆಂದು ಅವರು ತಿಳಿದಿದ್ದರು. ಅಹರ್ನಿಶಿ ಕಷ್ಟಸುಖಗಳೆರಡರಲ್ಲಿಯೂ ನೆರಳಿನಂತೆ ಅನುಸರಿಸುವುದೇ ಸತೀಧರ್ಮವು ಎಂದರಿತು ಹಾಗೆಯೇ ನಡೆದರು.

ರಾಯರು ಹೊಳಲ್ಕೆರೆಯಲ್ಲಿ ಉಪಾಧ್ಯಾಯರಾಗಿ ನೇಮಕವಾದ ನಂತರ ಶ್ರೀಮತಿಯನ್ನು ಕರೆದುಕೊಂಡು ಹೋಗಿ ಸಂಸಾರ ಹೂಡಿದರು. ಮುಂದೆ ನಾಲ್ಕೈದು ತಿಂಗಳಿಗೆ ಅವರಿಗೆ ಖಾಯಂ ಉದ್ಯೋಗದ ಮೇಲೆ ಮೊಳಕಾಲ್ಮೂರಿಗೆ ವರ್ಗವಾಯಿತು. ಮುಂದೆ ಹೊಸದುರ್ಗಕ್ಕೆ ಮುಖ್ಯೋಪಾಧ್ಯಾಯರಾಗಿ ಹೋಗಬೇಕಾಯಿತು. ಹೊಸದುರ್ಗದಲ್ಲಿ ಪುತ್ರವಿಯೋಗವನ್ನು ಅನುಭವಿಸಿದ ರಾಯರು ಪತ್ನಿಯನ್ನು ಸಮಾಧಾನಪಡಿಸಿ ಮತ್ತೆ ಹೊಳಲ್ಕೆರೆಗೆ ಹೋದರು. 1907ರಲ್ಲಿ ರಾಯರಿಗೆ ಮತ್ತೆ ಪುತ್ರೋತ್ಸವವಾಯಿತು. ಈ ಬಾಲಕನೇ ಮುಂದೆ ರಾಯರ ಕೆಲಸಗಳಿಗೆ ಹೆಗಲು ಕೊಟ್ಟು, ಕಾರ್ಯಾಲಯದ ಪ್ರಮುಖ ರೂವಾರಿಯೆನಿಸಿದ **ನರಸಪ್ಪ**ನವರು. ಅಂದಿನ ಗೃಹಸ್ಥಜೀವನ ಬಹಲ ಕಠಿನಪರಿಸ್ಥಿತಿಯಿಂದ ಕೂಡಿರುತ್ತಿತ್ತು. ಎಲ್ಲ ಕಡೆಗಳಲ್ಲಿಯೂ ಪ್ಲೇಗಿನಂತಹ ಮಾರಕರೋಗಗಳ ಕಾಟ ಬರುತ್ತಿದ್ದ ಹದಿನೈದು ರೂಪಾಯಿಗಳ ಸಂಬಳ ದಲ್ಲಿ ಜೀವನ ನಡೆಯಬೇಕಾಗಿತ್ತು. ಹೊಳಲ್ಕೆರೆಯಲ್ಲಿ ಅವರು ಇದ್ದಾಗ ಖರ್ಚನ್ನು ನಿಭಾಯಿಸಲು ಪತ್ನಿಯ ಮೈಮೇಲಿನ ಒಡವೆಗಳನ್ನು ಮಾರುವ ಪರಿಸ್ಥಿತಿ ಯನ್ನು ಎದುರಿಸಬೇಕಾಯಿತು. ಇಂತಹ ಪರಿಸ್ಥಿತಿಯಲ್ಲಿಯೂ ಅವರ ವೇದಾಂತದ ಅಭ್ಯಾಸ ಮತ್ತು ಆಸಕ್ತಿ ನಿರಂತರವಾಗಿ ಮುಂದುವರಿಯಿತು. ನಿಜವಾದ ತಪಸ್ಸು ಇದೆ ಎಂದು ತಿಳಿದವರು ಹೇಳುತ್ತಾರೆ. ವಿಘ್ನಗಳು ಮತ್ತೆ ಮತ್ತೆ ಎದುರಾಗುತ್ತಿದ್ದರೂ ಧೀರರು ತಮ್ಮ ಪ್ರಯತ್ನವನ್ನು ಕೈಬಿಡುವುದಿಲ್ಲ.

1911ರಲ್ಲಿ ರಾಯರಿಗೆ ಪಿತೃವಿಯೋಗವಾಯಿತು. ಅವರು ಆಗ ದಾವಣಗೆರೆ ಯಲ್ಲಿ ಇದ್ದರು. ತಂದೆಗೆ ಅನಾರೋಗ್ಯವೆಂದು ತಿಳಿದು ಅವರು ಹೊರಟುಬರುವಷ್ಟರಲ್ಲಿ ತಂದೆಯವರು ಸ್ವರ್ಗಸ್ಥರಾಗಿ, ದಹನಕಾರ್ಯವೂ ಮುಗಿದುಹೋಗಿತ್ತು. ಅವರಿಗೆ ಅಂತ್ಯದರ್ಶನ ಪುಣ್ಯವೂ ದೊರಕಲಿಲ್ಲ, ಇದಕ್ಕೆ ಎರಡು ವರ್ಷ ಮೊದಲೇ, ತಾಯಿ ಮುತ್ತೈದೆಯಾಗಿ ತೀರಿಕೊಂಡಿದ್ದರು. ಇಂತಹ ಕಷ್ಟದ ದಿನಗಳಲ್ಲಿಯೂ ಅವರ ವೇದಾಂತ ಸೇವೆ ನಡೆಯುತ್ತಲೇ ಇತ್ತು. ದಾವಣಗೆರೆಯಲ್ಲಿದ್ದಾಗ ಅವರಿಗೆ ಸಾಲದ

ಬಾಧೆಯೂ ವಿಪರೀತವಾಗಿತ್ತು. ಇಲ್ಲಿಂದ ಕಳೂರುಕಟ್ಟೆಯೆಂಬ ಮಲೆನಾಡಹಳ್ಳಿಗೆ ಅವರಿಗೆ ವರ್ಗವಾಯಿತು. ಅಲ್ಲಿ ಯಾವುದೇ ಆಹಾರ ಪದಾರ್ಥಗಳಾಗಲೀ, ತರಕಾರಿಗಳಾಗಲೀ, ದೊರಕುತ್ತಿರಲಿಲ್ಲ. ಆಗ ರಾಯರು ಗರ್ಭಿಣಿಯಾದ ಹೆಂಡತಿಯನ್ನು ತವರು ಮನೆಗೆ ಕಳಿಸಿ, ತಾವು ಮಾತ್ರ ಅಲ್ಲಿಯೇ ಉಳಿದುಕೊಂಡು, ಸಿಕ್ಕದ ಹೆಚ್ಚಿನ ಬಿಡುವನ್ನು ವೇದಾಂತಸಂಬಂಧವಾದ ಅಭ್ಯಾಸಕ್ಕೆ ಬಳಸಿಕೊಂಡರು. ಹೀಗೆ ಕಷ್ಟವನ್ನು ಮರೆತು, ವೇದಾಂತವನ್ನು ಸರ್ವಸ್ವವನ್ನಾಗಿ ಭಾವಿಸುವ ಶಕ್ತಿ ಅವರಲ್ಲಿ ಸ್ವಾಭಾವಿಕವಾಗಿತ್ತು.

ಕಳೂರುಕಟ್ಟೆಯಿಂದ ರಾಯರ ಮಡದಿ ತವರುಮನೆಯಾದ ಅರಸೀಕೆರೆಗೆ ಹೋದುದು ಸರಿಯಷ್ಟೇ! ಆ ಸಮಯದಲ್ಲಿ ಎಲ್ಲ ಕಡೆಗಳಲ್ಲಿ ಇನ್‌ಫ್ಲುಯಂಜಾ ಎಂಬ ರೋಗವು ಬಲವಾಗಿ ಹರಡಿದ್ದು, ಬಹಳ ಜನರನ್ನು ಆಹುತಿ ತೆಗೆದುಕೊಳ್ಳುತ್ತಿತ್ತು. ಈ ರೋಗಕ್ಕೆ ರಾಯರು, ಅವರ ಪುತ್ರ ನರಸಪ್ಪನವರು ಮತ್ತು ಅವರ ಧರ್ಮಪತ್ನಿಯವರು ಮೂವರೂ ತುತ್ತಾದರು. ರಾಯರಿಗೂ ಮತ್ತು ಅವರ ಪುತ್ರರಿಗೂ ರೋಗ ವಾಸಿಯಾಯಿತು. ಇದು ನಿಜಕ್ಕೂ ನಮ್ಮ ನಾಡಿನ, ಅಷ್ಟೇಕೆ ಇಡೀ ಅದ್ವೈತ ಸಾಮ್ರಾಜ್ಯದ ಸೌಭಾಗ್ಯವೆಂದೇ ಹೇಳಬೇಕು. ಶ್ರೀಗಳವರಿಂದ ಮುಂದೆ ನಡೆಯಬೇಕಾಗಿದ್ದ ಅಪಾರವಾದ ಸೇವಾ ಕೈಂಕರ್ಯವನ್ನು ಮನಗಂಡು ಪರಮಾತ್ಮ ಅವರನ್ನು ಪಾರುಮಾಡಿದನು. ಹಾಗೆಯೇ ಅವರ ಪುತ್ರರು ತಂದೆಯವರು ಬರೆದ ಗ್ರಂಥಗಳ ಮುದ್ರಣ ಮತ್ತು ಪ್ರಸಾರವನ್ನು ಕೈಗೊಂಡು ಅಪಾರವಾದ ಸೇವೆಯನ್ನು ಮಾಡಿದರು. ಇಂದು ನಾವು ಅವರಿಬ್ಬರ ಅನವರತ ಪರಿಶ್ರಮದ ಫಲವನ್ನು ಕಾಣುತ್ತಿದ್ದೇವೆ. ರಾಯರ ಪತ್ರಿಯವರು ಮಾತ್ರ ಈ ಕಾಯಿಲೆಯಿಂದ ಪಾರಾಗಲಿಲ್ಲ. ಆ ತುಂಬು ಗರ್ಭಿಣಿಯಾಗಿದ್ದ ಆಕೆಗೆ ಈ ರೋಗದ ಬಾಧೆಯನ್ನು ತಡೆಯಲು ಆಗಲಿಲ್ಲ. ಹೆಣ್ಣುಮಗುವೊಂದನ್ನು ಪ್ರಶಂಸಿಸಿ, ಆಕೆ ಮುತ್ತೈದೆಯಾಗಿ ಇಹಲೋಕವನ್ನು ತ್ಯಜಿಸಿದರು. ಆ ಸಲದ ಮಗುವೂ ಉಳಿಯಲಿಲ್ಲ.

ಆಗ ರಾಯರಿಗೆ ಸುಮಾರು 35 ವರ್ಷದ ಪ್ರಾಯವಷ್ಟೇ ಆಗಿತ್ತು. ಒಂದು ಗಂಡು ಮತ್ತು ಮೂರು ಹೆಣ್ಣು , ಹೀಗೆ ನಾಲ್ಕು ಮಕ್ಕಳು ಇದ್ದರು. ನರಸಪ್ಪನೇ ದೊಡ್ಡವನು. ಉಳಿದ ಹೆಣ್ಣುಮಕ್ಕಳು ಕ್ರಮವಾಗಿ ಎಂಟು, ಐದು ಮತ್ತು ಎರಡು ವರ್ಷ ಪ್ರಾಯದವರುಗಳು. ನರಸಪ್ಪನಿಗೆ ಉಪನಯನ ಸಂಸ್ಕಾರವಾಗಿತ್ತು. ತಿಮ್ಮಪ್ಪನರೆಂಬುವವರ ಸಹಾಯದಿಂದ ಶವಸಂಸ್ಕಾರವನ್ನು ನೆರವೇರಿಸಿ, ಮುಂದೆ ಹರಿಹರದಲ್ಲಿ

ಮನೆಯಲ್ಲಿ ಉಳಿದ ಕರ್ಮಗಳನ್ನು ರಾಯರು ಮಾಡಿಸಿದರು. ಹೀಗೆ ಧರ್ಮಪತ್ನಿಗೆ ಸದ್ಗತಿಯನ್ನು ಕಾಣಿಸಿ, ಮಕ್ಕಳೊಡನೆ ಬೆಂಗಳೂರಿಗೆ ಹಿಂದಿರುಗಿ ಬಂದರು.

ಹಲವು ಊರುಗಳನ್ನು ಸುತ್ತಿ, ಕೊನೆಗೆ ಬೆಂಗಳೂರಿಗೆ ಬಂದ ರಾಯರು ಅಯ್ಯರ್ ಅವರ ಮಕ್ಕಳಿಗೆ ಪಾಠ ಹೇಳುವ ಸಲುವಾಗಿ ಅವರ ಮನೆಗೆ ನಿತ್ಯ ಹೋಗ ಬೇಕಾಗಿದ್ದ ರಾಯರು ಈ ಅವಕಾಶವನ್ನು ಅಯ್ಯರ್‌ರವರೊಂದಿಗೆ ವೇದಾಂತ ಚರ್ಚೆಗೆ ಬಳಸಿಕೊಂಡರು. ಆಸಕ್ತಿಯಿದ್ದ ಕಡೆ ಅವಕಾಶ ಸಿಕ್ಕಿಯೇ ಸಿಕ್ಕುತ್ತದೆ. ಇನ್ನೂ ಅನೇಕ ಜನರು ರಾಯರನ್ನು ತಮ್ಮ ಮಕ್ಕಳಿಗೆ ಮನೆಪಾಠ ಹೇಳಬೇಕೆಂದು ಕೇಳುತ್ತಿದ್ದರು. ಅದರಿಂದ ದೊರೆಯಬಹುದಾದ ಹಣದಿಂದ ಅವರ ಸಾಲದ ಸಮಸ್ಯೆಯೂ ಬಗೆಹರಿ ಯುವ ಸಾಧ್ಯತೆಯಿತ್ತು. ಆದರೆ ವೇದಾಂತಭ್ಯಾಸಕ್ಕೆ ತೊಂದರೆಯಾಗುವುದೆಂದು ರಾಯರು ಅವುಗಳನ್ನು ನಿರಾಕರಿಸಿದರು. ಇದೇ ನಿಜವಾದ ವೇದಾಂತಿಯ ಲಕ್ಷಣ.

ಬೆಂಗಳೂರಿನಲ್ಲಿ ಚಿಕ್ಕಮಕ್ಕಳಿಗೆ ತಾವೇ ತಾಯಿಯೂ ತಂದೆಯೂ ಆಗಿ ಕಷ್ಟದಿಂದ ಜೀವನ ನಡೆಸಬೇಕಾಯಿತು. ಸ್ವಲ್ಪ ಕಾಲದ ನಂತರ ಅವರ ಸಹೋದರಿ ಯಾದ ಲಕ್ಷ್ಮಕ್ಕನವರು ಸಹಾಯಕ್ಕೆಬಂದರು. ರಾಯರಲ್ಲಿದ್ದ ದೈವಭಕ್ತಿ ಮತ್ತು ಶ್ರದ್ಧೆ ಇಂತಹ ಕಷ್ಟಕಾಲವನ್ನು ಕಳೆಯಲು ನೆರವಾಯಿತು. ರಾಯರ **ಪದತ್ರಯ**ವೆಂಬ ಕನ್ನಡ ವ್ಯಾಕರಣಪುಸ್ತಕ ಶಾಲೆಯಲ್ಲಿ ಪಠ್ಯಪುಸ್ತಕವಾಗಿ ಅಂಗೀಕೃತವಾದುದರಿಂದ, ಅವರಿಗೆ 300 ರೂಪಾಯಿಗಳು ಬಂದವು. ಅದರಿಂದ ಸಾಲದ ಹೊರೆ ಕಡಿಮೆಯಾಯಿತು. ರಾಯರಿಗೆ ತಮ್ಮ ವೇದಾಂತಸೇವೆ ಮಾಡಲು ಸ್ವಲ್ಪ ಬಿಡುವೂ ಸಿಕ್ಕಿದಂತಾಯಿತು. ಎರಡನೆಯ ವಿವಾಹದ ಅಪೇಕ್ಷೆ ಅವರಿಗೆ ಎಂದಿಗೂ ಇರಲಿಲ್ಲ, ಪರಮಾತ್ಮ ತಮ್ಮ ಬಂಧನಗಳನ್ನೆಲ್ಲ ಪರಿಹರಿಸಿ, ವೇದಾಂತಸೇವೆಗೆ ಅವಕಾಶ ಮಾಡಿಕೊಟ್ಟರೆ ಸಾಕೆಂದು ಅವರು ಬಯಸುತ್ತಿದ್ದರು. ಬಹಳ ಚಿಕ್ಕವಯಸ್ಸಿನಲ್ಲಿ ಹಿರಿಯರ ಅಪೇಕ್ಷೆಯಂತೆ ನಡೆದ ವಿವಾಹದ ಜವಾಬ್ದಾರಿಯನ್ನು ಅವರು ಪರಮಾತ್ಮನ ಸೇವೆಯೆಂಬಂತೆಯೇ ನಿರ್ವಹಿಸಿ, ನಿಶ್ಚಿಂತರಾದರು.

**ವಾಕ್ಯರಚನಾಕ್ರಮ**ವೆಂಬ ಅವರ ಮತ್ತೊಂದು ಕನ್ನಡವ್ಯಾಕರಣದ ಕೃತಿ ಶಾಲೆಗಳಿಗೆ ಪಠ್ಯಪುಸ್ತಕವಾಗಿ ಮಂಜೂರಾಯಿತು. ಇದರಿಂದ ಬಂದ ಹಣದಿಂದ ತಮ್ಮ ಮೊದಲ ಮಗಳ ವಿವಾಹವನ್ನು ಮಾಡಿಬಿಡಲು ಅವರು ನಿಶ್ಚಯಿಸಿದರು. ಅದರಂತೆ ಕಣಕಟ್ಟೆಯ ಸೀತಾರಾಮ ದೀಕ್ಷಿತರೆಂಬ ವರನೊಂದಿಗೆ ವಿವಾಹವು ನಿಶ್ಚಯವಾಯಿತು.

ಗಂಡಿನ ಕಡೆಯವರು ಹೆಣ್ಣನ್ನು ಸಹ ನೋಡದೆ, ರಾಯರ ಒಳ್ಳೆಯತನಕ್ಕೆ ಮೆಚ್ಚಿ ವಿವಾಹಕ್ಕೆ ಒಪ್ಪಿಗೆಯನ್ನಿತ್ತರು. ಭಗವದನುಗ್ರಹದಿಂದ ಎಲ್ಲ ಏರ್ಪಾಡುಗಳೂ ಸುಸೂತ್ರ ವಾಗಿ ನಡೆದವು. ರಾಯರ ತಮ್ಮಂದಿರು ಯಲ್ಲಂಬಳಸೆಯಲ್ಲಿ ವಿವಾಹದ ಏರ್ಪಾಡು ಗಳನ್ನು ಮಾಡಿ ಬೀಗರ ಉಪಚಾರಗಳನ್ನೆಲ್ಲ ಮಾಡಿದರು. ಸ್ನೇಹಿತರು, ಬಂಧುಗಳು ಎಲ್ಲರೂ ಸೇರಿ ಸಮಾರಂಭವು ವಿಜೃಂಭಣೆಯಿಂದ ನಡೆಯಿತು.

ಸಾಮಾನ್ಯವಾಗಿ ವಿವಾಹದ ಮಂಟಪದಲ್ಲಿ ಮೋಜಿನ ಜನರೇ ಸೇರುವುದನ್ನು ನೋಡಿದ್ದೇವೆ. ಆದರೆ ಈ ಮದುವೆಯಲ್ಲಿ ಮಾತ್ರ ಬರಕದ ಶ್ರೀಕಂಠಯ್ಯನೆಂಬುವ ವರು ರಾಯರ ಮರ್ಜಿಯನ್ನು ಅನುಸರಿಸಿ, ಪೂಜೆ, ಭಜನೆ, ಪುರಾಣಗಳನ್ನು ಭಕ್ತಮಂಡಳಿಯವರಿಂದ ಏರ್ಪಡಿಸಿದ್ದರು. ರಾಯರು ನಿಶ್ಚಿಂತೆಯಿಂದ ಈ ಭಕ್ತರ ಮಧ್ಯೆ ಸೇರಿಹೋಗಿದ್ದರು. ಎಷ್ಟೋ ಜನ ರಾಯರನ್ನು ನೋಡದವರು, ಅವರನ್ನು ಕೇವಲ ಭಜನಮಂಡಳಿಯ ಒಬ್ಬ ಸದಸ್ಯನಂತೆ ಭಾವಿಸಿದ್ದರಂತೆ! ಒಬ್ಬರಂತೂ ರಾಯ ರನ್ನು ನೀವು ಯಾವಾಗ ಹೊರಡುವಿರಿ? ಮನೆಯ ಯಜಮಾನರಿಗೂ ನಿಮಗೂ ಏನು ಸಂಬಂಧ? ಎಂದು ಕೇಳಿದರಂತೆ! ವ್ಯವಹಾರದ ಯೋಚನೆಯೇ ಇಲ್ಲದೆ ಜನಕನಂತೆ ಪರಮಾರ್ಥದಲ್ಲಿ ಸೇರುವುದು ಸಾಧ್ಯವೆಂಬುದನ್ನು ರಾಯರು ತಮ್ಮ ಈ ರೀತಿಯ ನಡವಳಿಕೆಯಿಂದ ತೋರಿಸಿಕೊಟ್ಟು ಮಾರ್ಗದರ್ಶಕರಾದರು.

ರಾಯರಿಗೆ ಒಂದು ದಿನ ಕನಸಿನಲ್ಲಿ, 'ನಿನ್ನ ಪೂರ್ವಜರೆಲ್ಲ ತೀರ್ಥಯಾತ್ರೆ ಮಾಡಿ, ಪ್ರಯಾಗಾದಿ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿರುತ್ತಾರೆ. ನೀನೇಕೆ ಹೋಗು ವುದಿಲ್ಲ?' ಎಂದು ಕೇಳಿದಂತೆ ಆಯಿತಂತೆ. ಎಚ್ಚೆತ್ತ ಕೂಡಲೇ ಈ ವಿಷಯವನ್ನು ತಮ್ಮ ಅಕ್ಕನವರಿಗೆ ಹೇಳಿದರು. ಇನ್ನೂ ಕೆಲವರು ನೆಂಟರು ಮತ್ತು ಸ್ನೇಹಿತರು ಜೊತೆ ಗೂಡಿದರು. ಅಕ್ಕನವರನ್ನು ಕರೆದುಕೊಂಡು ಮಾಘಶುಕ್ಲ ತೃತೀಯಾ ಸೋಮವಾರ ಕಾಶೀಯಾತ್ರೆಗೆ ಹೊರಟುಬಿಟ್ಟರು. ಯಾರಲ್ಲಿಯೂ ಹೆಚ್ಚು ಹಣವಿರದಿದ್ದರೂ ನದೀ ಸ್ನಾನ, ತೀರ್ಥವಿಧಿ, ದೇವರ ದರ್ಶನಗಳು ಸಾಂಗವಾಗಿ ನಡೆದವು. ಹರಿಹರ, ನರಸೋಬವಾಡಿ, ನಾಸಿಕ, ತ್ರ್ಯಂಬಕ, ಓಂಕಾರೇಶ್ವರ, ಗೋಕುಲ, ಅಯೋಧ್ಯೆಗಳ ದರ್ಶನಮಾಡಿ, ಕಾಶಿಯಲ್ಲಿ ಶಿವರಾತ್ರಿಯನ್ನು ಕಳೆದರು. ಈ ಬಾರಿಯ ಅವರ ಯಾತ್ರೆ ಕೇವಲ ಕರ್ಮಪ್ರಧಾನವಾಗಿತ್ತೆಂದು ಮುಂದೆ ಅವರೇ ತಿಳಿಸುತ್ತಾರೆ. ಇದಕ್ಕಿಂತ ಹೆಚ್ಚಿನ ಲಾಭ ತೀರ್ಥಯಾತ್ರೆಗಳಿಂದ ದೊರಕಬೇಕೆಂದು ಅವರ ಅಪೇಕ್ಷೆಯಾಗಿತ್ತು. ಅದಕ್ಕಾಗಿ ಅವರು ಸಂನ್ಯಾಸಸ್ವೀಕಾರ ಮಾಡಿದ ನಂತರ 1956ರಲ್ಲಿ ಮತ್ತೊಮ್ಮೆ ಕಾಶೀಯಾತ್ರೆ

ಮಾಡಿ ಜ್ಞಾನಮಾರ್ಗ ಮತ್ತು ಭಕ್ತಿಮಾರ್ಗಗಳ ಸಮನ್ವಯವನ್ನು ಕಂಡುಕೊಂಡರು. ಮೂರನೆಯ ಬಾರಿ 1965ರಲ್ಲಿ ಅವರು ಕಾಶಿಗೆ ಹೊರಟಾಗ ಅವರ ವಯಸ್ಸು 87 ವರ್ಷಗಳಾಗಿತ್ತು. ಆದರೂ ಸತ್ಯಸಂಕಲ್ಪರಾದ ಅವರು ತಮ್ಮ ಧ್ಯೇಯವನ್ನು ಪೂರ್ಣ ವಾಗಿ ಸಾಧಿಸಿದರು. ಇದರಿಂದ ಒಳ್ಳೆಯ ಸಂಕಲ್ಪಗಳಿಗೆ ಭಗವಂತನ ಬೆಂಬಲ ಸದಾ ಇದ್ದೇ ಇರುತ್ತದೆ, ಎಂಬುದು ಸಿದ್ಧವಾಗುತ್ತದೆ.

ಕೋಲಾರ ಜಿಲ್ಲೆಯ ಅವನೀಮಠಕ್ಕೆ ಉತ್ತರಾಧಿಕಾರಿಯನ್ನು ನಿಯೋಜಿಸುವ ಸಂದರ್ಭದಲ್ಲಿ ಅಯ್ಯರ್‌ರವರು ಅದನ್ನು ಆದರ್ಶ ಸಂಸ್ಥೆಯನ್ನಾಗಿ ಮಾಡುವ ಉದ್ದೇಶ ದಿಂದ ರಾಯರ ಹೆಸರನ್ನು ಸೂಚಿಸಿದ್ದರು. ಮಠಾಧಿಪತ್ಯ ಇಷ್ಟವಿಲ್ಲದಿದ್ದರೂ, ಸಂನ್ಯಾಸದ ಒಲವು ರಾಯರನ್ನು ಆ ಕಡೆಗೆ ಎಳೆಯುತ್ತಿತ್ತು. ಹಾಗೇನಾದರೂ ಹೋಗಬೇಕಾದರೆ ಗೃಹಸ್ಥಧರ್ಮದ ಕರ್ತವ್ಯವನ್ನು ಪೂರೈಸಿ ಹೊರಡಬೇಕೆಂದು ಅವರು ತಮ್ಮ ಮಗನಿಗೆ ಕನ್ಯಾನ್ವೇಷಣೆಯನ್ನೂ ಮಗಳಿಗೆ ವರಾನ್ವೇಷಣೆಯನ್ನು ತ್ವರಿತವಾಗಿ ಆರಂಭಿಸಿದರು. ಹಾಗೆಯೇ ಎರಡನೆಯ ಮಗಳಾದ ಗಿರಿಜೆಗೆ ಚಂದ್ರಶೇಖರಯ್ಯನೆಂಬ ವರನನ್ನೂ, ಮಗನಿಗೆ ಸೀತಾರಾಮಯ್ಯನವರೆಂಬ ತಮ್ಮ ಸಂಬಂಧಿಗಳ ಪುತ್ರಿಯಾದ ಸರೋಜಮ್ಮ ನನ್ನು ಗೊತ್ತು ಮಾಡಿ, ಎರಡೂ ವಿವಾಹಗಳನ್ನು ಮುಗಿಸಿ, ಸಂನ್ಯಾಸಕ್ಕೆ ಸಿದ್ಧರಾದರು. ಅವನೀಮಠದ ಅವಕಾಶ ತಪ್ಪಿದರೂ, ಅವರ ಸಂನ್ಯಾಸೀ ಜೀವನದಲ್ಲಿ ವ್ಯತ್ಯಾಸವೇನೂ ಆಗಲಿಲ್ಲ.

ರಾಯರ ಪ್ರಸಿದ್ಧ ಕೃತಿಯಾದ **ಮೂಲವಿದ್ಯಾನಿರಾಸ**ವನ್ನು ಅಚ್ಚು ಹಾಕಿಸಲು ಅವರ ಬಳಿ ಹಣವಿರಲಿಲ್ಲ. ಎಷ್ಟು ಕಡೆಗಳಲ್ಲಿ ಪ್ರಯತ್ನಿಸಿದರೂ, ಫಲಕಾರಿ ಯಾಗದೇ, ಹೋಯಿತು, ಆಗ ರಾಯರು ತಮ್ಮ ಮಗನನ್ನೇ ಮುದ್ರಣ ಕೆಲಸಕ್ಕೆ ಸಜ್ಜುಗೊಳಿಸಿದರೆ ಮುಂದೆಯೂ ಈ ಗ್ರಂಥಪ್ರಕಟಣೆ ಸುಗಮವಾಗುತ್ತದೆಂದೂ, ಬೇರೆಯವರನ್ನು ಬೇಡುವ ಅವಶ್ಯಕತೆಯಿರುವುದಿಲ್ಲವೆಂದೂ ಆಲೋಚಿಸಿ, ಅವರಿಗೆ ಮುದ್ರಣದ ತರಬೇತಿ ಕೊಡಿಸಿದರು. ಮಗನಾದ ಶ್ರೀ ನರಸಪ್ಪನವರು ತಂದೆಯ ಮನೋಭಿಲಾಷೆಗೆ ತಕ್ಕಪುತ್ರರಾಗಿದ್ದು, ಈ ಉದ್ಯೋಗದಲ್ಲಿ ಪರಿಣತಿಯನ್ನು ಪಡೆದು ತಂದೆಯವರ ಕೆಲಸದಲ್ಲಿ ಬಲಗೈಯಾಗಿ ನಿಂತರು. ಆಗ **ಪುರುಷಾರ್ಥಗ್ರಂಥಾವಳಿ** ಯೆಂಬ ಹೆಸರಿ ನಲ್ಲಿ ಅನೇಕ ಪುಟ್ಟಪುಟ್ಟ ಜನೋಪಯೋಗಿಯಾದ ಧಾರ್ಮಿಕಗ್ರಂಥಗಳು ಪ್ರಕಟ ವಾದವು. **ಅಧ್ಯಾತ್ಮಪ್ರಕಾಶ** ಮಾಸಪತ್ರಿಕೆಯೂ ಇಲ್ಲಿಯೇ ಪ್ರಕಟವಾಗತೊಡಗಿತು. ಮೊದಲು ಬೆಂಗಳೂರಿನಲ್ಲಿದ್ದ ಮುದ್ರಣಾಲಯ, ರಾಯರು ಹೊಳೇನರಸೀಪುರವನ್ನು ಆರಿಸಿಕೊಂಡ ನಂತರ ಅಲ್ಲಿಗೆ ಬದಲಾಯಿತು.

ಶುಭಕಾರ್ಯಕ್ಕೆ ವಿಘ್ನಗಳು ಹಲವಾರು ಆರ್ಥಿಕ ತೊಂದರೆಯ ಜೊತೆಗೆ ರಾಯರಿಗೆ ಗಂಟಲಿನ ತೊಂದರೆ ಆರಂಭವಾಯಿತು. ಹತ್ತಿರದ ಗೆಳೆಯರೂ ಕೆಲವರು ರಾಯರ ವಿಚಾರಧಾರೆಗೆ ವಿರೋಧವನ್ನು ವ್ಯಕ್ತಪಡಿಸಿದರು. ಕೆಲವರು ಮೂಢ ನಂಬಿಕೆಯ ಜನ, ರಾಯರು ಶಂಕರರ ಜೀವನದ ಕೆಲವು ಘಟನೆಗಳನ್ನು ಮತ್ತು ಅವರ ಶಿಷ್ಯರ ಅಭಿಪ್ರಾಯಗಳನ್ನು ಟೀಕಿಸಿದ್ದರಿಂದ ಗಂಟಲು ಹೋಗಿದೆಯೆಂದು ಅಪಪ್ರಚಾರವನ್ನು ಆರಂಭಿಸಿದರು. ರಾಯರು ಮಾತ್ರ ಯಾವುದೇ ಉದ್ವಿಗ್ನತೆಗೆ ಒಳಗಾಗದೆ ತಮ್ಮ ಪಾಡಿಗೆ ತಾವು ಅಮಿತೋತ್ಸಾಹದಿಂದ ವೇದಾಂತಪ್ರಚಾರದ ಎಲ್ಲ ವಿಧಾನಗಳನ್ನು ಬಳಸುತ್ತ, ಲೇಖನ, ಅಧ್ಯಯನ ಮತ್ತು ಪ್ರವಚನಗಳಲ್ಲಿ ತಮ್ಮನ್ನು ಪೂರ್ತಿಯಾಗಿ ತೊಡಗಿಸಿಕೊಂಡಿದ್ದರು. ಆದ್ದರಿಂದಲೇ ಅವರ ಎಲ್ಲ ತೊಂದರೆಗಳು ತಾವಾಗಿಯೇ ನಿವಾರಣೆಯಾಗಿ ಭಗವಂತನೂ ಭಯಕೃತ್ ಮತ್ತು ಭಯ ನಾಶನ ನಲ್ಲವೇ? ಮೈಸೂರಿನ ಮಹಾರಾಜರೇ ನಮ್ಮ ಸ್ವಾಮೀಜಿಯವರ ವಿದ್ವತ್ತನ್ನು ಮೆಚ್ಚಿ ಸಹಾಯಹಸ್ತ ನೀಡುವಂತೆಮಾಡಿ, ಎಲ್ಲ ಕಾರ್ಯಗಳೂ ಸುಗಮವಾಗಿ ನಡೆಯು ವಂತೆ ಏರ್ಪಡಿಸಿಕೊಟ್ಟನು.

ಕೀರ್ತಿಯ ಕಾಮನೆಯಿಲ್ಲದೆ ಮಾಡುವ ಎಲ್ಲ ಕೆಲಸಗಳೂ ಶುಭಪ್ರದಗಳೇ ಆಗಿದ್ದವು. ತಾವು ಸಂನ್ಯಾಸವನ್ನು ಸ್ವೀಕರಿಸುವ ನಿರ್ಧಾರಮಾಡಿದ ಕೂಡಲೇ ಕಾರ್ಯಾಲಯದ ಆಡಳಿತ ಮಂಡಳಿಯನ್ನು ರಚಿಸಿದರು. ಅದರಲ್ಲಿ 9 ಜನ ಸದಸ್ಯ ರಿದ್ದರು. ವೈ. ನರಸಪ್ಪನವರೇ ಅಧ್ಯಕ್ಷರಾಗಿ ಎಲ್ಲ ವ್ಯವಹಾರಗಳನ್ನೂ ನಿರ್ವಹಿಸುವ ದೀಕ್ಷೆ ತೊಟ್ಟರು. ರಾಯರು ತಮ್ಮಲ್ಲಿದ್ದ ಅಲ್ಪ ಸ್ವಲ್ಪ ದ್ರವ್ಯವನ್ನು ದಾನಮಾಡಿ ಸಂನ್ಯಾಸ ಸ್ವೀಕಾರ ಮಾಡಿದರು. ಮುಂದೆ ಅವರು ಶತಾಂಶ ವೇದಾಂತಿಯಾಗಿ ಮಾರ್ಪಟ್ಟರು.

ರಾಯರ ಪುತ್ರರಾದ ಶ್ರೀನರಸಪ್ಪನವರು ಮಾಡಿರುವ ಸೇವೆಯೂ ಮಹತ್ತರ ವಾದುದು. ತಮ್ಮ ಮುದ್ರಣಾಲಯವನ್ನು ಅವರು ಅಸಲು ಬೆಲೆಗೇ ಕಾರ್ಯಾಲಯಕ್ಕೆ ಬಿಟ್ಟುಕೊಟ್ಟು, 2000 ರೂಪಾಯಿಗಳ ಸೋಡಿಯನ್ನು ಕೊಟ್ಟರು. ಕಾರ್ಯಾಲಯದಲ್ಲಿ ಆಗ ಹಣವಿರಲಿಲ್ಲ, ಹಣವು ಒದಗಿದಾಗ ಕೊಡಬಹುದೆಂಬ ಷರತ್ತಿನ ಮೇಲೆ ಕೇವಲ ಮಾಹೆಯಾನ 60 ರೂ ವೇತನದ ಮೇಲೆ ಪ್ರೆಸ್‌ನ ಮ್ಯಾನೇಜರರಾಗಿ ಕೆಲಸಮಾಡಲು ಒಪ್ಪಿಕೊಂಡರು. ಮುಂದೆ ಅವರ ಶ್ರಮ ಮತ್ತು ಭಕ್ತರ ಉದಾರ ಸಹಾಯದಿಂದ ಕಾರ್ಯಾಲಯ ಇತೋಪ್ಯತಿಶಯವಾಗಿ ವೃದ್ಧಿಯಾಯಿತು. ಮುದ್ರಣಕಾರ್ಯದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು ನರಸಪ್ಪನವರು ಸ್ವಾಮೀಜಿಯವರು

ಬ್ರಹ್ಮೀಭೂತರಾದನಂತರೂ ಅದನ್ನು ಮುನ್ನಡೆಸಿದರು. ರಾಯರ ಪ್ರಧಾನ ಶಿಷ್ಯರಾದ **ಶ್ರೀಲಕ್ಷ್ಮೀನರಸಿಂಹಮೂರ್ತಿ**ಯವರೂ ಕಾರ್ಯಾಲಯದ ಬೆನ್ನೆಲುಬಾಗಿ ನಿಂತು ಅನೇಕ ಪುಸ್ತಕಗಳನ್ನು ರಚಿಸಿದುದಲ್ಲದೇ, ಶ್ರೀಗಳವರ ಎಲ್ಲ ಕೆಲಸಗಳನ್ನು ಸಮರ್ಪಕ ವಾಗಿ ಮುಂದುವರಿಸಿದರು. ಸ್ವಾಮೀಜಿಯವರ ಜೀವನಚರಿತ್ರೆಯನ್ನು ಅಂಕಿ ಅಂಶ ಗಳ ಸಮೇತ ನಿಖರವಾಗಿ ಒದಗಿಸಿಕೊಟ್ಟ ಕೀರ್ತಿಯು ಅವರಿಗೇ ಸಲ್ಲಬೇಕು. ಇಲ್ಲಿ ಬರೆದಿರುವ ಎಲ್ಲ ಅಂಶಗಳೂ ಅವರು ಬರೆದಿರುವ ಕಾರ್ಯಾಲಯದ ಇತಿಹಾಸದ ಮೇಲೆ ಆಧರಿಸಲ್ಪಟ್ಟಿದೆ. ಶ್ರೀಗಳವರ ಇನ್ನಿತರ ಶಿಷ್ಯರು ಮತ್ತು ಭಕ್ತರೂ ತಮ್ಮ ಯೋಗದಾನವನ್ನು ನಿರಂತರವಾಗಿ ನೀಡುತ್ತಲೇ ಬಂದಿರುತ್ತಾರೆ.

ಪರಮಾತ್ಮನು ತನ್ನ ಸೃಷ್ಟಿಯ ರಹಸ್ಯವನ್ನು ಹೊರಗಡಹಲು ಮತ್ತು ವಿಶಿಷ್ಟ ವಾದ ಕಾರ್ಯಗಳನ್ನು ಮಾಡಲು ಸೂಕ್ತವರಾದ ವ್ಯಕ್ತಿಗಳನ್ನು ಆರಿಸಿಕೊಳ್ಳುತ್ತಾನೆ ಅದರಿಂದ ಇಡೀ ಲೋಕಪ್ರಯೋಜನವನ್ನು ಪಡೆದುಕೊಂಡು ಭಗವದ್ವಿಭೂತಿಯನ್ನು ಅರ್ಥಮಾಡಿಕೊಳ್ಳಲು ಅವಕಾಶವಾಗುತ್ತದೆ. ಅಂತಹ ವ್ಯಕ್ತಿಗಳ ಜೀವನಚರಿತ್ರೆ ಉಳಿದ ವರಿಗೆ ಆದರ್ಶಪ್ರಾಯವಾಗಿ ಅನೇಕರನ್ನು ಮುಕ್ತಿಯ ಮಾರ್ಗದಲ್ಲಿ ನಡೆಸುತ್ತದೆ. ಸ್ವಾಮೀಜಿಯವರ ಜೀವನವನ್ನು ಗಮನಿಸಿದರೆ ನಮಗೆ ಅನೇಕ ಸತ್ಯ ಸಂಗತಿಗಳು ತೆರೆದುಕೊಂಡಂತೆ ಅರಿವಾಗುತ್ತದೆ.

ಮೊದಲನೆಯದಾಗಿ ರಾಯರು ಸಂಸಾರಿಯಾಗಿದ್ದರೂ ಮುಕ್ತಿಮಾರ್ಗವನ್ನು ಕಂಡುಕೊಳ್ಳಬಹುದೆಂಬ ಅಂಶವನ್ನು ಪ್ರತಿಪಾದಿಸಿದವರಲ್ಲಿ ಪ್ರಮುಖರು. ಭಗವಂತನು ಕೊಟ್ಟ ಕರ್ತವ್ಯವನ್ನು ಗೊಣಗದೆ, ಗುರುಗುಟ್ಟದೆ ನೆರವೇರಿಸಿದುದಲ್ಲದೆ, ಜೀವನದ ಒಂದೊಂದು ಘಟನೆಯನ್ನೂ ವೇದಾಂತಸೇವೆಗೆ ಬಳಸಿಕೊಂಡರು. ನಾವೂ ಹಾಗೆಯೇ ಅವರನ್ನು ಅನುಸರಿಸಿದರೆ ಫಲಭಾಗಿಗಳಾಗುವುದರಲ್ಲಿ ಸಂಶಯವಿಲ್ಲ.

ಅವಕಾಶಗಳು ತಾವಾಗಿ ಬರುವುದಿಲ್ಲ. ಜೀವನದ ಪ್ರತಿ ಹಂತದಲ್ಲಿಯೂ ತಮ್ಮ ಧ್ಯೇಯವನ್ನು ಮರೆಯದೆ ಅದಕ್ಕಾಗಿ ಪ್ರಯತ್ನ ಮತ್ತು ಹಂಬಲವನ್ನು ಬೆಳಸಿಕೊಂಡರೆ ಅದಕ್ಕೆ ತಕ್ಕ ಅವಕಾಶಗಳನ್ನು ಪರಮಾತ್ಮನು ಕರುಣಿಸುತ್ತಾನೆ. ಸ್ವಾಮೀಜಿಯವರು ವೇದಾಂತಸಕ್ತಿಯಿರುವವರ ಕಡೆಗೆ ಆಕರ್ಷಿತರಾಗುತ್ತಿದ್ದುದರಿಂದಲೇ ಅಂತಹ ಅವಕಾಶ ಗಳು ಲಭ್ಯವಾದವು. ಅವರಿಂದ ರಚಿತವಾಗಿರುವ ಕೃತಿಗಳು ನಮಗೆ ಈಗ ಮಾರ್ಗ ದರ್ಶಕವಾಗಬಲ್ಲವು ಮತ್ತು ಅವರು ಕಟ್ಟಿದ ಸಂಸ್ಥೆ ಅದನ್ನು ಮುಂದುವರಿಸಬಲ್ಲದು.

ರಾಯರಿಗೆ ಭಕ್ತಿಶ್ರದ್ಧೆಯುಳ್ಳ ಮಾತಾಪಿತೃಗಳು, ಅಯ್ಯರ್‌ರವರಂತಹ ವಿಚಾರ ಶೀಲರು ದೊರೆತರು. ಶೃಂಗೇರಿಯ ಪೀಠಾಧಿಪತಿಗಳಿಂದ ಭಾಷ್ಯಶಾಂತಿ ಮತ್ತು ಗೊಂದಾವಲಿ ಮಹಾರಾಜರಿಂದ ರಾಮತಾರಕೋಪದೇಶ ದೊರಕಿತು. ಮೈಸೂರು ಮಹಾರಾಜರಿಂದ ಪ್ರೋತ್ಸಾಹ ಸಿಕ್ಕಿತು. ಈ ಎಲ್ಲ ಅನುಕೂಲತೆಗಳ ಜೊತೆಗೆ ಅವರ ಸಹಜ ಪ್ರತಿಭೆ ಬಹಳ ಮುಖ್ಯವಾಗಿರುವುದು. ಇಂತಹ ಗುರುಗಳ ನಮ್ಮ ಕರ್ನಾಟಕ ದಲ್ಲಿ ಜನಿಸಿ, ಎಲ್ಲ ರೀತಿಯಲ್ಲಿಯೂ ಶಿಷ್ಯರಿಗೆ ಆದರ್ಶಪ್ರಾಯವಾಗಿರುವುದು ಇಲ್ಲಿನ ಜನತೆಯ ಪುಣ್ಯ ವಿಶೇಷವಾಗಿದೆ.

* * * * *

# ಅಧ್ಯಾಯ - 7

# ಅಧ್ಯಾಪಕರಾಗಿ ಸುಬ್ಬರಾಯಶರ್ಮರು

**ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ ।**
**ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥**

ಅಧ್ಯಯನವು ಅಧ್ಯಾಪನದಿಂದಲೇ ಪೂರ್ಣತೆಯನ್ನು ಪಡೆಯುತ್ತದೆ. ಬೇಡುವವರಿಗೆ ಅಹರ್ನಿಶಿ ದಾನಮಾಡಲ್ಪಡುವ ವಿದ್ಯೆಯು ಹೆಚ್ಚಾದ ವೃದ್ಧಿಯನ್ನು ಪಡೆಯುತ್ತದೆ. ಅದರಲ್ಲಿಯೂ ಲೋಕೋದ್ಧಾರಕ್ಕಾಗಿ ಜೀವಿಸುವವರ ವಿಷಯದಲ್ಲಿ ಹೇಳಬೇಕಾದ್ದೇನಿದೆ? ಯಾವ ಹಣ ಮತ್ತು ವಿದ್ಯೆ ಅವರಿಂದ ಸಂಪಾದಿಸಲ್ಪಡುತ್ತದೋ, ಅದೆಲ್ಲವೂ ಪರೋಪಕಾರಕ್ಕಾಗಿಯೇ ಇರುತ್ತದೆ. ಕೇವಲ ಗ್ರಂಥರಚನೆ ಮತ್ತು ವಿಮರ್ಶೆಗಳು ಅದ್ವೈತಕ್ಕೆ ಸುಬ್ಬರಾಯರು ನೀಡಿರುವ ಕೊಡುಗೆಯೆಂದು ಭಾವಿಸುವುದು ತಪ್ಪಾದೀತು. ಅದ್ವೈತತತ್ತ್ವಗಳು ಅನೇಕ ವಿಧಾನಗಳಿಂದ ರಾಯರಿಂದ ಸಾರ್ವತ್ರಿಕ ಗೊಂಡವು. ಇದರಿಂದ ಆಬಾಲವೃದ್ಧರೆಲ್ಲರೂ ಉಪಕೃತರಾದರು. ಸುಬ್ಬರಾಯರು ತಾವು ಅಧ್ಯಯನ ಮಾಡಿದ ಲೌಕಿಕ ಮತ್ತು ಆಧ್ಯಾತ್ಮಿಕವಿದ್ಯೆಗಳೆರಡನ್ನು ಹಗಲಿರುಳೂ ಅರ್ಥಿಗಳಿಗೆ ವಿತರಿಸಿದರು. ಈ ವಿಷಯದಲ್ಲಿ ಒಂದುವೈಚಾರಿಕ ವಿಮರ್ಶೆಯನ್ನು ಇಲ್ಲಿ ಮಂಡಿಸಲಾಗಿದೆ.

## (ಅ) ಶಾಲೆಯ ಅಧ್ಯಾಪಕರಾಗಿ ಸುಬ್ಬರಾಯರು

ಬಾಲ್ಯದಲ್ಲಿ ಕಲಿತ ವಿದ್ಯೆಯು ಬಹುಕಾಲದವರೆಗೆ ನೆನಪಿನಲ್ಲಿ ಉಳಿಯುತ್ತದೆ. ಆದುದರಿಂದ ಮಕ್ಕಳಿಗೆ ಬಾಲ್ಯದಲ್ಲಿಯೇ ಭಾರತೀಯ ಸನಾತನ ಸಂಸ್ಕೃತಿಯ ಪರಿಚಯವನ್ನು ಮಾಡಿಕೊಡಬೇಕು. ಅಂತಹ ಹುಡುಗರು ಮುಂದಿನ ದಿನಗಳಲ್ಲಿ ಈ ಸಂಸ್ಕೃತಿಯ ಸಂರಕ್ಷಕರಾಗುತ್ತಾರೆ. ಬಾಲ್ಯದಲ್ಲಿ ಸುಬ್ಬರಾಯರಿಂದ ಶಿಕ್ಷಣ ಪಡೆದ ಕೆಲವು ಬಾಲಕರು, ಮುಂದೆ ಅವರ ಜೊತೆಗೆ ಹೆಗಲು ನೀಡಿ, ಅದ್ವೈತ ಕ್ಷೇತ್ರದಲ್ಲಿ ತಮ್ಮ ಯೋಗದಾನವನ್ನು ತೋರಿಸಿಕೊಟ್ಟರು. ಈ ದೃಷ್ಟಿಯಿಂದಲೇ ರಾಯರು ಪ್ರಾಥಮಿಕ ಶಾಲಾ ಶಿಕ್ಷಕರ ವೃತ್ತಿಯನ್ನು ನಿಷ್ಠೆಯಿಂದ ಪೂರೈಸಿದರು.

ಸುಬ್ಬರಾಯರಲ್ಲಿ ಅಧ್ಯಾಪನಕೌಶಲ್ಯವು ಬಾಲ್ಯದಿಂದಲೇ ವಿಕಸಿತವಾಗಿತ್ತು. ವಿದ್ಯಾರ್ಥಿದೆಸೆಯಲ್ಲಿಯೇ ಅವರು ವಿರಾಮಸಮಯದಲ್ಲಿ ಹುಡುಗರಿಗೆ ಸಂಸ್ಕೃತವನ್ನು ಹೇಳಿಕೊಡುತ್ತಿದ್ದರು. ಗ್ರಾಮದ ಶಾಲೆಯಲ್ಲಿ ಅಧ್ಯಾಪಕರಾಗಿದ್ದವರು ಇವರ ಬೋಧನಾ ಸಾಮರ್ಥ್ಯವನ್ನು ನೋಡಿ, ಅಧಿಕ ವ್ಯಾಸಂಗಕ್ಕಾಗಿ ಬಾಲಕರನ್ನು ಇವರ ಬಳಿಗೆ ಕಳಿಸುತ್ತಿದ್ದರು. ಬೋಧನ ಸೌಕರ್ಯಕ್ಕಾಗಿ ಕೆಲವು ಪುಸ್ತಕಗಳನ್ನು ಈ ಅಧ್ಯಾಪಕರುಗಳು ರಾಯರಿಗೆ ಕೊಡುತ್ತಿದ್ದರು. ಯಾವುದಾದರೂ ಕೆಲಸದ ನಿಮಿತ್ತ ಅಧ್ಯಾಪಕರು ಬೇರೆಯ ಊರಿಗೆ ಹೋಗಬೇಕಾದ ಸಂದರ್ಭದಲ್ಲಿ ಸುಬ್ಬರಾಯರೇ ಪಾಠಗಳನ್ನು ಹೇಳಿ ಕೊಡುತ್ತಿದ್ದರು. ಇದಲ್ಲದೆ, ವಿದ್ಯಾಭ್ಯಾಸದ ಸಮಯದಲ್ಲಿ ಜೀವನದ ಅವಶ್ಯಕತೆ ಗಳಿಗಾಗಿ ಧನಾರ್ಥವಾಗಿಯೂ ಅವರು ಅನಿವಾರ್ಯವಾಗಿ ಮನೆಯ ಪಾಠಗಳನ್ನು ಒಪ್ಪಿಕೊಳ್ಳ ಬೇಕಾಗುತ್ತಿತ್ತು.

ಕಾಲಕ್ರಮದಲ್ಲಿ ರಾಯರು ಬೇರೆಯ ಸರ್ಕಾರದ ಉದ್ಯೋಗವನ್ನು ಮಾಡ ಬೇಕಾಯಿತು. ಆ ಸಂದರ್ಭದಲ್ಲಿ ಕಡೂರು ಪಟ್ಟಣದ ಶಾಲೆಯಲ್ಲಿ ಮುಖ್ಯೋಪಾಧ್ಯಾಯ ರಾಗಿದ್ದ ಹೊಸಕೆರೆ ಚಿದಂಬರಯ್ಯನವರ ಪರಿಚಯವಾಯಿತು. ಅವರು ಪರಿಶೀಲನಾ ಧಿಕಾರಿಗಳಿಗೆ ಪರಿಚಯ ಪತ್ರವನ್ನು ಬರೆದು ಸುಬ್ಬರಾಯರನ್ನು ಅಧ್ಯಾಪಕಕಾರ್ಯದಲ್ಲಿ ನಿಯೋಜಿಸಲು ನಿಮಿತ್ತರಾದರು. ಸಹಜವಾಗಿ ಅಧ್ಯಾಪಕವೃತ್ತಿಯ ಅಧ್ಯಯನ ಮತ್ತು ಅಧ್ಯಾಪನಪರವಾದುದಲ್ಲವೆ? ಅದರಿಂದ ಸಂತುಷ್ಟಾಂತ ರಂಗರಾದ ಸುಬ್ಬರಾಯರು ಮೊದಲಿಗೆ ಜಗಳೂರು ಗ್ರಾಮದ ಶಾಲೆಯ ಅಧ್ಯಾಪಕರಾಗಿ ವೃತ್ತಿಯನ್ನು ಆರಂಭಿಸಿದರು. ಅವರು ಪಾಠ್ಯವಿಷಯಗಳಲ್ಲದೆ, ಪಠ್ಯೇತರ ಶೈಕ್ಷಣಿಕ ವಿಷಯಗಳಲ್ಲಿಯೂ ತಮ್ಮ ಪ್ರತಿಭೆಯನ್ನು ಸೃಜನಾತ್ಮಕರೂಪದಿಂದ ತೋರಿಸಿಕೊಟ್ಟರು. ಮೊಳಕಾಲ್ಮೂರು ಗ್ರಾಮ

ದಲ್ಲಿ ಅಧ್ಯಾಪಕರಾಗಿದ್ದಾಗ 'ಭಕ್ತ ಸಿರಿಯಾಳ' ಎಂಬ ರೂಪಕವನ್ನು ಬರೆದು ವಿದ್ಯಾರ್ಥಿಗಳಿಂದ ಅಭಿನಯ ಮಾಡಿಸಿದರು. ನಾಟ್ಯಶಾಸ್ತ್ರವು ಪ್ರಯೋಗ ಪ್ರಧಾನವಾದುದಲ್ಲವೆ? ಅಂತಹ ಪೌರಾಣಿಕ ರೂಪಕವನ್ನು ವೀಕ್ಷಿಸಿ, ಶಿಕ್ಷಣಾಧಿಕಾರಿಗಳಾಗಿದ್ದ ಶಾಮರಾಯರು ಸಂತುಷ್ಟರಾಗಿ, ರಾಯರಿಗೆ ಹನ್ನೆರಡು ರೂಪಾಯಿಗಳ ವೇತನದಿಂದ ಹದಿನೈದು ರೂಪಾಯಿಗಳಿಗೆ ಬಡ್ತಿಯನ್ನು ನೀಡಿದರು. ರಾಯರು ಅಧ್ಯಾಪಕಸಂಘದ ಕಾರ್ಯದರ್ಶಿಯಾಗಿಯೂ, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಂದ ಅನೇಕ ಕಾರ್ಯಕ್ರಮಗಳನ್ನು ಸಂಯೋಜಿ ಸುತ್ತಿದ್ದರು. ಶ್ರೇಯಸ್ಸು ಯಾವಾಗಲೂ ಬಹಳ ವಿಘ್ನಗಳಿಂದ ಕೂಡಿರುತ್ತದೆಯಲ್ಲವೇ? ವಿದ್ಯಾರ್ಥಿಗಳಿಗಾಗಿ, ಶಾಲೆಯಲ್ಲಿ ಮತ್ತು ಅದರ ಹೊರಗೆ ಸುಬ್ಬರಾಯರಿಂದ ಸಿದ್ಧಿಗೊಳಿಸಲ್ಪಡುತ್ತಿದ್ದ ಅಪೂರ್ವ ಕಾರ್ಯಕ್ರಮಗಳನ್ನು ಕಂಡು, ಅಸಹನಶೀಲರಾದ ಬೇರೆಯ ಕೆಲವು ಉಪಾಧ್ಯಾಯರುಗಳು ಅವರ ವಿಷಯದಲ್ಲಿ ಇಲ್ಲದ ಸಲ್ಲದ ಅಪವಾದಗಳನ್ನು ಸೇರಿಸಿ, ಅಧಿಕಾರಿಗಳಿಗೆ ಅನಾಮಧೇಯವಾದ ಪತ್ರವೊಂದನ್ನು ಬರೆದರು. ಆಗ ಹಂಗಾಮಿಯಾಗಿ ಮುಖ್ಯೋಪಾಧ್ಯಾಯರಾಗಿದ್ದ ರಾಯರು, ಇದರಿಂದ ಅವಿಚಲಿತರಾಗಿ, **'ತುಷ್ಯತು ದುಷ್ಟ ಜನಃ'** ಎಂಬ ಗಾದೆ ಮಾತಿನಂತೆ. ಆ ಪತ್ರವನ್ನು ತಾವೇ ಮೇಲಿನ ಅಧಿಕಾರಿಗಳಿಗೆ ಕಳಿಸಿಕೊಟ್ಟರು. ಸುಬ್ಬರಾಯರ ನಿಷ್ಠೆಯನ್ನು ಅರಿತಿದ್ದ ಅಧಿಕಾರಿಗಳು ದುರಾಗ್ರಹಪೀಡಿತರಾದ ಅಧ್ಯಾಪಕರುಗಳಿಂದ ಬರೆಯಲ್ಪಟ್ಟ ಆ ಪತ್ರವನ್ನು ಉಪೇಕ್ಷಿಸಿಬಿಟ್ಟರು. ಈ ಸಮಯದಲ್ಲಿ ಹರಿಹರ ಪಟ್ಟಣದ ಶಾಲೆಯ ದುರವಸ್ಥೆಯು ವರ್ಣನಾತೀತವಾಗಿತ್ತು. ಆ ಶಾಲೆಯನ್ನು ಅಭಿವೃದ್ಧಿಯ ಹಾದಿಗೆ ತರಲು ಬಯಸುತ್ತಿದ್ದ ಮೇಲಾಧಿಕಾರಿಗಳ ಆಜ್ಞೆಯನ್ನು ಪುರಸ್ಕರಿಸಿ, ರಾಯರು ಅಲ್ಲಿಗೆ ಮುಖ್ಯೋಪಾಧ್ಯಾಯರಾಗಿ ಹೋಗಿ, ತಮ್ಮ ಸಾಮರ್ಥ್ಯದ ಮತ್ತು ಸಮಯೋಚಿತವಾದ ಪ್ರಶಾಸನದಿಂದ ಶಾಲೆಯನ್ನು ಅಭಿವೃದ್ಧಿಪಡಿಸಿ ಅಧಿಕಾರಿಗಳ ಪ್ರಶಂಸೆಗೆ ಪಾತ್ರರಾದರು.

ವಿದ್ಯಾರ್ಜನೆಯು ಮಾತ್ರವೇ ಬಾಲಕರ ಉದ್ದೇಶವಾಗಿರಬೇಕೆಂಬುದು ಅವರ ದೃಢವಾದ ವಿಶ್ವಾಸವಾಗಿತ್ತು. ರಾಯರು ಮಧುಗಿರಿಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದಾಗ ಸ್ವಾತಂತ್ರ್ಯಸಂಗ್ರಾಮವು ಗರಿಷ್ಠದಶೆಯಲ್ಲಿತ್ತು. ದೇಶಭಕ್ತರಾದ ಜಯರಾಮಾಚಾರ್ಯರು ಶಾಲೆಗೆ ಬಂದು ವೀರರಸ ಪ್ರಧಾನವಾದ ಗೀತೆಗಳನ್ನು ಹಾಡುತ್ತ ಬಾಲಕರನ್ನು ಪ್ರಚೋದಿಸುತ್ತಿದ್ದರು. ಆಗ ರಾಯರು ಹುಡುಗರನ್ನು ಉದ್ದೇಶಿಸಿ,

ಮಕ್ಕಳು ಮೊದಲಿಗೆ ವಿದ್ಯಾರ್ಥಿಗಳು ಅವರು ಪೋಷಕರ ಅನುಮತಿಯಲ್ಲಿದ್ದೆ ಶಾಲೆಯನ್ನು ಬಿಟ್ಟು ಬೇರೆಡೆಗೆ ಹೋಗುವುದು ಸರಿಯಲ್ಲ, ದೇಶಸೇವೆಯ ನೆಪದಿಂದ ಸಾಕಿದವರ ಮಾತನ್ನು ಮೀರಿ ನಡೆಯುವುದರಿಂದ ಒಳ್ಳೆಯದು ಆಗುವುದಿಲ್ಲ, ವಿದ್ಯಾಭ್ಯಾಸ ಮತ್ತು ರಾಜಕೀಯಗಳು ವಿಭಿನ್ನವಾದ ಗುರಿಯನ್ನು ಹೊಂದಿವೆ. ಆದುದರಿಂದ ಶಿಕ್ಷಣವನ್ನು ಬಿಟ್ಟು ಹೋಗಬಾರದು ಎಂದು ಉಪದೇಶಿಸಿದರು. ಇದರಿಂದ ಶಿಕ್ಷಣದ ವಿಷಯದಲ್ಲಿ ಅವರ ನಿಷ್ಠೆಯು ಪ್ರತಿಪಾದಿತವಾಗುತ್ತದೆ. ಹೀಗೆ ವಿದ್ಯೆಯಲ್ಲಿಯೇ ನಿಷ್ಠರಾದ ರಾಯರು ಕ್ರಮವಾಗಿ, ದಾವಣಗೆರೆ, ಹೊಸದುರ್ಗ, ಹೊಳಲ್ಕೆರೆ, ಹರಿಹರ, ಬೆಂಗಳೂರು, ಮಧುಗಿರಿ, ಚೆನ್ನಪಟ್ಟಣ ಮುಂತಾಗಿ ಹದಿನೈದಕ್ಕಿಂತ ಹೆಚ್ಚು ಸ್ಥಳಗಳಲ್ಲಿ ಸರ್ಕಾರದ ಆದೇಶದಂತೆ ಅಧ್ಯಾಪಕವೃತ್ತಿಯನ್ನು ಪರಿಪಾಲಿಸಿದರು.

ಆಚಾರ್ಯರಾದವರು ಊಹೆ, ಅಪೋಹ, ಗ್ರಹಣ ಮತ್ತು ಧಾರಣದಲ್ಲಿ ಸಮರ್ಥರಾಗಿರಬೇಕು. ಶಿಕ್ಷಣವು ಆಜೀವನಪರ್ಯಂತ ಸತತವಾಗಿ ಮುಂದುವರಿಯಬೇಕು. ವೃತ್ತಿಯಿಂದ ಲಬ್ಧಪ್ರತಿಷ್ಠರಾದ ಅನೇಕರು ಪ್ರಾಯಶಃ ಅಧ್ಯಯನದ ವಿಷಯದಲ್ಲಿ ಔದಾಸೀನ್ಯವನ್ನು ತಾಳುತ್ತಾರೆ. ಜೀವನಪರ್ಯಂತ ಶಿಕ್ಷಣದ ವಿಷಯದಲ್ಲಿ ಗೃಹೀತ ವ್ರತಧಾರಿಗಳಾಗಿರುವವರು ತುಂಬ ವಿರಳ.

ಸಮರ್ಥರಾದ ಶಿಕ್ಷಕರು ಲೇಖನಕಲೆಯಲ್ಲಿಯೂ ತಮ್ಮ ಕಾರ್ಯಕ್ಷಮತೆಯನ್ನು ಪ್ರಸಿದ್ಧಿಪಡಿಸುತ್ತಾರೆ. ಪ್ರಖ್ಯಾತಲೇಖಕರು ಮತ್ತು ಚಿಂತನಶೀಲರಲ್ಲಿ ಬಹುಮಂದಿ ಉಪಾಧ್ಯಾಯವೃತ್ತಿಯಲ್ಲಿರುವವರೇ ಆಗಿರುತ್ತಾರೆ. ಡಾ. ರಾಧಾಕೃಷ್ಣನ್, ಪ್ರೊ.ಬಿ.ಎಂ.ಶ್ರೀಕಂಠಯ್ಯನವರು, ತತ್ತ್ವಶಾಸ್ತ್ರಜ್ಞರಾದ ಪ್ರೊ. ಎಂ. ಹಿರಯಣ್ಣಯ್ಯನವರು ಮುಂತಾದವರನ್ನು ಇಲ್ಲಿ ಸ್ಮರಿಸಬಹುದು. ಹೀಗೆ ಅಧ್ಯಯನ, ಲೇಖನ ಮುಂತಾದ ಕೆಲಸಗಳಲ್ಲಿ, ಅಧ್ಯಾಪಕವೃತ್ತಿಯು ಬಹಳ ಅವಕಾಶಗಳನ್ನು ಒದಗಿಸಿಕೊಡುತ್ತದೆ. ಅವರಿಗೆ ಗ್ರಂಥಾಲಯದ ಸೌಕರ್ಯ, ಬೇರೆ ಪಂಡಿತಸಹೋದ್ಯೋಗಿಗಳ ಸಹಕಾರ ಮುಂತಾದವು ಲಭ್ಯವಾಗುತ್ತವೆ. ಈ ಎಲ್ಲ ವಿಷಯಗಳೂ ಮಹಾವಿದ್ಯಾಲಯದ ಪ್ರಾಧ್ಯಾಪಕರ ವಿಷಯದಲ್ಲಿ ಸತ್ಯವಾದ ಮಾತುಗಳಾದವು.

ಸುಬ್ಬರಾಯರಾದರೋ ಕೇವಲ ಪ್ರಾಥಮಿಕಶಾಲೆಯ ಅಧ್ಯಾಪಕರು. ದುಷ್ಕರವಾದ ಆ ದಿನಗಳಲ್ಲಿ, ಗ್ರಂಥಾಲಯವೇ ಮುಂತಾದ ಆಧುನಿಕ ಸೌಕರ್ಯಗಳು ಸಣ್ಣ

ಪಟ್ಟಣಗಳಲ್ಲಿರಲಿಲ್ಲ. ಎಲ್ಲೆಡೆ ಪ್ಲೇಗ್ ಮುಂತಾದ ತೀವ್ರತರವಾದ ಖಾಯಿಲೆಗಳು, ಮತ್ತೆ ಮತ್ತೆ ಜನರನ್ನು ಪೀಡಿಸುತ್ತಿದ್ದವು. ಇದರ ಮೇಲೆ ಉದ್ಯೋಗದಲ್ಲಿ ಆಗಾಗ ವರ್ಗವಾಗುವುದು, ಅದನ್ನು ಅನುಸರಿಸಿ ಸುತ್ತಾಡುವುದು ನಡೆಯಲೇ ಬೇಕಾಗಿತ್ತು. ಅನರ್ಥಗಳು ಒಟ್ಟಿಗೆ ಬರುತ್ತವೆಯೆಂಬುದು ಎಲ್ಲರ ಅನುಭವಕ್ಕೂ ಗೋಚರವಾದುದು. ಈ ಎಲ್ಲ ವಿಷಮವಿಷಯಗಳ ನಡುವೆ ರಾಯರು ಅಭಿನಂದನೀಯವಾದ ಮತ್ತು ಅನ್ಯಾದೃಶವಾದ ಕಾರ್ಯವನ್ನು ಮಾಡಿ ತೋರಿಸಿದರು. **'ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ'** ಎಂಬ ಉಕ್ತಿಗೆ ರಾಯರ ಜೀವನಗಾಥೆಯು ಪ್ರಶಸ್ತವಾದ ಉದಾಹರಣೆಯಾಗಿದೆ. ವಿದ್ಯಾರ್ಥಿಗಳ ಹಿತದಲ್ಲಿಯೇ ಆಸಕ್ತರಾದ ರಾಯರು, ಓದಿದ ವಿಷಯಗಳು ಅಂಗದಲ್ಲಿಯೇ ಜೀರ್ಣವಾಗಿ ಹೋಗಬಾರದೆಂಬ ಸದುದ್ದೇಶದಿಂದ, ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದ ವಿಷಯವನ್ನು ಅಧಿಕರಿಸಿ, **'ಕರ್ನಾಟಕ ವಾಕ್ಯರಚನಾಕ್ರಮ'** ಮತ್ತು **'ಪದತ್ರಯ'** ಎಂಬ ಪುಸ್ತಕಗಳನ್ನು ರಚಿಸಿದರು. ಅವುಗಳಲ್ಲಿ ಮೊದಲನೆಯ ಪುಸ್ತಕವು ಮುವ್ವತ್ತೆಂಟು ವರ್ಷಗಳ ಕಾಲ ಮಾಧ್ಯಮಿಕ ಶಾಲೆಗಳಿಗೆ ಅಧಿಕೃತ ಪಠ್ಯಪುಸ್ತಕವಾಗಿ ನಿಯಮಿತವಾಗಿತ್ತು. ಇಂತಹ ಉತ್ತಮ ಕಾರ್ಯಗಳಿಂದ ಸಂತುಷ್ಟರಾದ ಅಧಿಕಾರಿಗಳು ರಾಯರಿಗೆ ಬಡ್ತಿ ನೀಡಿ ವಿದ್ಯಾಭ್ಯಾಸ ಪರಿಶೋಧಕ ಪದವಿಯಲ್ಲಿ ನಿಯಮಿಸಿದರು. ಆದರೆ ನಿರಂತರ ಪ್ರವಾಸದಿಂದ ಕೂಡಿದ ಈ ಹೊಸ ಉದ್ಯೋಗದಲ್ಲಿ ತಮಗೆ ಇಷ್ಟವಾದ ಅಧ್ಯಯನಕ್ಕೆ ಆತಂಕವುಂಟಾಗುವುದೆಂದು ತಿಳಿದು ರಾಯರು ಅದನ್ನು ನಿರಾಕರಿಸಿದರು. ಅಧಿಕಾರ ಲಾಲಸೆಯಾಗಲೀ, ಪ್ರಶಂಸಾಪ್ರಿಯತೆಯಾಗಲೀ, ಅವರಿಗೆ ಇರಲಿಲ್ಲವೆಂಬುದಕ್ಕೆ ಇದು ಉತ್ತಮ ನಿದರ್ಶನವಾಗಿದೆ. ಹೀಗೆ ಅಧ್ಯಾಪಕವೃತ್ತಿಯಲ್ಲಿ ಚರಿತಾರ್ಥತೆಯನ್ನು ಗಳಿಸಿ, ಸುಬ್ಬರಾಯರು ಕ್ರಿ.ಶ. 1935ರಲ್ಲಿ ತಮ್ಮ ವೃತ್ತಿಯಿಂದ ನಿವೃತ್ತರಾದರು.

* * * * *

# ಅಧ್ಯಾಯ - 8

# ವೇದಾಂತಬೋಧಕರಾಗಿ ಶ್ರೀಗಳು

**ಕಿಮತ್ರ ಚಿತ್ರಂ ಯತ್ಸಂತಃ ಪರಾನುಗ್ರಹತತ್ಪರಾಃ ।**
**ನ ಹಿ ಸ್ವದೇಹಶೈತ್ಯಾಯ ಜಾಯಂತೇ ಚಂದನದ್ರುಮಾಃ ॥**

ಸತ್ಪುರುಷರು ಪರಾನುಗ್ರಹದಲ್ಲಿಯೇ ತತ್ಪರರಾಗಿರುತ್ತಾರೆಂಬ ವಿಷಯದಲ್ಲಿ ಆಶ್ಚರ್ಯ ವೇನು? ಗಂಧದಮರಗಳು ತಮ್ಮ ದೇಹದ ತಂಪಿಗಾಗಿ ಹುಟ್ಟುವುದಿಲ್ಲವಷ್ಟೆ?

ಶಾಲೆಯಲ್ಲಿ ಆಂಗ್ಲಭಾಷೆ ಮುಂತಾದವುಗಳನ್ನು ಮಕ್ಕಳಿಗೆ ಬೋಧಿಸುತ್ತಿದ್ದ ರಾಯರು ತಮ್ಮ ಮನೆಯಲ್ಲಿ ವೇದಾಂತಚಾರ್ಯರಾಗಿದ್ದರು. ಆಚಾರ್ಯರೆಂದರೆ ಶಮ, ದಮ, ದಯೆ, ಅನುಗ್ರಹ ಮುಂತಾದ ಗುಣಗಳಿಂದ ಸಂಪನ್ನರಾಗಿದ್ದು ಆಗಮ ಗಳನ್ನೆಲ್ಲ ಅರಿತಿರಬೇಕು ಐಹಿಕ ಮತ್ತು ಪಾರಲೌಕಿಕ ಭೋಗಗಳನ್ನು ಆಸಕ್ತಿಯಿರ ಬಾರದು. ದಂಭ, ದರ್ಪ, ಕುಹಕ, ಶಾಠ್ಯ, ಮಾತ್ಸರ್ಯ, ಸುಳ್ಳು, ಅಹಂಕಾರ, ಮಮಕಾರ ಮುಂತಾದ ದೋಷಗಳಿಂದ ದೂರವಾಗಿರಬೇಕು. ಅವರು ಕೇವಲ ಪರಾನುಗ್ರಹದಲ್ಲಿಯೇ ತತ್ಪರರಾಗಿರಬೇಕು. ಶಾಸ್ತ್ರಗಳ ವ್ಯಾಖ್ಯಾನಕಾರರೂ, ಶಾಸ್ತ್ರೋಪ ದಿಷ್ಟವಾದ ಆಚಾರವುಳ್ಳವರೂ, ಬೇರೆಯವರಿಂದಲೂ ಶಾಸ್ತ್ರೋಕ್ತವಾದ ಅನುಷ್ಠಾನವನ್ನು ಮಾಡಿಸಲು ಶಕ್ತರಾದವರೂ ಆಚಾಯರಸಂಜ್ಞೆಗೆ ಅರ್ಹರಾಗಿರುತ್ತಾರೆ. ಈ ಎಲ್ಲ ಅರ್ಥಗಳಲ್ಲಿಯೂ ಸುಬ್ಬರಾಯರು ತಮ್ಮ ಪರಿಶ್ರಮದಿಂದ ಆಚಾರ್ಯ ಪದವಿಗೆ ಅರ್ಹತೆಯನ್ನು ಸಂಪಾದಿಸಿದ್ದರು. ಶಾಲೆಯ ಕೆಲಸದ ನಂತರ, ವಿರಾಮದ ದಿನಗಳಲ್ಲಿ ಕೂಡ ಅವರು ಮನೆಯಲ್ಲಿ ವೇದಾಂತವನ್ನು ಬೋಧಿಸುತ್ತಿದ್ದರು. ಅವರ ಮನೆಯು ಯಾವಾಗಲೂ ಆರ್ಷಜ್ಞಾನಪಿಪಾಸುಗಳಿಂದ ಪರಿಪೂರ್ಣವಾಗಿರುತ್ತಿತ್ತು. ಅಲ್ಲಿ ಉಚ್ಚ ನೀಚತಾರತಮ್ಯವಿಲ್ಲದೆ, ಸಮಾಜದ ವಿವಿಧ ವರ್ಗದ ಜನರು ಅರ್ಥಪೂರ್ಣ ಗೋಷ್ಠಿ ಗಳಿಂದ ಆತ್ಮವಿದ್ಯಾಲಾಭವನ್ನು ಪಡೆಯುತ್ತಿದ್ದರು. ಅಂತಹ ಸಾಧಕರಲ್ಲಿ ಪ್ರಥಿತ ನಾಮಧೇಯರಾದ ಕೆಲವರನ್ನು ಈ ಕೆಳಗೆ ಸೂಚಿಸಲಾಗಿದೆ.

1. ಅರಸೀಕೆರೆ ಪಟ್ಟಣದವರಾದ ನಂಜಪ್ಪನವರು ರಾಯರ ಬೋಧನೆಯಿಂದ ನಿರತಿಶಯಸಂತುಷ್ಟಾಂತರಂಗರಾಗಿ ಆತ್ಮಾನುಸಂಧಾನಾರ್ಥವಾಗಿ ಭಗವಚ್ಚೈತನ್ಯ ರೆಂಬ ಹೆಸರಿನಿಂದ ಪರಿವ್ರಾಜಕರಾದರು.

2. ಮಂಡಲ ವಿದ್ಯಾಧಿಕಾರಿಗಳಾಗಿದ್ದ (D.I.G) ಬೆಳವಾಡಿಯ ದಾಸಪ್ಪನವರು ರಾಯರಿಂದ ಸೂತ್ರಭಾಷ್ಯವನ್ನು ಅಧ್ಯಯನಮಾಡಿದರು.

3. ತಿಪಟೂರಿನವರೂ, ಗೊಂದಾವಲಿ ಮಹಾರಾಜರ ಅನುಗ್ರಹಪಾತ್ರರೂ ಆದ ಸೂರಪ್ಪನವರು ಸುಬ್ಬರಾಯರಿಂದ ಭಾಗವತದ ಸಾರವನ್ನು ತಿಳಿದು, ಹೃಷ್ಟಾಂತಃಕರಣರಾದರು.

4. ಗರಡಿರಾಚಪ್ಪನವರು ರಾಯರಿಂದ ವಿದ್ಯಾಲಾಭವನ್ನು ಪಡೆದ ಮಹಾಜನರಲ್ಲಿ ಪರಿಗಣನಯೋಗ್ಯರು. ಜ್ಞಾನೇಚ್ಛುಗಳಾದ ಅವರು ಅಖಂಡಭಾರತವನ್ನು ಪ್ರದಕ್ಷಿಣೆಮಾಡಿ, ಎಲ್ಲಿಯೂ ತೃಪ್ತಿಯನ್ನು ಕಾಣದೆ, ರಾಯರನ್ನು ಶರಣು ಹೊಂದಿದರು. ಅವರಿಂದ ಶಂಕರಭಗವತ್ಪಾದರ ಉಪದೇಸಾಹಸ್ರೀ ಪ್ರಕರಣ ವನ್ನು ಅಧ್ಯಯನ ಮಾಡಿ, ಪರಮಾರ್ಥವಿಚಾರವನ್ನು ಸರಿಯಾಗಿ ಗ್ರಹಿಸಿದ ವರಾಗಿ, ಆ ಗ್ರಂಥವನ್ನು ಉಳಿದವರೂ ಓದಿ ತಮ್ಮಂತೆ ಕೃತಾರ್ಥರಾಗಲೆಂದು, ಅದರ ಪ್ರಕಟಣೆಗೆ ಧನಸಹಾಯವನ್ನು ಮಾಡಿದರು.

5. ವೃತ್ತಿಯಿಂದ ಕೃಷಿಕರಾದ ಚಿಕ್ಕಲಿಂಗಣ್ಣನವರು ಪ್ರವೃತ್ತಿಯಿಂದ ಶ್ರೇಷ್ಠ ಸಾಧಕರು. ಅವರು ಅನೇಕ ಬಾರಿ ರಾಯರೊಂದಿಗೆ ವೇದಾಂತ ವಿಚಾರದ ವಿನಿಮಯ ವನ್ನು ನಡೆಸಿ, 'ಇದಮಿತ್ಥಂ' ಎಂಬ ನಿಖರವಾದ ಜ್ಞಾನವುಳ್ಳವರಾಗಿ, ರಾಯ ರೊಂದಿಗೆ ಇರುತ್ತ ವೇದಾಂತಜ್ಞಾನ ಪ್ರಚಾರಕರೂ ಆದರು.

ಹೀಗೆ ಸುಬ್ಬರಾಯರು ತಮ್ಮ ಐಹಿಕ ಸುಖವನ್ನು ಬದಿಗೊತ್ತಿ, ತಮ್ಮ ಮನೆಯನ್ನೇ ವೇದಾಂತಭವನವನ್ನಾಗಿಸಿ, ಜ್ಞಾನಪ್ರಸಾರವನ್ನು ಮಾಡುತ್ತಿದ್ದರು. ಈ ವಿಚಾರದಲ್ಲಿ ಅವರು ಬೋಧನೆಗೆ ಸದಾಕಾಲವೂ ಸಿದ್ಧರಾಗಿರುತ್ತಿದ್ದರು. ಇದೇ ಸಮಯದಲ್ಲಿ ಶ್ರೀ ವಿರೂಪಾಕ್ಷಶಾಸ್ತ್ರಿಗಳು ಬೆಂಗಳೂರು ನಗರವನ್ನು ಬಿಟ್ಟು, ಮೈಸೂರಿಗೆ ಹೊರಟು ಹೋದರು. ಆಗ ಪ್ರೌಢಸಂಸ್ಕೃತವಿದ್ಯಾಲಯದಲ್ಲಿ ಅಧ್ಯಾಪಕರಿಲ್ಲದೆ ತೊಂದರೆಯಾದು ದರಿಂದ, ಸುಬ್ಬರಾಯರೇ ಅಲ್ಲಿಯೂ ಸೂತ್ರಭಾಷ್ಯದ ಪಾಠವನ್ನು ಮುಂದುವರಿಸಿದರು. ಹೀಗೆ ವೃತ್ತಿಯಿಂದಲೂ, ಪ್ರವೃತ್ತಿಯಿಂದಲೂ, ಅಧ್ಯಾಪಕರಾದರಾಯರು ಕ್ರಿ.ಶ. 1935 ರಲ್ಲಿ ಸರ್ಕಾರದ ಕೆಲಸದಿಂದ ನಿವೃತ್ತಿಹೊಂದಿ, ತಮ್ಮ ಜೀವನದ ಸರ್ವಸ್ವವನ್ನು ವೇದಾಂತ ವಿದ್ಯಾಪ್ರಸರಣಕ್ಕಾಗಿ ನ್ಯಾಸರೂಪದಿಂದ ನಿಕ್ಷೇಪವಾಗಿಟ್ಟರು. ಅದಕ್ಕಾಗಿ ವಿವಿಧ ಪ್ರದೇಶ ಗಳಲ್ಲಿ ಪರ್ಯಟನವನ್ನು ಪ್ರಾರಂಭಿಸಿದರು. ಉತ್ತಿಷ್ಠತ ಜಾಗ್ರತ ! ಪ್ರಾಪ್ಯ ವರಾನ್

ನಿಬೋಧತ ಎಂಬ ಶ್ರುತಿವಾಕ್ಯದಂತೆ, ಎಲ್ಲ ಕಡೆಗಳಲ್ಲಿ ಪ್ರವಚನಗಳನ್ನು ನಡೆಸಿ, ಜನರನ್ನು ಜಾಗ್ರತಗೊಳಿಸಿದರು. ಹೀಗೆ ಸಂಚರಿಸಿದ ಸ್ಥಳಗಳಲ್ಲಿ ಹೊಳೆನರಸೀಪುರವು ಅವರನ್ನು ಬಹುವಾಗಿ ಆಕರ್ಷಿಸಿತು. ಅಲ್ಲಿ ಕೆಲವು ದಿನಗಳಿದ್ದು ಪ್ಲೀಡರ್ ನರಸಿಂಹಯ್ಯ ನವರೇ ಮುಂತಾದ ಐದಾರು ಜನ ಸದಾಚಾರಸಂಪನ್ನರಾದ ಗಣ್ಯರಿಗೆ ಕಠೋಪನಿಷತ್ತು ಮತ್ತು ಗೀತಾಭಾಷ್ಯಗಳನ್ನು ಪಾಠಮಾಡಿದರು.

ಹೀಗೆ ರಾಯರಿಂದ ವೇದಾಂತಪಾಠವನ್ನು ಗ್ರಹಿಸಿದವರೆಲ್ಲರೂ ಅವರನ್ನು ಉತ್ತೇಜಿಸಿದರು. ಅವರು ತಮ್ಮಲ್ಲಿಯೇ ಉಳಿಯಬೇಕೆಂದು ರಾಯರನ್ನು ಒತ್ತಾಯ ಪಡಿಸಿದರು. ಆಗ ರಾಯರು ಅಲ್ಲಿಯೇ ಉಳಿದುಕೊಂಡು ತಮ್ಮ ಮನೆಯನ್ನೇ ಅಧ್ಯಾತ್ಮಕೇಂದ್ರವನ್ನಾಗಿ ಪರಿವರ್ತಿಸಿದರು. ಅನೇಕ ರೀತಿಯಿಂದ ಅಧ್ಯಾತ್ಮವಿದ್ಯಾ ಪ್ರಚಾರವನ್ನು ಕೈಗೊಂಡರು. ಇವುಗಳ ಜೊತೆಗೆ ಒಂದು ಅಧ್ಯಾತ್ಮವಿದ್ಯಾನಿಲಯವನ್ನು ಪೂರ್ಣಪ್ರಮಾಣದ ವಿದ್ಯಾಪ್ರಾಪ್ತಿಯನ್ನು ಶಿಷ್ಯರು ಪಡೆಯಲು ಅನುಕೂಲವಾಗು ವಂತೆ ಸ್ಥಾಪಿಸಬೇಕೆಂಬುದು ಅವರ ಮಹತ್ವಾಕಾಂಕ್ಷೆಯಾಗಿತ್ತು. ಅದರಂತೆ ಕ್ರಿ.ಶ. 1936 ರಲ್ಲಿ ತಮ್ಮದೇ ಆದ, ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ಒಂದು ಪ್ರಕಟಣೆಯನ್ನು ಕೊಟ್ಟರು. ಅದರ ಪ್ರಕಾರ ವ್ಯಾಸಂಗದ ಅವಧಿಯು 5 ವರ್ಷಗಳಾಗಿದ್ದವು. ವಿದ್ಯಾರ್ಥಿ ಗಳಿಗೆ ಉಚಿತವಾಗಿ ಊಟ ಮತ್ತು ವಸತಿಗಳನ್ನು ಕಲ್ಪಿಸಲಾಗುತ್ತಿತ್ತು. ಇದು ವೇದಾಂತದ ಪ್ರೌಢವಿದ್ಯಾಭಾಸ್ಯವಾಗಿತ್ತು. ಪಾಠದ ಮುಖ್ಯವಾದ ವಿಷಯವು ಅದ್ವೈತವೇ ಆದರೂ ದ್ವೈತವಿಶಿಷ್ಟಾದ್ವೈತಗಳ ಸಾಮಾನ್ಯ ಪರಿಚಯ, ಜಪ, ಪೂಜೆ, ಪುರಾಣ ಪಠನ, ಉಪನ್ಯಾಸನೀಡುವ ವಿಧಾನಗಳು ಶಿಕ್ಷಣಪದ್ಧತಿಯಲ್ಲಿ ಸೇರಿಸಲ್ಪಟ್ಟಿದ್ದವು.

ಈ ಪ್ರಕಟಣೆಯಿಂದ ಹರ್ಷಿತರಾಗಿ ಅದೇ ವರ್ಷ ಮೂವರು ವಿದ್ಯಾರ್ಥಿಗಳು ಪ್ರೌಢವಿದ್ಯಾಭ್ಯಾಸಕ್ಕಾಗಿ ಅಲ್ಲಿಗೆ ಬಂದು ಸೇರಿದರು. ಕೆಲವರು ಅದೇ ಊರಿನವರೂ ಪಾಠ ಪ್ರವಚನಗಳಲ್ಲಿ ಭಾಗವಹಿಸುತ್ತಿದ್ದರು. ಐದು ವರ್ಷದ ಅವಧಿಯನ್ನು ಪೂರ್ಣ ಗೊಳಿಸಿದವರಿಗೆ ಅಧ್ಯಾತ್ಮವಿದ್ಯಾಪ್ರವೀಣ ಎಂಬ ಉಪಾಧಿಯನ್ನು ನೀಡಲಾಗುತ್ತಿತ್ತು. ಕಾಲಕ್ರಮದಲ್ಲಿ ಈ ವಿದ್ಯಾಲಯವು ಇತೋಪ್ಯತಿಶಯವಾಗಿ ಉನ್ನತಿಯನ್ನು ಪಡೆಯಿತು. ರಾಯರಿಂದ ಉಪದೇಶಾಮೃತವನ್ನು ಪಡೆದವರ ಸಂಖ್ಯೆಗಂತೂ ಮಿತಿಯೇ ಇಲ್ಲ. ಹೀಗೆ ಸನಾತನ ಧರ್ಮದ ಪರವಾಗಿ ರಾಯರಿಂದ ಅಭೂತಪೂರ್ವವಾದ ಕಾರ್ಯವು ಸಂಪನ್ನಗೊಳಿಸಲ್ಪಟ್ಟಿತು. ಮಹಾತ್ಮರಿಗೆ ದುಷ್ಕರವಾದುದು ಯಾವುದಿದೆ?

* * * * *

# ಅಧ್ಯಾಯ - 9

## ಲೇಖಕರಾಗಿ ಶ್ರೀಗಳು

**ರೇರೇ ಜನಾಃ ಶೃಣತ ಮದ್ವಚನಂ ಸಮಸ್ತಂ**
**ಸ್ವರ್ಗೇ ಸುಧಾಸ್ತಿ ನ ಸುಲಭಾ ತು ಸಾ ಭವದ್ಭಿಃ ।**
**ಕುರ್ಮಸ್ತದತ್ರ ಭವತಾಮುಪಕಾರಕಾರಿ**
**ಜ್ಞಾನಾಮೃತಂ ಪಿಬತ ತತ್ಪರಮಾದರೇಣ ॥**

ಅಮೃತವು ಸ್ವರ್ಗದಲ್ಲಿರುವುದು ಅದು ತಮಗೆ ಸುಲಭವಾಗಿ ದೊರಕುವುದಿಲ್ಲ, ಆದುದರಿಂದ ಇಲ್ಲಿಯೇ ತಮಗೆ ಉಪಕಾರವನ್ನು ಮಾಡುತ್ತೇವೆ. ಜ್ಞಾನವೆಂಬ ಅಮೃತವನ್ನು ಪರಮಾದರದಿಂದ ಪಾನಮಾಡಿರಿ.

ಪಂಡಿತರು ಲೋಕದಲ್ಲಿ ಬಹಳಷ್ಟು ಮಂದಿ ಇದ್ದಾರೆ. ಆದರೆ ತಮ್ಮ ಅಭಿಪ್ರಾಯ ಗಳನ್ನು ಹೃದಯಂಗಮಶೈಲಿಯಿಂದ ಬರೆಯಲು ಸಮರ್ಥರಾದ ವಿದ್ವಾಂಸರು ಅತಿ ವಿರಳ. ಅದರಲ್ಲಿಯೂ ಅಸುಲಭಗ್ರಾಹ್ಯವಾದ ವೇದಾಂತವಾಙ್ಮಯದಲ್ಲಿ ಲೇಖಕರು ವಿರಳತರವಾಗಿರುತ್ತಾರೆ. ಅಂತಹ ಕೆಲವೇ ಕೆಲವು ಪ್ರಸಿದ್ಧ ವೇದಾಂತಲೇಖಕರಲ್ಲಿ ಸುಬ್ಬರಾಯರು ಒಬ್ಬರಾಗಿರುತ್ತಾರೆ.

ಲೇಖನಕಲೆಯು ಸುಬ್ಬರಾಯರಿಗೆ ಬಾಲ್ಯದಿಂದಲೇ ವಶ್ಯವರ್ತಿಯಾಗಿತ್ತು. ಪ್ರೌಢಶಾಲೆಯಲ್ಲಿರುವಾಗಲೇ ಬಾಲಕ ಸುಬ್ಬರಾಯರು ಕುತೂಹಲದಿಂದ, ಎಪಿಫಿನೀ ಎಂಬ ಆಂಗ್ಲಪತ್ರಿಕೆಗೆ ಕ್ರೈಸ್ತಧರ್ಮದ ವಿಚಾರದಲ್ಲಿ ಆಕ್ಷೇಪಗಳನ್ನು ಬರೆಯುತ್ತಿದ್ದರು. ಆ ಪತ್ರಿಕೆಯ ಸಂಪಾದಕರೂ ಪ್ರತಿಸಮಾಧಾನಗಳನ್ನು ನೀಡುತ್ತಿದ್ದರು. ಹೀಗೆ ಕ್ರಮವಾಗಿ ಸ್ವೋಪಜ್ಞತೆಯಿಂದ ಅವರ ಲೇಖನಶೈಲಿಯೂ ಪ್ರವೃದ್ಧಮಾನವಾಯಿತು. ಅಧ್ಯಾಪಕ ಜೀವನದಲ್ಲಿ ಛಾತ್ರೋಪಯೋಗಿಯಾದ ವ್ಯಾಕರಣ ಪುಸ್ತಕದ್ವಯವನ್ನು ರಚಿಸಿದ ವಿಚಾರ ವನ್ನು ಹಿಂದೆಯೇ ತಿಳಿಸಿದೆ. ಮುಖ್ಯೋಪಾಧ್ಯಾಯರಾದ ಹೊಸಕೆರೆ ಚಿದಂಬರಯ್ಯ ನವರು **"ಭಕ್ತಿದೀಪಿಕಾ"** ಎಂಬ ಗ್ರಂಥವನ್ನು ಕನ್ನಡದಲ್ಲಿ ಬರೆದರು (1911). ಈ ಗ್ರಂಥದ ಮೇಲೆ ಟಿಪ್ಪಣಿಯಿಂದ ಅಲಂಕೃತವಾದ ವಸ್ತುನಿಷ್ಠವಾದ ಲಘು ವಿಮರ್ಶೆ ಯನ್ನು ಸಹೋದ್ಯೋಗಿಯಾಗಿದ್ದ ರಾಯರು ರಚಿಸಿದರು. ವೇದಾಂತದಲ್ಲಿ ಇದು ಅವರ ಪ್ರಥಮ ಕೃತಿ.

ವಿಶ್ವದಾರ್ಶನಿಕಪರಂಪರೆಯಲ್ಲಿ ಶಂಕರಭಗವತ್ಪಾದರ ವಿಚಾರಧಾರೆಯು ಅನುಪಮವೂ ಮಹತ್ವಪೂರ್ಣವೂ ಆದುದು. ಅವರು ದರ್ಶನ ಮತ್ತು ಧರ್ಮಗಳ ಅವಿನಾಭಾವಸಂಬಂಧವನ್ನು ಉದ್ಘಾಟಿಸಿ, ಸಾಮಾಜಿಕ ಜೀವನದಲ್ಲಿ ವೇದಾಂತದ ಪ್ರಾಮುಖ್ಯತೆಯನ್ನು ಪ್ರತಿಪಾದಿಸಿದರು. ಆದುದರಿಂದಲೇ ಸಮಗ್ರಭಾರತದಲ್ಲಿ ಪ್ರತಿ ಸಂವತ್ಸರವೂ ವೈಶಾಖಶುದ್ಧ ಪಂಚಮಿಯ ದಿನ. ಶಂಕರರ ಜಯಂತಿ ಮಹೋತ್ಸವವು ಉತ್ಸಾಹದಿಂದ ಆಚರಿಸಲ್ಪಡುತ್ತದೆ. ಅದರಂತೆ ಹುಬ್ಬಳ್ಳಿನಗರದಲ್ಲಿ ಆಯೋಜಿತವಾಗಿದ್ದ ಶಂಕರಜಯಂತಿ ಸಂದರ್ಭದಲ್ಲಿ, ವಿದ್ವತ್ಸಮುದಾಯದಲ್ಲಿ ಖ್ಯಾತನಾಮರಾಗಿದ್ದ ಮಹಾಭಾಗವತರು ವೇದಾಂತದರ್ಶನವನ್ನು ಕುರಿತು ಪಾಂಡಿತ್ಯ ಪೂರ್ಣವಾದ ಉಪನ್ಯಾಸ ಮಾಲಿಕೆಯನ್ನು ನೀಡಿದರು. ಶಾಲೆಯ ಕೆಲಸವೇ ಮುಂತಾದ ಕಾರ್ಯಬಾಹುಲ್ಯದ ನಡುವೆಯೂ, ವಿರಾಮವನ್ನು ಕಲ್ಪಿಸಿಕೊಂಡು, ಸಂಕಲ್ಪಿತಮನಸ್ಸುಳ್ಳವರಾದ ರಾಯರು ಆ ಉಪನ್ಯಾಸಗಳ ಸಾರವನ್ನು ಗ್ರಹಿಸಿ, ಆಂಗ್ಲಭಾಷೆಯಲ್ಲಿ ಎರಡು ಗ್ರಂಥಗಳನ್ನು ರಚಿಸಿದರು. ಭಗವದ್ಗೀತೆಯನ್ನು ಆಧರಿಸಿ ಸುಬ್ಬರಾಯರಿಂದ ರಚಿತವಾದ, *The Heart of Bhagavadgita* ಎಂಬ ಗ್ರಂಥವು ಮಹಾಭಾಗವತರಿಂದಲೇ ಗಾಯಕವಾಡ ಗ್ರಂಥಾವಳಿಯಲ್ಲಿ ಪ್ರಕಾಶಿಸಲ್ಪಟ್ಟಿತು. ಕಾಯೇನ ವಾಚಾ ಮತ್ತು ಮನಸಾ ಪುಣ್ಯಪೀಯೂಷ ಪೂರ್ಣರಾದ ಮತ್ತು ದಾವಣಗೆರೆಯಲ್ಲಿ ಅತಿ ಧನಿಕರಾದ ದೊಡ್ಡಬಸಪ್ಪನವರು, ರಾಯರ ವಿಷಯನಿರೂಪಣಾಸಾಮರ್ಥ್ಯದಿಂದ ಆಕರ್ಷಿತರಾಗಿ, ಸ್ವಾಮಿವಿವೇಕಾನಂದರಿಂದ ರಚಿತವಾಗಿರುವ ರಾಜಯೋಗ ಎಂಬ ಗ್ರಂಥದ ಕನ್ನಡ ಭಾಷಾವತರಣಿಕೆಯನ್ನು ಅವರಿಂದ ಮಾಡಿಸಿದರು. ಆ ಗ್ರಂಥದ ಮಾರಾಟದಿಂದ ಬಂದ ಹಣವನ್ನು ರಾಯರಿಗೆ ಅರ್ಪಿಸಿದರು. ಈ ಹಣವು ಸುಬ್ಬರಾಯರಿಗೆ ತಮ್ಮ ಮುಂದಿನ ಸಂಸ್ಕೃತಕನ್ನಡಭಾಷಾಮಾಧ್ಯಮದ ಗ್ರಂಥಸಂಪಾದನೆಗೆ ಮೂಲಧನ ವಾಯಿತು.

ಕಲ್ಯಾಣನಗರಿಯು ಬಹುಕಾಲದಿಂದಲೂ ಸಾಹಿತ್ಯ, ಕಲೆ, ಸಂಗೀತ ಮತ್ತು ದರ್ಶನಗಳ ಕೇಂದ್ರಬಿಂದುವಾಗಿದೆ. ಇಂದಿಗೂ ಕೂಡ ಅದೇ ಸದಭಿರುಚಿಯು ಜನರ ಮನದಲ್ಲಿ ಚಿರಸ್ಥಾಯಿಯಾಗಿ ನಿಂತಿದೆ. ಚಿಂತನಶೀಲರೂ, ವಿಚಾರಜ್ಞರೂ ಆದ ಅನೇಕ ಮಹಾಪುರುಷರು ಇಲ್ಲಿಯೇ ಸಿದ್ಧಿಯನ್ನು ಪಡೆದಿರುತ್ತಾರೆ. ಅಧ್ಯಾಪಕವೃತ್ತಿಯಲ್ಲಿ ವರ್ಗಾವಣೆಯನ್ನು ಪಡೆದ ಸುಬ್ಬರಾಯರು ಕ್ರಿ.ಶ. 1915ರಲ್ಲಿ ಬೆಂಗಳೂರು ನಗರಕ್ಕೆ ಬಂದರು. ಆಗ ಅವರು ಅಯ್ಯರ್‌ರವರ ಸ್ವೋಪಜ್ಞತೆಯಿಂದ ಕೂಡಿದ ವಿಚಾರಧಾರೆಯಿಂದ ಪ್ರಭಾವಿತರಾದರು. ಇದಕ್ಕಿಂತ ಹಿಂದೆಯೇ ರಾಯರು, ಅಯ್ಯರ್‌ರವ

ರೊಂದಿಗೆ ಅಹೇತುಕಮೈತ್ರಿಯನ್ನು ಸಂಪಾದಿಸಿದ್ದರು. ಈಗ ಅವರಿಂದ ಪ್ರಬೋಧಿತ ರಾಗಿ, ಮೂಲಾವಿದ್ಯನಿರಾಸ ಎಂಬ ಗ್ರಂಥವನ್ನು ರಚಿಸಿದರು. ಈ ಕೃತಿಯು ಬಹು ಕಾಲಪರ್ಯಂತ ವಿದ್ವತ್ಸಮಾಜದಲ್ಲಿ ವಾದವಿವಾದಕ್ಕೆ ಅವಕಾಶ ಮಾಡಿಕೊಟ್ಟಿತು. ಗ್ರಂಥದ ಕೊನೆಯಲ್ಲಿ ರಾಯರು ಕೃಷ್ಣಸ್ವಾಮಿಗಳನ್ನು ಕೃತಜ್ಞತೆಯಿಂದ ಸ್ಮರಿಸಿರುತ್ತಾರೆ. ಶಾಂಕರಸಿದ್ಧಾಂತವನ್ನು ಕುರಿತು ವಿದ್ವಜ್ಜನಮಾನ್ಯವಾದ ಅನೇಕ ಗ್ರಂಥಗಳು ಸುಬ್ಬರಾಯ ರಿಂದ ರಚಿಸಲ್ಪಟ್ಟವು. ಗಂಭೀರವಾದ ವಿಷಯವನ್ನು ಪ್ರಸನ್ನವಾದ ಶೈಲಿಯಿಂದ ನಿರೂಪಿಸುವ ಕಲೆಯು ಇವರಿಗೆ ಕರಗತವಾಗಿತ್ತು. ಇವರ ಹದಿನೈದಕ್ಕಿಂತ ಹೆಚ್ಚು ಉದ್ಗ್ರಂಥಗಳು ಅದ್ವೈತವಾಙ್ಮಯದಲ್ಲಿ ಅಮೂಲ್ಯ ರತ್ನಗಳಂತೆ ಶೋಭಿಸುತ್ತಿವೆ.

**'ಮೂಕಂ ಕರೋತಿ ವಾಚಾಲಂ....'** ಎಂಬೊಂದು ಸುಭಾಷಿತವಿದೆ. ಅದರಂತೆ ಯಾರುಯಾರು ಜ್ಞಾನೇಚ್ಛುಗಳಾಗಿ ರಾಯರ ಸಾಮೀಪ್ಯವನ್ನು ಹೊಂದಿದರೋ ಅವರೆಲ್ಲರೂ ಅಧಿಗತಪರತತ್ತ್ವವಿಚಾರರಾದರು. ಇದಕ್ಕೆ ದೃಷ್ಟಾಂತವೆಂದರೆ, ರಾಯರು ಆಚಾರ್ಯಪಾದರಿಂದ ರಚಿತವಾಗಿರುವ ಪ್ರಾತಃಸ್ಮರಣವೆಂಬ ಸ್ತೋತ್ರವನ್ನು, ನಾರಣಪ್ಪ ರೆಂಬ ಭಕ್ತಮಹಾಶಯರಿಗೆ ಬೋಧಿಸಿದರು. ತತ್ತ್ವವಿಚಾರವು ಕೇವಲ ಪಂಡಿತರ ಸೊತ್ತಲ್ಲವೆಂಬ ಅಂಶವನ್ನು ದೃಢಪಡಿಸಲು, ಈ ಮಿತ್ರರ ಜೊತೆ ನಡೆಸಿದ ಪ್ರಶ್ನೋತ್ತರ ರೂಪದ ವಾರ್ತಾಲಾಪವನ್ನು ಅವರಿಂದಲೇ ಪುಸ್ತಕದ ರೂಪದಲ್ಲಿ ಸುಬ್ಬರಾಯರು ಬರೆಯಿಸಿದರು. ಈ ಕೃತಿಯು **ವೇದಾಂತಬಾಲಬೋಧಿನಿ** ಎಂಬ ಹೆಸರಿನಿಂದ ಪ್ರಕಟಿತ ವಾಯಿತು. ಜನಪ್ರಿಯ ವೇದಾಂತಗ್ರಂಥಮಾಲೆಯಲ್ಲಿ ಇದೇ ಪ್ರಥಮ ಕುಸುಮ. ಇದರ ಮುದ್ರಣದ ಸಂದರ್ಭದಲ್ಲಿ ಮುದ್ರಣಕಾರರು ರಾಯರನ್ನು ಕುರಿತು ಏತಕ್ಕಾಗಿ ಈ ಶುಷ್ಕತತ್ತ್ವವನ್ನು ನಿರೂಪಿಸುತ್ತೀರಿ? ಈ ನೀರಸಗ್ರಂಥದಿಂದ ಏನು ಪ್ರಯೋಜನ? ಇದರ ಬದಲು ಒಳ್ಳೆಯ ಕಥೆಯನ್ನಾದರೂ ಬರೆದರೆ ಕೀರ್ತಿ ಮತ್ತು ಹಣ, ಎರಡೂ ದೊರೆಯುತ್ತದೆ ಎಂದು ಸಾಧಾರವಾಗಿ ಆಕ್ಷೇಪಿಸಿದರಂತೆ. ಆಗ ರಾಯರು, ನಾನು ಕಥೆಗಳನ್ನು ಬರೆಯುವುದಿಲ್ಲ, ಬದಲಾಗಿ ಈ ಶುಷ್ಕತರ್ಕದಲ್ಲಿಯೂ ಕಥೆಯಂತೆ ಜನರಲ್ಲಿ ಆಸಕ್ತಿಯನ್ನು ಹುಟ್ಟಿಸುತ್ತೇನೆ ಎಂದು ಆತ್ಮವಿಶ್ವಾಸದಿಂದ ಹೇಳಿದರಲ್ಲದೆ, ಅಂತೆಯೇ ಮಾಡಿ ತೋರಿಸಿದರು. ಕರ್ನಾಟಕ ಭಾಷೆಯಲ್ಲಿ ಬೇರೆಯ ನೂರಾರು ವೇದಾಂತಗ್ರಂಥಗಳಿರಬಹುದು. ಆದರೆ ದರ್ಶನಾಂತರಗಳಿಂದ ಮಿಶ್ರಿತವಾಗದ, ಶಾಂಕರ ಪ್ರಕ್ರಿಯಾಬದ್ಧವಾದ, ಪಾರಿಭಾಷಿಕಶಬ್ದಕ್ಲೇಶವನ್ನು ಕಡಿಮೆಗೊಳಿಸಿ, ಕಥೆಯಂತೆ ಸರಳ ಮತ್ತು ಹೃದಯಂಗಮವಾಗಿ ಚಿತ್ರಿಸಲ್ಪಟ್ಟಿರುವ, ರಾಯರ ಶತಾಧಿಕವಾದ ಗ್ರಂಥಗಳು ಅದ್ವೈತಸಾರಸ್ವತಲೋಕಕ್ಕೆ ವಿನೂತನವಾದ ಕೊಡುಗೆಯಾಗಿ ವಿರಾಜಿಸುತ್ತಿವೆ.

ಕಥೆಗಳಂತೆಯೇ ಗೀತಮಾಧ್ಯಮವು ಅತಿಪರಿಣಾಮಕಾರಿಯಾದುದು. ಆದುದರಿಂದ ರಾಯರು ಅದ್ವೈತತತ್ತ್ವವನ್ನು **ಅಧ್ಯಾತ್ಮಗೀತಾವಳಿ** ಎಂಬ ಹೆಸರಿನಿಂದ ಗೇಯತೆಗೆ ಹೊಂದಿಸಿದರು. ಗ್ರಂಥಪ್ರಕಾಶನ ಮತ್ತು ಮುದ್ರಣಕಾರ್ಯವೂ ಈಗಲೂ ಸಾಹಸದ ಉದ್ಯಮವಾಗಿದೆ. ಅದು ಅನೇಕ ಸಮಸ್ಯೆಗಳಿಂದ ಗ್ರಸ್ತವಾದುದು. ಈ ವಿಷಯದಲ್ಲಿ ಸುಬ್ಬರಾಯರು ಹೊರತಾಗಿರಲಿಲ್ಲ ಆದರೂ, ನ್ಯಾಯಮಾರ್ಗದಿಂದ ಧೀರರು ವಿಚಲಿತರಾಗುವುದಿಲ್ಲವಲ್ಲವೇ? ಅದರಂತೆ ಈ ಕಠಿನತಮವಾದ ಉದ್ಯೋಗದಲ್ಲಿ ರಾಯರು ತಮ್ಮನ್ನು ತಾವು ತೊಡಗಿಸಿಕೊಂಡು ಕೀರ್ತಿಶಾಲಿಗಳಾದರು. ಗ್ರಂಥಪ್ರಕಟಣೆಯಲ್ಲಿನ ಸಮಸ್ಯೆಗಳನ್ನು ನೋಡಿ, ತಮ್ಮ ಪುತ್ರರಿಗೆ, ಮುದ್ರಣವಿಜ್ಞಾನದಲ್ಲಿ ಶಿಕ್ಷಣ ಕೊಡಿಸುವುದರ ಮೂಲಕ, ತಮ್ಮದೇ ಮುದ್ರಣಾಲಯವನ್ನು ಪ್ರಾರಂಭಿಸಿದರು. ಅಲ್ಲಿ ಪ್ರಥಮತಃ ಪುರುಷಾರ್ಥಗ್ರಂಥಾವಳಿ ಎಂಬ ಹೆಸರಿನಿಂದ ಸಂಸ್ಕೃತ ಭಾಷಾಭ್ಯಾಸ ವಿಷ್ಣುಸಹಸ್ರನಾಮ ಸ್ತೋತ್ರ ಮುಂತಾದ ಜನೋಪಯೋಗಿಯಾದ ಪುಸ್ತಕಗಳನ್ನು ಅರ್ಥಸಮೇತ ಪ್ರಕಟಿಸಿದರು. ಕೆಲವು ಮಹನೀಯರು ಧನಸಹಾಯವನ್ನು ಮಾಡಿದರೂ ಸಹ ಪುಸ್ತಕದ ಪ್ರಚಾರವು ಕಷ್ಟವಾದುದರಿಂದ ಉದ್ಯಮದಲ್ಲಿ ನಷ್ಟವೇ ಹೆಚ್ಚಾಗಿತ್ತು. ಆದರೂ ಉತ್ತಮಗುಣಸಂಪನ್ನರಾದ ಅವರು ಪ್ರಾರಂಭಿಸಿದ ಕಾರ್ಯವನ್ನು ನಿಲ್ಲಿಸಲಿಲ್ಲ. ವಿಘ್ನಗಳು ಮತ್ತೆ ಮತ್ತೆ ಎದುರಾಗುತ್ತಿದ್ದರೂ ಜನಸಾಮಾನ್ಯರಲ್ಲಿಯೂ ಅದ್ವೈತವಿದ್ಯೆಯನ್ನು ಪ್ರಚಾರಮಾಡಲು ಕಟಿಬದ್ಧರಾಗಿದ್ದ ಅವರು ಎದೆಗುಂದಲಿಲ್ಲ. ಕನ್ನಡದ ಭಾಷೆಯಲ್ಲಿಯೇ ನೂರಕ್ಕಿಂತ ಹೆಚ್ಚು ಸರಳವಾದ ಕೃತಿಗಳನ್ನು ರಚಿಸಿ ಬೆಳಕಿಗೆ ತಂದರು. ಅವೆಲ್ಲ ನಮಗೆ ಈಗ ಮಾರ್ಗದರ್ಶನ ನೀಡುತ್ತಿವೆ.

ಶುದ್ಧಶಾಂಕರಪ್ರಕ್ರಿಯೆಯನ್ನು ಭಾರತದಿಂದ ಹೊರಗೂ ಪ್ರಚಾರಮಾಡುವುದು ಅವರ ಉದ್ದೇಶಗಳಲ್ಲಿ ಒಂದಾಗಿದ್ದಿತು. ಅದಕ್ಕಾಗಿ ಆಂಗ್ಲಭಾಷೆಯಲ್ಲಿಯೂ ಹದಿನೈದಕ್ಕಿಂತ ಹೆಚ್ಚು ಕೃತಿಗಳನ್ನು ಅವರು ರಚಿಸಿರುತ್ತಾರೆ. ಈ ಕೃತಿಗಳು ವಿದೇಶೀಯರಲ್ಲಿಯೂ ಅಧ್ಯಾತ್ಮವಿದ್ಯೆಯ ಬಗ್ಗೆ ಆಸಕ್ತಿಯನ್ನು ಜಾಗೃತಗೊಳಿಸಿದವು.

ಶಾಲೆಯ ಉದ್ಯೋಗದಿಂದ ನಿವೃತ್ತರಾದಮೇಲೆ ಅವರು ತಮ್ಮ ಸಂಪೂರ್ಣ ಸಮಯವನ್ನು ಅದ್ವೈತಸೇವೆಗೆ ಮುಡುಪಾಗಿರಿಸಿದರು. ಹೊಳೆನರಸೀಪುರದಲ್ಲಿ ವಾಸಮಾಡುತ್ತ ಅಲ್ಲಿಯೇ ಅಧ್ಯಾತ್ಮಪ್ರಕಾಶಕಾರ್ಯಾಲಯ ಮತ್ತು ವಾಚನಾಲಯವನ್ನು ಆರಂಭಿಸಿದರು. ಅವರ ಜೀವನದ ಸರ್ವಸ್ವವೂ ಆಧ್ಯಾತ್ಮಿಕಕ್ಷೇತ್ರದ ಉನ್ನತಿಗೆ ಮೀಸಲಾಗಿತ್ತು. ಹಗಲಿರುಳೆನ್ನದೆ ಲೇಖನ, ಪ್ರವಚನ ಮುಂತಾದವುಗಳ ಮೂಲಕ ಶಾಂಕರವೇದಾಂತವನ್ನು ಸಾಂಪ್ರದಾಯಕ ವಿಚಾರಧಾರೆಗೆ ಅನುಗುಣವಾಗಿ ವಿಸ್ತರಿಸಿದರು.

ಶ್ರೀಗಳವರು ರಚಿಸಿರುವ ನೂರಾರು ಕೃತಿಗಳಲ್ಲಿ ಕೆಲವು ಸರಳವಾದ ಮತ್ತು ಚಿಕ್ಕದಾದ ಕೃತಿಗಳಾದರೆ, ಮತ್ತೆ ಕೆಲವು ವಿನೂತನವೂ ವಿಶಿಷ್ಟವೂ ಆಗಿವೆ. ಅವಸ್ಥಾತ್ರಯ ವಿಮರ್ಶೆಯಿಂದ ಕೂಡಿದ ಅವರ ''**ಪರಮಾರ್ಥಚಿಂತಾಮಣಿ**'' ಯೆಂಬ ಕೃತಿಯು ಗ್ರಂಥರತ್ನವೆಂದು ಖ್ಯಾತಿ ಪಡೆದಿದೆ. ಇದರ ವಿಷಯ ನಿರೂಪಣೆ ಯಲ್ಲಿ ಅನುಭವದ ಆಳ, ವ್ಯಾಪಕತೆ ಮತ್ತು ಗಂಭೀರತೆಗಳು ಎದ್ದು ಕಾಣುತ್ತವೆ.

''**ಮಾಂಡೂಕ್ಯರಹಸ್ಯವಿವೃತಿಃ**''ಯು ಮತ್ತೊಂದು ವಿಶಿಷ್ಟ ಗ್ರಂಥ . ಇದು ಸಂಸ್ಕೃತಭಾಷೆಯಲ್ಲಿದ್ದು, ಇದರ ಕನ್ನಡಭಾಷೆಯ ಅವತರಣಿಕೆಯೂ ''**ಶ್ರೀ ಗೌಡಪಾದ ಹೃದಯ**'' ಎಂಬ ಹೆಸರಿನಿಂದ ಶ್ರೀಗಳವರಿಂದಲೇ ರಚಿತವಾಗಿದೆ. ಈ ಎರಡೂ ಗ್ರಂಥ ಗಳಲ್ಲಿ ಗೌಡಪಾದರ ಮಾಂಡೂಕ್ಯಕಾರಿಕೆಗಳ ಜೊತೆಗೆ ಬೌದ್ಧಮತ ಪ್ರಕ್ರಿಯೆಯ ಸಂಬಂಧವು ಇದೆಯೆಂಬವಾದವನ್ನು ಅಲ್ಲಗಳೆಯಲು ಬೇಕಾದ ವಿಶೇಷ ರೀತಿಯ ಯುಕ್ತಿಗಳು ಚರ್ಚಿಸಲ್ಪಟ್ಟಿವೆ. ''**ವೇದಾಂತಪ್ರಕ್ರಿಯಾಪ್ರತ್ಯಭಿಜ್ಞೆ**''ಯು ಅವರ ಮೇರು ಕೃತಿ. ಈ ಗ್ರಂಥದಲ್ಲಿ ಶಂಕರರ ಹಿಂದಿನ ಅದ್ವೈತೇತಿಹಾಸದಿಂದ ಆರಂಭಿಸಿ, ಇಂದಿನ ವರೆಗಿನ ಎಲ್ಲ ಪ್ರಸ್ಥಾನಗಳೂ ಚರ್ಚಿಸಲ್ಪಟ್ಟಿವೆ.

## ರಾಜಾಶ್ರಯ ಪ್ರಾಪ್ತಿ

ಪೂರ್ವಕಾಲದಲ್ಲಿ ಕಾಳಿದಾಸನೇ ಮುಂತಾದ ಮಹಾಕವಿಗಳು ರಾಜಾಶ್ರಯ ದಿಂದಲೇ ಹೆಚ್ಚಿನ ಯಶಸ್ಸನ್ನು ಗಳಿಸಿದರೆಂದು ಕೇಳಿದ್ದೇವೆ. ರಾಜರೂ ಕೂಡ ಕವಿ ಗಳಿಂದಲೇ ಖ್ಯಾತಿಯನ್ನು ಪಡೆದಿರುತ್ತಾರೆ. (ಯೋಗ್ಯರಾದ ಪಂಡಿರೇ ರಾಜರ ಮೆಚ್ಚುಗೆ ಯನ್ನು ಗಳಿಸಲು ಅರ್ಹರಾಗಿರುತ್ತಾರೆ.) ಕ್ರಿ.ಶ. 1944ರಲ್ಲಿ ಧನಾಭಾವದಿಂದ ಸುಬ್ಬರಾಯರ ಎಲ್ಲಾ ಕಾರ್ಯಗಳೂ ಸ್ಥಗಿತಪ್ರಾಯವಾಗಿದ್ದವು. ತಮ್ಮ ಕಾರ್ಯಕ್ರಮ ಗಳ ಅವಸಾನವೇ ಸನ್ನಿಹಿತವಾಯಿತೆಂದು ತಿಳಿದು ರಾಯರು ಲೇಖನರೂಪದಿಂದ ಆ ವೃತ್ತಾಂತವನ್ನು ಮಹಾಜನರಿಗೆ ತಿಳಿಸಲು ಪ್ರವೃತ್ತರಾಗಿದ್ದರು. ಈ ಸಂದರ್ಭದಲ್ಲಿ ಮಹಿಷೂರಪುರಾಧೀಶ್ವರರೂ, ಸುಶಿಕ್ಷಿತರೂ, ಬಹುಶ್ರುತರೂ, ಆರ್ಷ ವಿದ್ಯಾಪರಿಪಾಲನೆ ಯಲ್ಲಿ ಉತ್ಸುಕರೂ ಆದ ಶ್ರೀ ಶ್ರೀಜಯಚಾಮರಾಜೇಂದ್ರ ಮಹಾಸ್ವಾಮಿಗಳು, ವೈದಿಕಗ್ರಂಥಗಳ ಮತ್ತು ಪುರಾಣಗಳ ಕನ್ನಡ ಭಾಷಾನುವಾದವನ್ನು ಪಂಡಿತರುಗಳಿಂದ ಮಾಡಿಸುತ್ತಿದ್ದರು. ಈ ಯೋಜನೆಯ ಅಡಿಯಲ್ಲಿ, ಶಂಕರಭಗವತ್ಪಾದಪ್ರಣೀತವಾದ ಸಮಸ್ತವಾಙ್ಮಯವನ್ನೂ ಅನುವಾದ ಮಾಡಿಸಲು ಮನಸ್ಸುಳ್ಳವರಾಗಿ, ಆಸ್ಥಾನಪಂಡಿತ

ರಾಗಿದ್ದ ಶ್ರೀ ವಿಟ್ಠಲಶಾಸ್ತ್ರಿಗಳನ್ನು ಈ ಕಾರ್ಯದಲ್ಲಿ ನಿಯೋಜಿಸಿದರು. ಶಾಸ್ತ್ರಿಗಳು ಸುಬ್ಬರಾಯರ ಶಿಷ್ಯರು. **'ಸ್ವಾಮಿ ಭಾಗ್ಯಮನು ಗಂತಾರೋ ವಯಂ'** ಎಂಬುದು ವಿಟ್ಠಲಶಾಸ್ತ್ರಿಗಳ ಮನಸ್ಸಿನ ಧ್ಯೇಯವಾಗಿತ್ತು. ಅವರು, ಈ ಮಹತ್ಕಾರ್ಯದಲ್ಲಿ ತಮ್ಮ ಗುರುಗಳೇ ಕುಶಲರೆಂದು ಭಾವಿಸಿ, ಈ ವಿಷಯವನ್ನು ಮಹಾರಾಜರಲ್ಲಿ ಬಿನ್ನವಿಸಿದರು. ಆಗ ಮಹಾರಾಜರು ಪೂಜ್ಯಪಾದರಿಂದ ಅನೂದಿತವಾಗಿರುವ ಕೃತಿಗಳನ್ನು ತಾವೇ ಸ್ವತಃ ಪರೀಕ್ಷಿಸಿ, ಸಂತುಷ್ಟರಾದರು. ಸುಬ್ಬರಾಯರ ಗ್ರಂಥಸಂಪಾದನೆಯ ಉದ್ಯೋಗವು ಮಹಾರಾಜರ ಮನಸ್ಸಿನಲ್ಲಿ ದೃಢವಾದ ವಿಶ್ವಾಸವನ್ನು ಮೂಡಿಸಿತು. ಆಗ ಅವರು ಶಂಕರರ ಗ್ರಂಥಗಳ ಅನುವಾದದ ಮಹತ್ಕಾರ್ಯವನ್ನು ರಾಯರಿಗೆ ಪೂರ್ಣವಾಗಿ ವಹಿಸಿದರು. ಮಹಾ ಪ್ರಭುಗಳಿಂದ ಕೊಡಲ್ಪಟ್ಟ ಅನಿರೀಕ್ಷಿತವಾದ ಸಹಾಯವು, ಪೂಜ್ಯ ಪಾದರ ಆಧ್ಯಾತ್ಮಿಕ ಕೃಷಿವಿಷಯದಲ್ಲಿ ಅಮೃತಸೇಚನವಾಯಿತು. ಹಗಲಿರುಳೂ ವಿದ್ಯಾರ್ಥಿಗಳಿಗೆ ಅಧ್ಯಾಪನ, ಪುರಾಣಪ್ರವಚನ, ಪ್ರತಿಭಾನುವಾರದ ವಿಶೇಷೋಪನ್ಯಾಸ ಮುಂತಾದ ಅನೇಕ ಕಾರ್ಯಬಾಹುಲ್ಯದ ನಡುವೆಯೂ ರಾಯರು ಅವಕಾಶವನ್ನು ಕಲ್ಪಿಸಿಕೊಂಡು ಭಾಷ್ಯಗಳ ಅನುವಾದವನ್ನು ಆರಂಭಿಸಿ, ಯಥಾಕ್ರಮದಲ್ಲಿ ಮತ್ತು ಯಥಾಕಾಲದಲ್ಲಿ ತಮ್ಮ ಮುದ್ರಣಾಲಯದಲ್ಲಿಯೇ ಅವುಗಳನ್ನು ಮುದ್ರಿಸಿ, ಮಹಾರಾಜರ ಸನ್ನಿಧಿಗೆ ಅರ್ಪಿಸುತ್ತಿದ್ದರು. ಈ ಕನ್ನಡ ಭಾಷಾಗ್ರಂಥಗಳು **''ಶ್ರೀಜಯ ಚಾಮರಾಜೇಂದ್ರ ಗ್ರಂಥರತ್ನ ಮಾಲಿಕಾ''**ಎಂದು ಪ್ರಸಿದ್ಧವಾಗಿದೆ. ಈ ಮಾಲಿಕೆಯಲ್ಲಿ ಮುದ್ರಿತವಾದ ಶಾಂಕರಭಾಷ್ಯಾನುವಾದ ಗ್ರಂಥಗಳು ಈ ರೀತಿ ಇವೆ :

1. ಮೂರು ಭಾಗಗಳಲ್ಲಿ ಉಪನಿಷತ್ತುಗಳ ಭಾಷ್ಯಗಳು.
2. ಎರಡು ಭಾಗಗಳಲ್ಲಿ ಭಗವದ್ಗೀತಾಭಾಷ್ಯ.
3. ಬ್ರಹ್ಮಸೂತ್ರಭಾಷ್ಯದ ಪ್ರಥಮ ಭಾಗ
4. ಪ್ರಕರಣಗ್ರಂಥಗಳ ಅನುವಾದದ ಪ್ರಥಮ ಭಾಗ
5. ಬೃಹದಾರಣ್ಯಕೋಪನಿಷತ್ತಿನ ಭಾಷ್ಯ
6. ಛಾಂದೋಗ್ಯೋಪನಿಷತ್ತಿನ ಭಾಷ್ಯ.

ಶಾಸ್ತ್ರಗ್ರಂಥಗಳು ಸಾಮಾನ್ಯವಾಗಿ ಪಾಠಾಂತರಗಳು ಮತ್ತು ವ್ಯಾಖ್ಯಾನ ಬಾಹುಲ್ಯದಿಂದ ಭಾರಭೂತವಾಗಿರುತ್ತವೆ. ಈ ರೀತಿಯಿಂದ ಸಮಸ್ಯಾಭೂಯಿಷ್ಠ ವಾದ

ಕಾರ್ಯದಲ್ಲಿ ಪೂಜ್ಯಪಾದರು ತಮ್ಮ ಸಾಮರ್ಥ್ಯ ಮತ್ತು ಪಾಂಡಿತ್ಯದಿಂದ ಸಂಪೂರ್ಣ ವಾಗಿ ಜಯಶಾಲಿಗಳಾದರು. ಗ್ರಂಥಗಳ ನಿರ್ದುಷ್ಟತೆ ಮತ್ತು ಪೂಜ್ಯಪಾದರ ಕೂಲಂಕಷ ವಿಚಾರ ಸಾಮರ್ಥ್ಯವನ್ನು ಪರಿವೀಕ್ಷಿಸಿ, ಸಂತುಷ್ಟಾಂತರಂಗದಿಂದ ಶ್ರೀಮನ್ಮಹಾರಾಜರು, ರಾಯರನ್ನು **'ಆಸ್ಥಾನವಿದ್ವಾನ್'** ಎಂಬ ಉಪಾಧಿಯನ್ನಿತ್ತು ಸಂಮಾನಿಸಿದರು. ಆದರೆ ಕೀರ್ತಿ ಮತ್ತು ಲಾಭದ ಆಕಾಂಕ್ಷೆಯಿಂದ ವಿರಹಿತರೂ, ಸಂನ್ಯಾಸಿಗಳೂ ಆದ ಪೂಜ್ಯ ಪಾದರು ತಮ್ಮ ಹೆಸರಿನೊಂದಿಗೆ ಈ ಬಿರುದನ್ನು ಸೇರಿಸಿಕೊಳ್ಳಲು ಬಯಸಲಿಲ್ಲ. ನೈಷ್ಕರ್ಮ್ಯಸಿದ್ಧಿಯಲ್ಲಿ ಸುರೇಶ್ವರಾಚಾರ್ಯರು,

**ನ ಖ್ಯಾತಿಲಾಭಪೂಜಾರ್ಥಂ ಗ್ರಂಥೋಸ್ಮಾಭಿರುದೀರ್ಯತೇ ।**
**ಸ್ವಬೋಧಪರಿಶುಧ್ಯರ್ಥಂ ಬ್ರಹ್ಮವಿನ್ನಿಕಷಾಶ್ಮಸು ॥ (ನೈ.ಸಿ.1-6)**

ಕೀರ್ತಿ, ಲಾಭ ಅಥವಾ ಗೌರವಗಳಿಗಾಗಿ ನಮ್ಮಿಂದ ಗ್ರಂಥವು ಬರೆಯಲ್ಪ ಟ್ಟಿಲ್ಲ. ಸ್ವಂತ ಜ್ಞಾನವನ್ನು ಬ್ರಹ್ಮವಿದರೆಂಬ ಒರೆಗಲ್ಲಿನ ಮೇಲೆ ಪರಿಶುದ್ಧಗೊಳಿಸಿಕೊಳ್ಳಲು ರಚಿಸಲ್ಪಟ್ಟಿದೆ ಎಂದು ಹೇಳಿರುವರಷ್ಟೆ !

ಆದರೂ ಬಹುಮಾನ ಪೂರ್ವಕವಾದ ಈ ಪ್ರಸಂಗವು ಪ್ರಭುಗಳ ವಿಷಯ ದಲ್ಲಿ ಅನಾದರ ಸೂಚಕವಾಗದಿರಲೆಂದು, ಈ ಉಪಾಧಿಯನ್ನು ಗ್ರಂಥದ್ವಯಮಾತ್ರ ಪರಿಮಿತವನ್ನಾಗಿ ತಮ್ಮ ನಾಮಧೇಯದ ಜೊತೆ ಸೇರಿಸಲು ಪೂಜ್ಯಪಾದರು ಅನುಮತಿ ನೀಡಿದ್ದರು. ಈ ರೀತಿಯಾಗಿ ವೇದಾಂತ ತತ್ತ್ವಪ್ರಚಾರದ ವಿಷಯದಲ್ಲಿ ಆರ್ಜವ ಬುದ್ಧಿಯುಕ್ತರಾದ ವೇದಾಂತಿಗಳು ಅತಿವಿರಳವೆಂಬುದರಲ್ಲಿ ಸ್ವಲ್ಪವೂ ಅತಿಶಯೋಕ್ತಿ ಯಿಲ್ಲ. ಕ್ರಿ.ಶ. 1944ರಲ್ಲಿ ದೊರೆತ ರಾಜಾಶ್ರಯವು ಹನ್ನೆರಡುವರ್ಷ ಪರ್ಯಂತ ದಶಾಧಿಕಗ್ರಂಥಗಳ ಪ್ರಕಟಣೆಯಲ್ಲಿ ಸಹಾಯಕವಾಗಿ, ಕ್ರಿ.ಶ. 1956ರಲ್ಲಿ ಸ್ಥಗಿತವಾಯಿತು.

ರಾಜಾಶ್ರಯವು ತಪ್ಪಿದರೂ, ಅಲ್ಲಿಯವರೆಗೆ ದೊರೆತ ಪ್ರೋತ್ಸಾಹದಿಂದ ಕಾರ್ಯಾಲಯವು ಪುನರುಜ್ಜೀವನವನ್ನು ಪಡೆಯಿತು. ಅನಂತರ ಸಜ್ಜನರ ಸಹಕಾರ ದಿಂದ ಮತ್ತು ಮಹಾಜನರ ಔದಾರ್ಯದಿಂದ ಇತೋಪ್ಯತಿಶಯವಾಗಿ ವೃದ್ಧಿಯನ್ನು ಹೊಂದಿತು. ಆಹಾರ ಮತ್ತು ವಿಶ್ರಾಂತಿಯನ್ನು ಗಣಿಸದೆ, ಪೂಜ್ಯಪಾದರು ಹಗಲಿರುಳು ಆಧ್ಯಾತ್ಮಿಕೋನ್ನತಿಗೆ ಶ್ರಮಿಸುತ್ತಿದ್ದರು. ತಾವು ಸಂಶೋಧಿಸಿದ ದಾರ್ಶನಿಕ ವಿಷಯ ಗಳನ್ನು ಅಸ್ಖಲಿತವಾಣಿಯಿಂದ ಲೋಕಸಂಗ್ರಹಾರ್ಥವಾಗಿ ಪ್ರಚಾರಮಾಡಿದರು. ಹಾಗೂ

ಪ್ರಕಟಿಸಿದರು. ವೃದ್ಧಾಪ್ಯದಲ್ಲಿಯೂ ಅವರ ಬುದ್ಧಿಯು ಚುರುಕಾಗಿಯೂ, ಸ್ಮರಣ ಶಕ್ತಿಯು ಅಗಾಧವಾಗಿಯೂ, ಇದ್ದವು. ಅವರ ಮೇರುಕೃತಿಯಾದ, **'ವೇದಾಂತ ಪ್ರಕ್ರಿಯಾಪ್ರತ್ಯಭಿಜ್ಞ'** ವು ಕ್ರಿ.ಶ.1964ರಲ್ಲಿ, ಅವರ ಎಂಬತ್ತನಾಲ್ಕನೆಯ ವಯಸ್ಸಿನಲ್ಲಿ ಪ್ರಕಟವಾಯಿತು. ಅಂತ್ಯಕಾಲದವರೆಗೂ ಅವರು ಬರೆಯುತ್ತಲೇ ಇದ್ದರು. ತೊಂಬತ್ತಾರನೆಯ ವಯಸ್ಸಿನಲ್ಲಿ ಅವರು ಬ್ರಹ್ಮೀಭೂತರಾಗುವ ಕಾಲದಲ್ಲಿಯು ಪರಮಾರ್ಥ ಚಿಂತಾಮಣಿಗ್ರಂಥದ ಎರಡನೆಯ ಭಾಗ, ವೇದಾಂತಪ್ರಕ್ರಿಯಾಪ್ರತ್ಯಭಿಜ್ಞೆಯ ದ್ವಿತೀಯ ಭಾಗ ಮುಂತಾದವುಗಳ ರಚನಾಕಾರ್ಯದಲ್ಲಿ ಪ್ರವೃತ್ತರಾಗಿದ್ದರು. ಈ ರೀತಿ ಸಂಗ್ರಹಿಸಿದ್ದ ವಿಷಯಗಳನ್ನು ಇಂದಿಗೂ ಅವರ ಶಿಷ್ಯರುಗಳು ಪತ್ರಿಕಾಪ್ರಕಟನೆಯಲ್ಲಿ ಉಪಯೋಗಿಸಿಕೊಳ್ಳುತ್ತಿದ್ದಾರೆ.

ಹೀಗೆ ಪೂಜ್ಯಪಾದರು, ತಮ್ಮ ಮೇಧಾಶಕ್ತಿಯಿಂದ ಮತ್ತು ಅಮೋಘವಾದ ಶತಾಧಿಕಕೃತಿರತ್ನಗಳಿಂದ ಅದ್ವೈತಕ್ಷೇತ್ರವನ್ನು ಸಂಪನ್ನಗೊಳಿಸಿದರು. ಆದ್ದರಿಂದಲೇ, ಶ್ರೀದೇವರಾಯ ಕುಲಕರ್ಣಿಯವರು ಪೂಜ್ಯಪಾದರನ್ನು, ವೇದಾಂತಭಾಸ್ಕರ ಎಂದು ಮುಕ್ತಕಂಠದಿಂದ ಪ್ರಶಂಸಿರುತ್ತಾರೆ. ಶ್ರೀ ಆತ್ಮಚೈತನ್ಯಸ್ವಾಮಿಗಳು ಅವರನ್ನು **'ಉಪನಿಷದ್ವಿದ್ಯೆಯ ಏಕಮೇವಾಯತನ'** ಎಂದಿರುತ್ತಾರೆ. ಇಂದಿಗೂ ಪೂಜ್ಯಪಾದ ರಿಂದ ರಚಿತವಾಗಿರುವ ನೂರಕ್ಕೂ ಹೆಚ್ಚು ಅದ್ವೈತಕೃತಿಗಳು ಉಳಿದ ಯಾವುದೇ ವೇದಾಂತ ಗ್ರಂಥಗಳಿಗಿಂತ ಜನಪ್ರಿಯವೂ, ಹೆಚ್ಚು ಉಪಯುಕ್ತವೂ ಆಗಿವೆ. ಇಂತಹ ಕ್ರಿಯಾಶೀಲತೆ, ವಾಙ್ಮಯ ತಪಸ್ಸು, ವೇದಾಂತನಿಷ್ಠೆ, ಅಜಾತಶತ್ರುತ್ವ ಮೊದಲಾದ ವಿರಳ ಗುಣದ ಸಂಪನ್ನರಾಗಿ, ಕನ್ನಡನಾಡಿನ ಶ್ರೀಶಂಕರಾಚಾರ್ಯರೆಂದೇ ಪ್ರಸಿದ್ಧಿ ಪಡೆದ ಈ ಆದರ್ಶ ಪರಿವ್ರಾಜಕರನ್ನು ಪಡೆದ ನಮ್ಮ ಕನ್ನಡನಾಡು ನಿಜಕ್ಕೂ ಧನ್ಯವಾದುದು.

* * * * *

# ಅಧ್ಯಾಯ - 10

# ಸಂಶೋಧಕರಾಗಿ ಸ್ವಾಮೀಜಿಯವರು

**ಅನಪೇಕ್ಷಿತಗುರುವಚನಾ ಸರ್ವಾನ್ ಗ್ರಂಥೀನ್ ವಿಭೇದಯತಿ ಸಮ್ಯಕ್ ।**
**ಪ್ರಕಟಯತಿ ಪರರಹಸ್ಯಂ ವಿಮರ್ಶಶಕ್ತಿರ್ನಿಜಾ ಜಯತಿ ॥**

ಹೆಚ್ಚು ಭಾರವಾದ ಮಾತುಗಳಿಲ್ಲದೆ, ಎಲ್ಲ ಕಠಿನಭಾಗಗಳನ್ನು ವಿವರಿಸುತ್ತದೆ. ಕವಿಯ (ಲೇಖಕನ) ಹೃದಯದ ರಹಸ್ಯವನ್ನು ಈ ವಿಮರ್ಶಾಶಕ್ತಿ ಹೊರಗೆಡಹುತ್ತದೆ.

ಲೋಕದಲ್ಲಿ ಅನೇಕರು ಪಂಡಿತರಾಗಿರಬಹುದು. ಅವರ ಮಧ್ಯದಲ್ಲಿ ತನ್ನ ಅನುಭವಪೂರ್ಣವಾದ ವಿಚಾರಗಳಿಂದ ಕೃತಿಗಳ ರಹಸ್ಯವನ್ನು ವಿವರಿಸುವ ಸಮರ್ಥರು ಅಪರೂಪ. ಕೇವಲ ಹಿಂದಿನವರು ಹೇಳಿದುದನ್ನೇ ಪುನರುಚ್ಚರಿಸದೆ, ಅದರಲ್ಲಿರುವ ಗ್ರಾಹ್ಯ ಮತ್ತು ಅಗ್ರಾಹ್ಯಗಳನ್ನು ವಿಂಗಡಿಸಬಲ್ಲವರೇ, ಸಂಶೋಧಕರು. ಇಂತಹವ ರಿಂದಲೇ ಮನುಷ್ಯರ ಜ್ಞಾನಭಂಡಾರ ವರ್ಧಿಸುತ್ತದೆ. ಇಂತಹ ವೈಜ್ಞಾನಿಕ ಚಿಂತನ ಧಾರೆಯನ್ನು ನಮ್ಮ ಸನಾತನ ಸಂಸ್ಕೃತಿಯಲ್ಲಿ ಸಾಕಷ್ಟು ಕಾಣಬಹುದಾಗಿದೆ. ತೈತ್ತಿರೀಯಕೋಪನಿಷತ್ತಿನಲ್ಲಿಯೇ, 'ನಿನಗೆ ಕರ್ಮದಲ್ಲಾಗಲೀ, ನಡತೆಯಲ್ಲಾಗಲೀ, ಸಂದೇಹವುಂಟಾದರೆ, ಸದ್ವೃತ್ತರಾದ ಬ್ರಾಹ್ಮಣರನ್ನು ಕೇಳು' ಎಂಬ ಮಂತ್ರವಿದೆ. ಎಲ್ಲ ಮಹರ್ಷಿಗಳೂ ದಾರ್ಶನಿಕರೂ ಮತ್ತು ಮಂತ್ರದ್ರಷ್ಟಾರರು ತಮ್ಮ ಸ್ವತಂತ್ರ ವಿಚಾರ ಪರತೆಯಿಂದಲೇ ವಿಶ್ವವಂದ್ಯರಾದರು. ಇಂತಹ ವಿಚಾರಧಾರೆಯೇ ಸಂಶೋಧನೆಯು.

ಸಂಶೋಧಕಪ್ರವೃತ್ತಿಯು ಶ್ರೀಗಳವರಲ್ಲಿ ಬಾಲ್ಯದಿಂದಲೇ ಜಾಗ್ರತವಾಗಿತ್ತು. ಮುಖ್ಯೋಪಾಧ್ಯಾಯರಾದ ಸುಬ್ರಹ್ಮಣ್ಯಅಯ್ಯರ್‌ರವರ ಮನೆಯಲ್ಲಿ ಆಗ ವೇದಾಂತ ಚರ್ಚೆಗಳು ನಡೆಯುತ್ತಿದ್ದವು. ಅದರ ಬಹುಭಾಗ ಪಂಡಿತಗ್ರಾಹ್ಯವಾದ್ದರೂ, ಬಾಲಕ ರಾದ ಸುಬ್ಬರಾಯರು, ಅವುಗಳನ್ನು ಆಸ್ಥೆಯಿಂದ ಕೇಳುತ್ತಿದ್ದರು. ಅವರ ವಯಸ್ಸಿನ ಇತರ ಬಾಲಕರು ರಹಸ್ಯವಾಗಿ ಕಥೆಯ ಪುಸ್ತಕಗಳನ್ನು ಓದುತ್ತಿದ್ದರೆ, ರಾಯರು ತಮ್ಮ ಬಿಡುವಿನ ವೇಳೆಯಲ್ಲಿ ವೇದಾಂತಕೃತಿಗಳನ್ನು ಓದಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸು ತ್ತಿದ್ದರು. ಅವುಗಳಲ್ಲಿ ವಿಚಾರಮಾಡಬೇಕಾದ ಅಂಶಗಳಿವೆ ಯೆಂದು ಅವರಿಗನ್ನಿಸುತ್ತಿತ್ತು.

ಒಮ್ಮೆ ಬಸವನಹಳ್ಳಿಗೆ ಅವರು ಹೋಗಿದ್ದಾಗ, ಅಧ್ಯಾಪಕರೊಬ್ಬರ ಮನೆಯಲ್ಲಿ ಅವರಿಗೊಂದು ಪುಸ್ತಕ ಸಿಕ್ಕಿತು. ಆ ಪುಸ್ತಕದ ಒಂದು ಹಾಳೆಯಲ್ಲಿ 'ಉಷ್ಣಶೀತಗಳು ಇಂದ್ರಿಯಗ್ರಾಹ್ಯವಾದರೂ, ವಸ್ತುತತ್ತ್ವವಲ್ಲ. ಎಲ್ಲಿಯವರೆಗೆ ಅವುಗಳ ಪರಿಣಾಮ ವಿರುತ್ತದೆಯೋ ಅಲ್ಲಿಯವರೆಗೆ ಮಾತ್ರ ಅವು ಸತ್ಯ. ಏಕೆಂದರೆ ಅವು ಕೇವಲ ಭಾವ ವಿಕಾರಗಳು' ಎಂಬ ವಾಕ್ಯಗಳು ಅವರ ಕಣ್ಣಿಗೆ ಬಿದ್ದಿತು. ಆದರೆ ಶಾಲೆಯಲ್ಲಿ ಇಂತಹ ವೈಜ್ಞಾನಿಕವಿಚಾರಗಳು ನೂತನವಾದವುಗಳು ಎಂದು ಅಧ್ಯಾಪಕರು ಹೇಳಿದ್ದರು. ಈ ರೀತಿಯ ವಿಷಯ ತಾತ್ವಿಕ ಗ್ರಂಥದಲ್ಲಿ ಹೇಗೆ ಬಂದಿತೆಂದು ಅವರಿಗೆ ಹೊಳೆಯಲಿಲ್ಲ. ಅದು ಯಾರ ಕೃತಿಯೆಂದು ಅವರಿಗೆ ಆಗ ಗೊತ್ತಿರಲಿಲ್ಲ. ಮೂರು ವರ್ಷಗಳ ನಂತರ ಆ ಕೃತಿ ಶಂಕರಭಗವತ್ಪಾದರ ಗೀತಾಭಾಷ್ಯವೆಂದು ಅವರಿಗೆ ತಿಳಿಯಿತು. ಆ ಕೃತಿ ಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕೆಂಬ ಅಭಿಲಾಷೆಯಿಂದ ಅದನ್ನು ಹಳೆಯ ಪುಸ್ತಕದ ಅಂಗಡಿಯೊಂದರಲ್ಲಿ ಕೊಂಡುಕೊಂಡು, ದಿನವೂ ಮೂರು ಶ್ಲೋ ಕಗಳನ್ನು ಭಾಷ್ಯಸಮೇತವಾಗಿ ಓದಲು ಆರಂಭಿಸಿದರು. ಈ ಸಮಯದಲ್ಲಿ ಅವರು ಶ್ರೀಕೃಷ್ಣಸ್ವಾಮಿ ಅಯ್ಯರ್‌ರವರ ಮನೆಯಲ್ಲಿ ವಾಸಮಾಡುತ್ತಿದ್ದರು. ದಿನವೂ ಗೀತೆಯನ್ನು ಓದುವ ಈ ಬಾಲಕನ ಕುತೂಹಲವನ್ನು ಕಂಡು ಸಂತುಷ್ಟರಾದ ಶ್ರೀ ಅಯ್ಯರ್‌ರವರು ಗೀತಾಭಾಷ್ಯವನ್ನು ಅವರಿಗೆ ಪಾಠಹೇಳಲು ಪ್ರಾರಂಭಿಸಿದರು. ಅವರ ಪಾಠಕ್ರಮ ಮತ್ತು ಆಲೋಚನಾವಿಧಾನದಿಂದ ಬಾಲಕ ಸುಬ್ಬರಾಯರು ಪ್ರಭಾವಿತರಾದರು. ಉಳಿದ ಗ್ರಂಥಗಳನ್ನೂ ವಿಮರ್ಶಕ ದೃಷ್ಟಿಯಿಂದ ನೋಡುವ, ಅಭ್ಯಾಸವಾಯಿತು.

ಶ್ರೀಗಳವರ ವಿಮರ್ಶಕಶಕ್ತಿಗೆ ಒಂದು ಉದಾಹರಣೆಯನ್ನು ನೋಡಬಹುದು. ಒಂದು ಸಲ ಅವರು ಸಾಹಿತ್ಯದರ್ಪಣವೆಂಬ ಅಲಂಕಾರಶಾಸ್ತ್ರದ ಗ್ರಂಥವನ್ನು ಓದುತ್ತಿದ್ದರು. ಅದರಲ್ಲಿ ರಸದ ನಿತ್ಯತೆಯನ್ನು ಪ್ರತಿಪಾದಿಸುವ ಸಂದರ್ಭದಲ್ಲಿ ಅದರ ಅನಿತ್ಯತೆಯನ್ನು ಹೇಳುವವರ ಮೇಲೆ ವೇದಾಂತಿಗಳು ದಂಡವನ್ನು ಪ್ರಯೋಗಿಸಬೇಕು ಎಂಬ ಉಲ್ಲೇಖ ಅವರ ಕಣ್ಸೆಳೆಯಿತು. ಅಲಂಕಾರಶಾಸ್ತ್ರಗ್ರಂಥದಲ್ಲಿ ಎಲ್ಲೊ ಒಂದು ಕಡೆ ಪ್ರಯುಕ್ತವಾಗಿದ್ದ ವೇದಾಂತಶಬ್ದವು ಅವರನ್ನು ಆಕರ್ಷಿಸಿತೆಂದರೆ ಅವರ ವೇದಾಂತ ಪ್ರೇಮದ ಆಳವನ್ನು ಊಹಿಸಬಹುದು. ಮುಂದೆ ತೈತ್ತಿರೀಯಕದಲ್ಲಿ ಬರುವ **'ರಸೋ ವೈ ಸಃ'** ಎಂಬ ವಾಕ್ಯದಿಂದ ಈ ವಿಷಯವನ್ನು ಅವರು ಕೂಲಂಕಷವಾಗಿ ಚರ್ಚಿಸಿ ತಿಳಿದುಕೊಂಡರು.

ಅಧ್ಯಾಪಕವೃತ್ತಿಯಲ್ಲಿರುವಾಗ ದೈವಯೋಗದಿಂದ ಅವರಿಗೆ ಬೆಂಗಳೂರು ನಗರಕ್ಕೆ ವರ್ಗವಾಯಿತು. ಕೃಷ್ಣಸ್ವಾಮಿಅಯ್ಯರ್‌ರವರೂ ಆಗ ಬೆಂಗಳೂರಿನಲ್ಲಿಯೇ ಇದ್ದರು. ಪ್ರತಿದಿನವೂ ಸಾಯಂಕಾಲ ಇಬ್ಬರೂ ವಾಯುವಿಹಾರಕ್ಕೆ ಒಟ್ಟಿಗೆ ಹೊರಡುತ್ತಿದ್ದರು. ಆ ಸಂದರ್ಭದಲ್ಲಿ ಅವರಿಬ್ಬರ ಮಧ್ಯೆ ವೇದಾಂತವಿಚಾರಪರವಾದ ವಾರ್ತಾಲಾಪಗಳೇ ನಡೆಯುತ್ತಿದ್ದವು. ಲೌಕಿಕವ್ಯವಹಾರದ ವಿಚಾರಗಳು ಸುಳಿಯುತ್ತಲೂ ಇರಲಿಲ್ಲ.

ಒಂದು ದಿನ ಅಯ್ಯರ್‌ರವರು ಅವಿದ್ಯಾವಿಷಯವಾಗಿ ರಾಯರೊಂದಿಗೆ ಚರ್ಚಿಸುತ್ತಿದ್ದರು. ಈ ಅವಿದ್ಯೆಯು ಅಧ್ಯಾಸಕ್ಕೆ ಉಪಾದಾನಕಾರಣವೂ, ಸುಷುಪ್ತಿಯಲ್ಲಿಯೂ ಬೀಜರೂಪದಿಂದ ಅವಸ್ಥಿತವಾಗಿರುವುದೂ, ಜ್ಞಾನಿಗಳಲ್ಲಿಯೂ ದೇಹಾವಸಾನಪರ್ಯಂತವಾಗಿ ಲೇಶರೂಪವಾಗಿರುವುದೂ ಆಗಿದೆಯೆಂದು ಪಂಡಿತರಲ್ಲಿ ಇರುವ ಅಭಿಪ್ರಾಯವು ಸಮೀಚೀನವಲ್ಲವೆಂದು ಅಯ್ಯರ್‌ರವರ ಅಭಿಪ್ರಾಯವಾಗಿತ್ತು. ಭಗವತ್ಪಾದರ ಪ್ರಕಾರ ಜ್ಞಾನಸಮಕಾಲದಲ್ಲಿಯೇ ಅವಿದ್ಯೆತಿರೋಹಿತವಾಗುತ್ತದೆ. ಜ್ಞಾನಪ್ರಾಪ್ತಿಯ ನಂತರ ಅವಿದ್ಯೆಯ ಲೇಶವೂ ಉಳಿಯುವುದು ಸಾಧ್ಯವಿಲ್ಲ. ಈ ದೋಷಪೂರ್ಣ ಕಲ್ಪನೆಯ ನಿವಾರಣೆಗಾಗಿ, ಸಂಶೋಧನೆ ನಡೆಸಲು ರಾಯರನ್ನು ಪ್ರೇರೇಪಿಸಿದರು. ರಾಯರು ಅಯ್ಯರ್‌ರವರಿಗೆ ಬೇರೆಯ ವಿಷಯಗಳಲ್ಲಿ ಋಣಿಯಾಗಿದ್ದರೂ ಈ ಅಭಿಪ್ರಾಯವನ್ನು ಸ್ವತಃ ಪರೀಕ್ಷಿಸದೆ ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ.

ಈ ವಿಷಯವಾಗಿ ಚರ್ಚಿಸಲು ಅವರಿಬ್ಬರೂ ಹಾನಗಲ್ಲು ವಿರೂಪಾಕ್ಷಶಾಸ್ತ್ರಿಗಳ ಮನೆಗೆ ಹೋದರು. ಅಲ್ಲಿ ನಡೆದ ಪ್ರಶ್ನೋತ್ತರಗಳಿಂದ ಅಯ್ಯರ್‌ರವರ ಅಭಿಪ್ರಾಯ ಸರಿಯೆಂದೂ ಪಂಡಿತರು ಮೂಲಾವಿದ್ಯೆಯೆಂಬ ಹೊಸ ಅಂಶವನ್ನು ಶಾಂಕರ ಪ್ರಕ್ರಿಯೆಗೆ ಅನವಶ್ಯಕವಾಗಿ ಸೇರಿಸಿರುತ್ತಾರೆಂದೂ ರಾಯರಿಗೆ ಮನದಟ್ಟಾಯಿತು. ಇದರಿಂದ ಅವರ ಅನ್ವೇಷ ಬುದ್ಧಿ ಜಾಗೃತವಾಯಿತು. ತಮ್ಮ ಮನಸ್ಸಿಗೆ ದೃಢವಾಗುವವರೆಗೆ ಮೂಲಾವಿದ್ಯೆಯು ಮೂಲವನ್ನು ಶೋಧಿಸಬೇಕೆಂದು ಅವರು ನಿರ್ಧರಿಸಿದರು. ಕೂಡಲೇ ಕಾರ್ಯತತ್ಪರರಾಗಿ ವೇದಾಂತಗ್ರಂಥಗಳನ್ನೆಲ್ಲ ಆಳವಾಗಿ ಅಭ್ಯಾಸಮಾಡತೊಡಗಿದರು. ಮೂಲಾವಿದ್ಯಾಸಮರ್ಥಕವಾದ ಮತ್ತು ವಿರೋಧವಾದ ವಾಕ್ಯಗಳನ್ನೆಲ್ಲಾ ಕಲೆಹಾಕಿದರು. ಶಂಕರಭಗವತ್ಪಾದರ ಶಿಷ್ಯರೆಂದು ಪ್ರಖ್ಯಾತರಾದ ಪದ್ಮಪಾದರಿಂದ ವಿರಚಿತವಾದ ಪಂಚಪಾದಿಕಾವ್ಯಾಖ್ಯಾನದಲ್ಲಿಯೇ ಈ ರೀತಿಯಾದ ಭಾಷ್ಯವಿರುದ್ಧ ಪ್ರಕ್ರಿಯೆ ಆರಂಭವಾಯಿತೆಂದು ಅವರಿಗೆ ಸ್ಪಷ್ಟವಾಗಿ ಮಾಹಿತಿ ದೊರಕಿತು. ಹಗಲೂ ರಾತ್ರಿ ತಮ್ಮ ಶೋಧಕಾರ್ಯವನ್ನು ಮುಂದುವರಿಸಿ, **'ಮೂಲಾ**

**ವಿದ್ಯಾನಿರಾಸ'** ಎಂಬ ತಮ್ಮ ಸಂಶೋಧನಕೃತಿಯನ್ನು ಬರೆದು ಮುಗಿಸಿದರು. ಕ್ರಿ.ಶ. 1927ರಲ್ಲಿಯೇ ಈ ಕೃತಿಗೆ ಮೈಸೂರು ಸರ್ಕಾರದ ದೇವರಾಜಬಹದ್ದೂರ್ ಧರ್ಮನಿಧಿಯಾದ 300ರೂಗಳ ಬಹುಮಾನವು ಪ್ರಾಪ್ತವಾಯಿತು. ಆದರೆ ಯೋಗಾಯೋಗದಿಂದ ಪ್ರಾಪ್ತವಾದ ಈ ಬಹುಮಾನದ ಧನವು ಗ್ರಂಥಪ್ರಕಟಣೆಗೆ ಅಪರ್ಯಾಪ್ತವಾಗಿತ್ತು. ಅಧಿಕ ಸಹಾಯಾರ್ಥವಾಗಿ ರಾಯರು ಮಹಾರಾಜರಲ್ಲಿ ಬಿನ್ನವಿಸಿಕೊಂಡರು. ಮಹಾರಾಜರು ಈ ವಿಷಯವಾಗಿ ಶ್ರೀ ವಿರೂಪಾಕ್ಷಶಾಸ್ತ್ರಿಗಳ ಅಭಿಪ್ರಾಯವನ್ನು ಕೇಳಿದರು. ಶಾಸ್ತ್ರಿಗಳು ಆ ಗ್ರಂಥವನ್ನು ಪರಿಶೀಲಿಸಿ, ಪ್ರಯುಕ್ತವಾದ ಭಾಷೆಯು ಶುದ್ಧವೂ, ಗಂಭೀರವೂ, ಆಗಿರುವುದು ನಿಜ. ಆದರೆ ಇದರಲ್ಲಿ ಆನಿಷ್ಕೃತವಾಗಿರುವ ನೂತನ ವಿಚಾರವು ಪ್ರಾಯಶಃ ಸಂಪ್ರದಾಯಕ್ಕೆ ವಿರುದ್ಧವಾದುದು ಎಂದು ಅಭಿಪ್ರಾಯವನ್ನು ತಿಳಿಸಿದರು. ಈ ಕಾರಣದಿಂದ ಮಹಾರಾಜರ ಸನ್ನಿಧಿಯಿಂದ ಪ್ರಾಪ್ತವಾಗಬೇಕಾಗಿದ್ದ ಧನಸಹಾಯವೂ ಸಿಕ್ಕಲಿಲ್ಲ.

ರತ್ನದೀಪದ ಪ್ರಭೆಯು ಗಾಳಿಯಿಂದ ಅಲುಗಾಡುವುದಿಲ್ಲವಷ್ಟೇ ! ಸಹಾಯಧನದ ನಿರಾಕರಣೆಯಿಂದ ರಾಯರು ಉತ್ಸಾಹ ಕಳೆದುಕೊಳ್ಳಲಿಲ್ಲ. ತಾವೇ ಮುದ್ರಣಾಲಯವನ್ನು ಸ್ಥಾಪಿಸಿ, ತಮ್ಮ ಪುತ್ರರನ್ನೇ ಮುದ್ರಣಕಾರ್ಯದಲ್ಲಿ ನಿಯೋಜಿಸಿದರು. ಈ ಕೃತಿಗೆ ಅಯ್ಯರ್ ಮಹಾಶಯರು ದೀರ್ಘವಾದ ಆಂಗ್ಲ ಭಾಷೆಯ ಭೂಮಿಕೆಯನ್ನು ವಿರಚಿಸಿದರು. ಹೀಗೆ ಸರ್ವಗುಣೋಪೇತವಾದ ಈ ಸಂಶೋಧನ ಕೃತಿಯು ಕ್ರಿ.ಶ. 1929ರಲ್ಲಿ ಪ್ರಕಟವಾಯಿತು. ರಾಯರು ತಮ್ಮ ಕೃತಿಯನ್ನು ಹಲವಾರು ಪಂಡಿತರಿಗೂ, ಪತ್ರಿಕೆಗಳಿಗೂ ಕಳಿಸಿಕೊಟ್ಟರು. ಅವರಲ್ಲಿ ಕೆಲವರು ಪಂಡಿತರು ರಾಯರ ಅಭಿಪ್ರಾಯಗಳನ್ನು ಅನುಮೋದಿಸಿದರೆ, ಹಲವರು ಸಂಪ್ರದಾಯವಾದಿಗಳೆನಿಸಿಕೊಂಡವರು ವಿರೋಧಿಸಿದರು.

ಈ ಕೃತಿಯ ಭಾವವನ್ನು ಸಂಸ್ಕೃತಭಾಷೆಯನ್ನು ತಿಳಿಯದವರಿಗೂ ಪರಿಚಯ ಮಾಡಿಸಿಕೊಡುವ ಸಲುವಾಗಿ ರಾಯರು **'ಶಂಕರಸೂರ್ಯ'** ಎಂಬ ಕರಪತ್ರವನ್ನು ತಯಾರಿಸಿದರು. **'ಶಂಕರಸಿದ್ಧಾಂತ'** ಎಂಬ ಕನ್ನಡದ ಕೃತಿಯನ್ನು ರಚಿಸಿದರು. ಪೂಜ್ಯರಾದ ಕಾಂಚೀ ಕಾಮಕೋಟಿ ಪೀಠಾಧೀಶ್ವರರು ಶ್ರೀಗಳವರ ಅಭಿಪ್ರಾಯಗಳ ಪ್ರಧಾನ ಅನುಮೋದಕರಾಗಿದ್ದರು. ರಾಯರು ಪ್ರಕಟಿಸುತ್ತಿದ್ದ **'ಅಧ್ಯಾತ್ಮಪ್ರಕಾಶ'** ಮಾಸಪತ್ರಿಕೆಯಲ್ಲಿಯೂ ಈ ವಿಚಾರವಾಗಿ ಹಲವು ಲೇಖನಗಳು ಮತ್ತು ಅಭಿಪ್ರಾಯಗಳು ಪ್ರಕಟವಾದವು.

ಹೀಗೆ ಬಹುಕಾಲ ಜಡವಾಗಿದ್ದ ಅದ್ವೈತವಾಙ್ಮಯದಲ್ಲಿ ಹೊಸ ಮಾರುತವನ್ನು ಸೃಷ್ಟಿಸಿದ ಕೀರ್ತಿ ಶ್ರೀಗಳವರದು.

ಶ್ರೀಗಳವರಿಂದ ಪರಾಮರ್ಶಿಸಲ್ಪಟ್ಟಿರುವ ಉಳಿದ ಪ್ರಮುಖವಾದ ಅದ್ವೈತ ಪ್ರಕ್ರಿಯೆಗಳು :

ಹೀಗೆ ತಿಳಿಸಿದ ಮೂಲಾವಿದ್ಯೆಯಲ್ಲದೆ, ಉಳಿದ ಅನೇಕ ಪ್ರಕ್ರಿಯೆಗಳು ಶ್ರೀಗಳವರಿಂದ ಪರಾಮರ್ಶಿಸಲ್ಪಟ್ಟು ನಿಖರವಾದ ಅರ್ಥವನ್ನು ತಿಳಿಸುವುದರಲ್ಲಿ ಯಶಸ್ವಿಯಾದವು. ಪ್ರತಿ ಸಂದರ್ಭದಲ್ಲಿಯೂ ಅವರು ವ್ಯಾಖ್ಯಾನಕಾರರ ಅಭಿಪ್ರಾಯ ಗಳನ್ನು ಶಂಕರಭಗವತ್ಪಾದರ ಭಾಷ್ಯವಾಕ್ಯಗಳೊಂದಿಗೆ ನೇರವಾಗಿ ತುಲನೆಮಾಡಿ ಶಾಂಕರಮತಾನುಸಾರವಾದ ಅದ್ವೈತಸ್ವರೂಪವನ್ನು ಸ್ಪಷ್ಟವಾಗಿ ಪ್ರತಿಪಾದಿಸಿದರು. ಅವೆಲ್ಲವನ್ನು ವಿಸ್ತರಿಸಲು ಇಲ್ಲಿ ಸಾಧ್ಯವಾಗದುದರಿಂದ ಪ್ರಮುಖವಾದ ಕೆಲವು ಪ್ರಕ್ರಿಯೆಗಳನ್ನು ಮಾತ್ರ ಕೊಡಲಾಗಿದೆ.

1. ಗೌಡಪಾದಾಚಾರ್ಯರ ಮಾಂಡೂಕ್ಯಕಾರಿಕಾ ವ್ಯಾಖ್ಯಾನವೇ ಈಗ ಉಪಲಬ್ಧ ವಾಗಿರುವ ಅದ್ವೈತಕೃತಿಗಳಲ್ಲಿ ಪುರಾತನವಾದುದು. ಅದಕ್ಕಿಂತ ಹಿಂದಿನ ಕೃತಿಗಳ ಮತ್ತು ಅದ್ವೈತದ ಸ್ವರೂಪವನ್ನು ತಿಳಿಯಲು ಆಚಾರ್ಯರ ಭಾಷ್ಯವೇ ಆಧಾರ. ಅವರು ಅಲ್ಲಲ್ಲಿ ಹಿಂದಿನ ಅದ್ವೈತಿಗಳ ಮತ್ತು ಅವರ ಪ್ರಕ್ರಿಯೆಗಳ ಸ್ವರೂಪವನ್ನು ಪರಾಮರ್ಶಿಸಿರುತ್ತಾರೆ. ಉಳಿದ ಕೆಲವು ಗ್ರಂಥ ಗಳಲ್ಲಿಯೂ ಅಲ್ಲಲ್ಲಿ ಈ ವಾದಗಳ ಕಿರುಪರಿಚಯವಿರಬಹುದು. ಶ್ರೀಗಳವರು ಈ ಹರಡಿಹೋಗಿರುವ ಎಲ್ಲ ಮಾಹಿತಿಯನ್ನು ಸಂಗ್ರಹಿಸಿ ಮತ್ತು ವಿಶ್ಲೇಷಿಸಿ, ಶಾಂಕರಪೂರ್ವಕಾಲದ ಅದ್ವೈತದ ಇತಿಹಾಸವನ್ನು ಇಂದು ನಮ್ಮ ಎದುರಿಗೆ ಗ್ರಂಥರೂಪದಲ್ಲಿಟ್ಟಿರುತ್ತಾರೆ. ಇದೇ ವೇದಾಂತವಿಚಾರದ ಇತಿಹಾಸವೆಂಬ ಕೃತಿ.

2. ದ್ವೈತವು ಲೋಕವ್ಯವಹಾರಕ್ಕೆ ಅವಶ್ಯವಾದರೂ, ಪಾರಮಾರ್ಥಿಕವಾಗಿ ಎಲ್ಲ ಅಂಶಗಳೂ ಅದ್ವಯಬ್ರಹ್ಮದಲ್ಲಿ ಲೀನವಾಗುತ್ತದೆ. ಅದ್ವೈತದಲ್ಲಿಯೂ ಕೆಲವು ಭಿನ್ನಾಭಿಪ್ರಾಯಗಳಿದ್ದರೂ, ಅವುಗಳ ಆಶಯವು ಒಂದೇ ಆಗಿದ್ದು, ದ್ವೈತ ವಿಜೃಂಭಣೆಯನ್ನು ಅದು ಸಹಿಸುವುದಿಲ್ಲ. ಇಂದಿನ ದ್ವೈತಾದಿಮತಗಳು ಶಾಂಕರೋತ್ತರ ಕಾಲದಲ್ಲಿ ಆವಿರ್ಭವಿಸಿದವು. ಭಗವತ್ಪಾದರ ಕಾಲದಲ್ಲಿ ಪ್ರಧಾನರಾದ ದ್ವೈತಿಗಳೆಂದರೆ ಸಾಂಖ್ಯರೇ ಆಗಿದ್ದರು. ಈ ವಿಷಯದಲ್ಲಿ ಶ್ರೀಗಳವರು ಸಂಶೋಧನೆ ನಡೆಸಿ ಪೂರ್ವಕಾಲೀನ ದರ್ಶನಗಳು ಅದ್ವೈತ ವನ್ನೇ ಪ್ರಧಾನವಾಗಿ ಸ್ವೀಕರಿಸಿದ್ದವೆಂದೂ, ಅಂದಿನ ಭಾಗವತಮತದವರು

ಅದ್ವೈತಿಗಳೇ ಆಗಿದ್ದರೆಂದು ಸಮರ್ಥಿಸುತ್ತ, **'ಭಾಗವತಸಂಪ್ರದಾಯ'** ಎಂಬ ಕೃತಿಯನ್ನು ರಚಿಸಿರುತ್ತಾರೆ.

3. ಗೌಡಪಾದರು ಶಂಕರಭಗವತ್ಪಾದರ ಪರಮಗುರುಗಳು. ಅನ್ಯವೇದಾಂತಿಗಳು ಸಾಕಷ್ಟು ಜನರಿದ್ದರೂ, ಶಾಂಕರಾದ್ವೈತವು ಗೌಡಪಾದರ ಸಂಪ್ರದಾಯಕ್ಕೆ ಅನುಸಾರಿಯಾದುದು. ಹಾಗೆಯೇ ಶಂಕರರ ಶಿಷ್ಯರಾದ ಸುರೇಶ್ವರಾ ಚಾರ್ಯರು ಇವರಿಬ್ಬರ ಸಂಪ್ರದಾಯವನ್ನು ಅನುಸರಿಸಿದರು. ಗೌಡಪಾದ, ಶಂಕರ, ಸುರೇಶ್ವರಿಂದ ಪರಂಪರಾಗತವಾಗಿ ಬಂದಿರುವ ಅದ್ವೈತಪ್ರಕ್ರಿಯೆಯೇ ಸಂಪ್ರದಾಯ ಬದ್ಧವೆಂದು ಶ್ರೀಗಳವರು ಪ್ರಮಾಣೀಕರಿಸಿ ತಮ್ಮ ಕೃತಿಗಳಲ್ಲಿ ಅವರ ಪ್ರಕ್ರಿಯೆಗಳನ್ನು ಮಾತ್ರ ಪ್ರಮಾಣವೆಂದು ಸ್ವೀಕರಿಸಿರುತ್ತಾರೆ.

4. ಶಂಕರಭಗವತ್ಪಾದರ ಜೀವನ ಚರಿತ್ರೆಯನ್ನು ಕುರಿತು ಸಾಕಷ್ಟು ಗ್ರಂಥಗಳು ರಚಿತವಾಗಿವೆ. ಆದರೆ ಅವೆಲ್ಲವು ಶಂಕರೋತ್ತರಕಾಲೀನವಾದವುಗಳಾದುದರಿಂದ ವಿಷಯನಿರೂಪಣೆಯಲ್ಲಿ ಭಿನ್ನಾಭಿಪ್ರಾಯಗಳು ಕಂಡುಬರುತ್ತವೆ. ಶ್ರೀಗಳವರು ಈ ಎಲ್ಲ ಕೃತಿಗಳನ್ನು ಪರಾಮರ್ಶಿಸಿ, ಪ್ರಾಮಾಣಿಕವಾದ ವಿವರಗಳನ್ನು ಪ್ರತ್ಯೇಕಿಸಿ, **''ಶ್ರೀಶಂಕರಭಗವತ್ಪಾದವೃತ್ತಾಂತ ಸಾರಸರ್ವಸ್ವ''** ಎಂಬ ಕೃತಿಯನ್ನು ರಚಿಸಿರುತ್ತಾರೆ.

5. ಎಲ್ಲ ಪ್ರಾಣಿಗಳಿಗೂ ಸಮಾನವಾದ ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿಗಳನ್ನೇ ಅವಸ್ಥಾತ್ರಯವೆಂದು ಕರೆಯುತ್ತಾರೆ. ಆದರೆ ಜ್ಞಾನಪ್ರಾಪ್ತಿ, ಗುರುಶಿಷ್ಯಸಂಬಂಧ, ಕರ್ಮಸಂಗ್ರಹ ಮತ್ತು ನಾಶಗಳೆಲ್ಲ ಜಾಗ್ರದವಸ್ಥಾಬದ್ಧವಾದುದರಿಂದ ಕೆಲವರು ದಾರ್ಶಕನಿಕರು ಜಾಗ್ರದವಸ್ಥೆಯೊಂದೇ ವಿಚಾರಯೋಗ್ಯವೆಂದು ಭಾವಿಸುತ್ತಾರೆ. ಆದರೆ ಶ್ರೀಗಳವರು ಅವಸ್ಥಾತ್ರಯ ವಿಮರ್ಶೆಯೇ ಪೂರ್ಣವಾದ ವಿಧಾನ ವೆಂದು ತಮ್ಮ ಪರಮಾರ್ಥಚಿಂತಾಮಣಿಯಲ್ಲಿ ತೋರಿಸಿಕೊಟ್ಟಿರುತ್ತಾರೆ.

6. ವೇದಾಂತವು ಬ್ರಹ್ಮಜ್ಞಾನ ನಿಷ್ಠವಾದರೂ ಉಪನಿಷತ್ತುಗಳಲ್ಲಿ ಅದನ್ನು ತಿಳಿಯ ಪಡಿಸಲು ಹಲವಾರು ಪ್ರಕ್ರಿಯೆಗಳನ್ನು ಬಳಸಲಾಗಿದೆ. ನಿರ್ಗುಣಬ್ರಹ್ಮದಲ್ಲಿ ಕೆಲವು ಗುಣಗಳನ್ನು ಆರೋಪಿಸಿ ನಂತರ ಅವುಗಳನ್ನು ಅಲ್ಲಗಳೆಯಲಾಗುತ್ತದೆ. ಇದಕ್ಕೆ **ಅಧ್ಯಾರೋಪಾಪವಾದ**ವೆಂದು ಹೆಸರು. ಈ ಪ್ರಕ್ರಿಯೆಯೇ ಪ್ರಮುಖ ವೆಂದೂ ಉಳಿದವು ಇದರ ಭೇದಗಳೆಂದೂ ಶ್ರೀಗಳವರು ಪ್ರಮಾಣೀಕರಿಸಿರುತ್ತಾರೆ.

7. ಮಾಂಡೂಕ್ಯಕಾರಿಕೆಯಲ್ಲಿ ನಾಲ್ಕು ಪ್ರಕರಣಗಳಿವೆ. ಕೊನೆಯದಾದ ಅಲಾತ ಶಾಂತಿ ಪ್ರಕರಣದಲ್ಲಿ ಬೌದ್ಧದರ್ಶನಕ್ಕೆ ಸಮಾನವಾದ ಅನೇಕ ಪಾರಿಭಾಷಿಕ ಶಬ್ದಗಳು ಕಂಡುಬರುತ್ತವೆ. ಆದ್ದರಿಂದ ಈ ಕೃತಿಯನ್ನು ಬೌದ್ಧದರ್ಶನ ಪರ ವೆಂದೂ, ಶಂಕರರನ್ನು ಪ್ರಚ್ಛನ್ನಬೌದ್ಧರೆಂದು ಕರೆಯುವವರು ಇದ್ದಾರೆ. ಶ್ರೀಗಳ ವರು ಈ ಎಲ್ಲ ಪಾರಿಭಾಷಿಕಪದಗಳು ಪರಮಾದ್ವೈತಪರವೆಂದು ಪ್ರತಿಪಾದಿಸಿರುತ್ತಾರೆ.

8. ಶಾಂಕರಭಾಷ್ಯಕ್ಕೆ ಬೇರೆಯ ಪಂಡಿತರು ಬರೆದಿರುವ ವ್ಯಾಖ್ಯಾನಗಳಲ್ಲಿ ಅವಿದ್ಯೆ ಮತ್ತು ಮಾಯೆಗಳನ್ನು ಸಮಾನಾರ್ಥಕವಾಗಿ ಬಳಸಿದೆ. ಶ್ರೀಗಳವರು ಸೂಕ್ಷ್ಮಾವಲೋಕನದಿಂದ ಮಾಯೆಯು ಅವಿದ್ಯಾಕಲ್ಪಿತವೆಂದೂ, ಮಾಯಾ ಮತ್ತು ಅವಿದ್ಯಾಗಳ ನಡುವೆ ಕಾರ್ಯಕಾರಣ ಸಂಬಂಧವಿದೆಯೆಂದು ತೋರಿಸಿರುತ್ತಾರೆ.

9. ಯೋಗದರ್ಶನದಲ್ಲಿ ಅಷ್ಟಾಂಗಗಳಿವೆ. ಕೆಲವರು ವೇದಾಂತಿಗಳು ಸಮ್ಯಕ್ ಜ್ಞಾನದ ನಂತರ ಯೋಗ ಸಾಧನಗಳು ಅವಶ್ಯವೆಂದು ಭಾವಿಸುತ್ತಾರೆ. ಆದರೆ ಶ್ರೀಗಳು ಅಷ್ಟಾಂಗಯೋಗ ಮತ್ತು ಅಧ್ಯಾತ್ಮಯೋಗಗಳ ಅಂತರವನ್ನು ವಿಶದ ಪಡಿಸಿ, ಬ್ರಹ್ಮಜ್ಞಾನ ಪ್ರಾಪ್ತಿಯ ನಂತರ ಮಾಡಬೇಕಾದುದು ಏನೂ ಇರುವುದಿಲ್ಲವೆಂದು ಹೇಳಿದ್ದಾರೆ.

10. ಆಚಾರ್ಯರ ಹೆಸರಿನಲ್ಲಿ ಅನೇಕ ಪ್ರಕರಣಕೃತಿಗಳು ಪ್ರಸಿದ್ಧವಾಗಿವೆ. ಶ್ರೀಗಳ ವರು ಅವುಗಳ ಭಾಷೆ ಮತ್ತು ವಿಷಯಗಳನ್ನು ಪರಿಶೀಲಿಸಿ, ಯಾವುದು ಆಚಾರ್ಯ ಕೃತ ಮತ್ತು ಯಾವದು ಆಗಿರಲಾರದು ಎಂದು ವಿಶ್ಲೇಷಿಸಿದ್ದಾರೆ.

11. ಶಾಂಕರ ಪ್ರಸ್ಥಾನದ ನಂತರ ಇಂದಿನ ವರೆಗೆ ಇರುವ ಎಲ್ಲಾ ವೇದಾಂತ ಕೃತಿಗಳು ಶ್ರೀಗಳವರಿಂದ ಪರಾಮರ್ಶಿಸಲ್ಪಟ್ಟಿವೆ. ಇವುಗಳನ್ನು ಕುರಿತು **'ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ'** ಎಂಬ ಮೇರುಕೃತಿ ಅವರಿಂದ ರಚಿಸಲ್ಪಟ್ಟಿದೆ.

ಹೀಗೆ ಬಹುಪ್ರಕಾರವಾಗಿ ಶ್ರೀಗಳವರು ಅದ್ವೈತವಾಙ್ಮಯವನ್ನು ಶ್ರೀಮಂತ ಗೊಳಿಸಿದುದಲ್ಲದೆ, ಶುದ್ಧ ಶಾಂಕರಪ್ರಕ್ರಿಯೆಯ ಸ್ವರೂಪವನ್ನು ಲೋಕಕ್ಕೆ ತೋರಿಸಿ ಕೊಟ್ಟರು. ಅವರ ಎಲ್ಲ ಸಂಶೋಧನೆಗಳೂ ಪ್ರಶಸ್ತಿಯೋಗ್ಯವೂ, ಪ್ರಶಂಸಾಯೋಗ್ಯವೂ ಆಗಿವೆಯೆಂಬುದು ಬಹಳ ವಿದ್ವಾಂಸರ ಮಾತಾಗಿದೆ.

* * * * *

# ಅಧ್ಯಾಯ - 11

# ಸಮಾಜಸುಧಾರಕರಾಗಿ ಶ್ರೀಗಳವರು

**ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್ ।**
**ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್ ॥**

ಪ್ರಾಚೀನಭಾರತದಲ್ಲಿ ವೃತ್ತಿಗೆ ಅನುಸಾರವಾಗಿ ವರ್ಣಾಶ್ರಮಗಳ ವ್ಯವಸ್ಥೆಯಿತ್ತು. ಈ ರೀತಿಯ ವ್ಯವಸ್ಥೆಯಿಂದ ಸಾಮಾಜಿಕ ಸ್ವಾಸ್ಥ್ಯ ವೃದ್ಧಿಯಾಗುತ್ತದೆಂಬ ನಂಬಿಕೆಯು ಅವರದಾಗಿತ್ತು. ಯಾರಾದರೂ ಬೇರೆಯ ವರ್ಣದವರು ಜ್ಞಾನಾಕಾಂಕ್ಷಿಗಳಾಗಿದ್ದರೆ, ಅವರಿಗೆ ಸ್ವಕುಲೋಚಿತಧರ್ಮವನ್ನು ಮೀರಿ ಜ್ಞಾನಿಗಳಾಗಲು ವಿಪುಲವಾದ ಅವಕಾಶಗಳಿದ್ದವು. ಕಾಲಕ್ರಮದಲ್ಲಿ ಎಂತಹ ಉತ್ತಮ ವ್ಯವಸ್ಥೆಯಾದರೂ ಕಲುಷಿತಗೊಳ್ಳುವುದು ಸಹಜ. ಸಮಾಜಕಂಟಕರು ಧರ್ಮಗ್ಲಾನಿಗೆ ಕಾರಣರಾದಾಗ ಮಹಾಪುರುಷರು ಅವತಾರವೆತ್ತಿ ಧರ್ಮವನ್ನು ಪುನಃ ಸ್ಥಾಪಿಸಿ, ಸಮಾಜದ ಒಳಿತಿಗೆ ಕಾರಣರಾಗುತ್ತಾರೆ. ಇಂತಹ ಸಮಾಜ ಸುಧಾರಕರಲ್ಲಿ ಶ್ರೀಗಳೂ ಒಬ್ಬರು.

ಬಾಲ್ಯದಿಂದಲೂ ರಾಯರು ಮುಕ್ತವಾದ ಆದರೆ ಧರ್ಮಶ್ರದ್ಧೆಯುಳ್ಳ ವಾತಾವರಣದಲ್ಲಿ ಬೆಳೆದರು. ಅವರ ಮನೆಯಲ್ಲಿ ಎಂದೂ ಧರ್ಮಾಂಧತೆಯಿರಲಿಲ್ಲ. ಹಾಗೆಯೇ ಮುಂದೆ ರಾಯರ ಮನೆಯೂ ಜ್ಞಾನದೇಗುಲದ ಮುಕ್ತಮಂಟಪವಾಯಿತು. ವಿದ್ಯಾತುರರಾದ ಜನರು ಉಚ್ಚ ನೀಚ ಭೇದಭಾವವಿಲ್ಲದೆ ಅವರಲ್ಲಿಗೆ ಬರುತ್ತಿದ್ದರು. ಕೆಲವು ಉದಾಹರಣೆಗಳನ್ನು ಇಲ್ಲಿ ನೋಡಬಹುದು :

1. ರಂಗಪ್ಪನೆಂಬುವವರು ಮೊಳಕಾಲ್ಮೂರು ನಿವಾಸಿಗಳು. ಅವರು ನೇಯ್ಗೆಯವರ ಜಾತಿಯವರಾದರೂ, ಜ್ಞಾನೇಚ್ಛುಗಳಾಗಿದ್ದ ಅವರು ಶ್ರೀಗಳವರೊಡನೆ ವೇದಾಂತ ವಿಷಯಕವಾದ ಚರ್ಚೆಗಳನ್ನು ನಡೆಸಿ, ಬಹಳ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದರು.

2. ರಾಯರು ಹುಬ್ಬಳ್ಳಿಯಲ್ಲಿ ಉದ್ಯೋಗದಲ್ಲಿದ್ದಾಗ, ಸಿದ್ಧಾರೂಢರ ದರ್ಶನಕ್ಕೆ ಹೋಗುತ್ತಿದ್ದರು. ಅಲ್ಲಿ ರಾಯರು ನಡೆಸಿದ ಉಪನ್ಯಾಸಗಳಿಂದ ಪ್ರಭಾವಿತರಾದ ರೆಡ್ಡಿ ಜನಾಂಗದ ಹತ್ತು ಜನ ಯುವಕರು ಅವರ ಶಿಷ್ಯರಾದರು.

3. ಜಗಳೂರು ಗ್ರಾಮದಲ್ಲಿ ಅವರು ಶಿಕ್ಷಕರಾಗಿದ್ದಾಗ, ಅಲ್ಲಿನ ರೆಡ್ಡಿ ಸಮುದಾಯದ ಜನರ ಅಪೇಕ್ಷೆಯಂತೆ ಪ್ರತಿದಿನ ಮಹಾಭಾರತವನ್ನು ವಾಚನಮಾಡುತ್ತಿದ್ದರು. ಇದರಿಂದ ಅಲ್ಲಿನ ಜನರ ಧರ್ಮಶ್ರದ್ಧೆಗೆ ಪ್ರೋತ್ಸಾಹ ನೀಡಿದರು.

4. ಕ್ರಿ.ಶ. 1932ರಲ್ಲಿ ಖಲೀಲ್ ಎಂಬುವರು ಸರ್ವಧರ್ಮಸಮ್ಮೇಳನವನ್ನು ಆಯೋಜಿಸಿದರು. ಅದಕ್ಕೆ ಶ್ರೀಗಳವರು ಅಧ್ಯಕ್ಷರಾಗಿದ್ದರು.

5. ಮಂಜೇಗೌಡರೆಂಬುವರು ಕಾರ್ಯಾಲಯದಲ್ಲಿಯೇ ವಾಸವಾಗಿದ್ದು, ನದೀ ಸ್ನಾನ, ಪುರಾಣಶ್ರವಣ, ಏಕಭುಕ್ತ ಇತ್ಯಾದಿ ನಿಯಮಗಳನ್ನು ಅನುಸರಿಸುತ್ತ, ಕೋಟಿ ರಾಮಮಂತ್ರವನ್ನು ಜಪಿಸಿ, ದಿವ್ಯಸನ್ನಿಧಿಯಲ್ಲಿ ಸ್ವಾರ್ಜಿತವಾದ ವಿತ್ತವನ್ನು ಸದುಪಯೋಗಮಾಡಿದರು.

ಹೀಗೆ ಬಹಳ ಜನ ಶ್ರೀಗಳವರಿಂದ ಆಧ್ಯಾತ್ಮಿಕ ಉನ್ನತಿಯನ್ನು ಪಡೆದರು. ಬ್ರಹ್ಮ ತತ್ತ್ವವು ಎಲ್ಲರ ಆತ್ಮವೇ ಆಗಿದೆ. ತನ್ನನ್ನು ತಾನು ತಿಳಿದುಕೊಳ್ಳಲು ತಾರತಮ್ಯವಿಲ್ಲದೆ ಎಲ್ಲರಿಗೂ ಅಧಿಕಾರವಿರಬೇಕೆಂಬುದು ಶ್ರೀಗಳವರ ಅಭಿಮತವಾಗಿತ್ತು. ಅವರು ಬರೆದಿರುವ ಮುಂಡಕೋಪನ್ಯಾಸಮಂಜರಿಯಲ್ಲಿ **'ಪರೀಕ್ಷ್ಯ ಲೋಕಾನ್ ಕರ್ಮ ಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾತ್'** ಎಂಬ ಮಂತ್ರವನ್ನು ವ್ಯಾಖ್ಯಾನ ಮಾಡುತ್ತ, ಬ್ರಾಹ್ಮಣ ಶಬ್ದದ ಅರ್ಥವನ್ನು ಅವರು ಪರಿಶೋಧಿಸಿರುತ್ತಾರೆ. ಯಾರು ಆತ್ಮಜಿಜ್ಞಾಸುಗಳೋ, ಯಾರಲ್ಲಿ ಅಮಾನಿತ್ವವೇ ಮುಂತಾದ ಜ್ಞಾನಸಾಧನಗಳು ನಿತ್ಯ ವಾಗಿರುತ್ತವೆಯೋ, ತತ್ತ್ವಜ್ಞಾನದ ಆಲೋಚನೆ ಮತ್ತು ಅದರ ಸಾಧನೆಯಲ್ಲಿ ಯಾರಿಗೆ ಪ್ರವೃತ್ತಿಯಿರುತ್ತದೆಯೋ ಅವರೇ ಬ್ರಹ್ಮಜ್ಞಾನಕ್ಕೆ ಅಧಿಕಾರಿಗಳು. ಇದು ಬ್ರಾಹ್ಮಣರಿಗೆ ಸುಲಭ; ಏಕೆಂದರೆ ಅವರಲ್ಲಿ ಸ್ವಾಭಾವಿಕವಾದ ಇಂತಹ ಪ್ರವೃತ್ತಿಯಿರುತ್ತದೆ. ಅದಕ್ಕಾಗಿ ಬ್ರಾಹ್ಮಣಪದಪ್ರಯೋಗ ಮಂತ್ರದಲ್ಲಿದೆಯೇ ಹೊರತು, ಕೇವಲ ಬ್ರಾಹ್ಮಣನೇ ಅಧಿಕಾರಿ ಯೆಂದಾಗಲೀ, ಉಳಿದವರಿಗೆ ಅಧಿಕಾರವೇ ಇಲ್ಲವೆಂದಾಗಲೀ, ಇದರ ಅರ್ಥವಲ್ಲ ವೆಂದು ಅವರು ಸ್ಪಷ್ಟಪಡಿಸಿರುತ್ತಾರೆ.

ಇನ್ನೊಂದು ಕೃತಿಯಾದ ಪರಮಾರ್ಥಚಿಂತಾಮಣಿಯಲ್ಲಿಯೂ, ವೇದಾಂತ ಜಿಜ್ಞಾಸೆಗೆ ಯಾರು ಅಧಿಕಾರಿಗಳು? ಎಂಬ ಪ್ರಶ್ನೆಗೆ ಸ್ವಸ್ವರೂಪವನ್ನು ಅರಿಯಲು ಬಯಸುವವರೆಲ್ಲರೂ ಅಧಿಕಾರಿಗಳು ಎಂದು ಅವರು ಉತ್ತರವನ್ನು ಕೊಟ್ಟಿದ್ದಾರೆ. ಸಂಸ್ಕೃತಭಾಷೆಯನ್ನು ಬಲ್ಲವರು ಉಪನಿಷತ್ತುಗಳಿಂದ ಆತ್ಮಜ್ಞಾನವನ್ನು ಅರಿಯ

ಬಹುದು. ಉಳಿದವರು ಇತಿಹಾಸಪುರಾಣಗಳು, ಅನ್ಯ ಭಾಷಾಗ್ರಂಥಗಳಿಂದ ಅಂತಹ ಜ್ಞಾನವನ್ನು ಪಡೆಯಬಹುದು. ಕೇವಲ ಕುತೂಹಲದಿಂದ ವೇದಾಂತವನ್ನು ಓದು ವವರು ಅದರ ಜ್ಞಾನಕ್ಕೆ ಅಧಿಕಾರಿಗಳಲ್ಲ, ಶಮದಮಾದಿ ಸಾಧನಯುಕ್ತರಾಗಿದ್ದು ಸದಾಚಾರದಿಂದ ಬ್ರಾಹ್ಮಣನಿಗೆ ಸಮಾನವಾಗಿರುವವರೆಲ್ಲ ಅರ್ಹರು.

ಪರೋಪದೇಶದಲ್ಲಿ ಬಹಳಷ್ಟು ಮಂದಿ ಪ್ರವೀಣರಾಗಿರುತ್ತಾರೆ. ಆದರೆ ತಾವು ಅನುಸರಿಸಿ, ಉಳಿದವರಿಗೆ ಮಾದರಿಯಾಗಿರುವವರು ವಿರಳ. ಅಂತಹ ವಿರಳಾತಿ ವಿರಳರಲ್ಲಿ ಶ್ರೀಗಳವರೂ ಒಬ್ಬರು. ಜೀವನ ಪರ್ಯಂತ ಸದಾಚಾರ ಸಂಪನ್ನರಾಗಿದ್ದ ಅವರ ಸ್ವಭಾವವನ್ನು ಬಾಲ್ಯದ ಒಂದು ಘಟನೆಯಿಂದ ಕಂಡುಕೊಳ್ಳಬಹುದು. ಅವರು ವಿದ್ಯಾರ್ಥಿಜೀವನವನ್ನು, ವಾರದ ಮನೆಗೆ ಊಟಕ್ಕೆ ಹೋಗುತ್ತಿದ್ದರು. ಒಂದು ಸಲ ಅವರಿಗೆ ಅನಾರೋಗ್ಯದಿಂದ ಊಟ ಬೇಕೆನಿಸಲಿಲ್ಲ, ಮನೆಯಾಕೆಯು ಅಂದು ಏಕಾದಶಿಯಾದುದರಿಂದ ಬಾಲಕನು ಊಟ ಬೇಡ ಎಂದು ಹೇಳಿದನೆಂದು ತಿಳಿದು, ಅವನನ್ನು ಪ್ರಶಂಸೆ ಮಾಡಿದರು. ಅದರಿಂದ ಲಜ್ಜಿತರಾದ ರಾಯರು, ಅಂದಿನಿಂದ ಏಕಾದಶೀ ಊಟವನ್ನು ಬಿಟ್ಟುಬಿಟ್ಟರು.

ವೇದಾಂತವಿಚಾರಗಳನ್ನು ಅನುಷ್ಠಾನಮಾಡಲು ದೇಹಶುದ್ಧಿ ಮತ್ತು ಮಾನಸಿಕ ಶುದ್ಧಿಗಳೆರಡೂ ಅಗತ್ಯವೆಂಬುದು ಅವರ ಅಭಿಪ್ರಾಯವಾಗಿತ್ತು. ಆಹಾರಪದಾರ್ಥ ಗಳನ್ನು ರುಚಿಗಾಗಿ ಅನಿಯಮಿತವಾಗಿ ತಿನ್ನುವುದು, ಅಶುದ್ಧ ಸ್ಥಳಗಳಲ್ಲಿ ಆಹಾರ ಸೇವನೆ, ಮುಂತಾದವು ದೈಹಿಕ ಮತ್ತು ಮಾನಸಿಕ ಆರೋಗ್ಯಗಳೆರಡನ್ನೂ ಹಾಳು ಮಾಡುತ್ತವೆ. ಭೋಜನ ಕಾಲದಲ್ಲಿ ಮನಸ್ಸು ಸಮಾಧಾನವಾಗಿರಬೇಕು. ನಿದ್ರೆಯೂ ಹಾಗೆಯೇ ರಾತ್ರಿಯಲ್ಲಿ ಮಾತ್ರ, ಅದೂ ನಿಯಮಿತ ಕಾಲಪರ್ಯಂತವಾಗಿರಬೇಕು. ಅರುಣೋದಯಕ್ಕೆ ಎದ್ದು, ಸ್ವಲ್ಪ ಹೊತ್ತು ಇಷ್ಟದೈವವನ್ನು ಸ್ಮರಿಸಿ, ನಿತ್ಯಕಾರ್ಯವನ್ನು ಆರಂಭಿಸಬೇಕು. ಮಾತಿನಲ್ಲಿಯು ಶುದ್ಧತೆಯಿರಬೇಕು. ಈ ರೀತಿಯಲ್ಲಿ ಎಲ್ಲರೂ ನಿಯಮಪರರಾದರೆ ಜಗತ್ತಿನಲ್ಲಿ ದುಷ್ಟರು, ವಂಚಕರು ಮತ್ತು ಕಳ್ಳರು ಇರುವುದೇ ಇಲ್ಲ, ಇದೇ ನಿಜವಾದ ಸಮಾಜ ಸುಧಾರಣೆಯಾಗಿದೆ.

ಶ್ರೀಗಳವರಿಗೆ ವರ್ಣಾಶ್ರಮವ್ಯವಸ್ಥೆಯಲ್ಲಿ ಆದರವಿದ್ದರೂ, ಸಂಕುಚಿತ ಮನೋಭಾವವಿರಲಿಲ್ಲ, ವಿದ್ಯಾಭಿಮಾನಿಗಳಾದ ಅವರು ಅಶಿಕ್ಷಿತರನ್ನು ವಿದ್ಯಾವಂತರಾಗಿ ಮಾಡದೆ ಸಮಾಜದ ಉನ್ನತಿ ಅಸಾಧ್ಯವೆಂದು ನಂಬಿದ್ದರು. ಕೇವಲ ಘೋಷಣೆಗಳಿಂದ

ಜನರ ಉನ್ನತಿ ಸಾಧ್ಯವಿಲ್ಲ, ಹರಿಜನರನ್ನು ದೇವಾಲಯಕ್ಕೆ ಪ್ರವೇಶಿಸಲು ಅವಕಾಶ ಮಾಡಿಕೊಡುವುದೇ ಮುಂತಾದವುಗಳಿಂದ ಪ್ರಯೋಜನವೇನೂ ಇಲ್ಲ. ಪ್ರಧಾನವಾಗಿ ಅವರನ್ನು ಸುಶಿಕ್ಷಿತರನ್ನಾಗಿ ಮಾಡುವುದೇ ಮುಖ್ಯವಾದುದು. ಚೆನ್ನಪಟ್ಟಣದಲ್ಲಿ ಒಬ್ಬರು ಮಹಾತ್ಮರು ದಾಸಬಣಜಿಗರನ್ನು ಶುದ್ಧಾತ್ಮರನ್ನಾಗಿ ಮಾಡಿದ ವಿಷಯವನ್ನು ಅವರು ತಮ್ಮ ಸರ್ವೇಷ್ಟಸಿದ್ಧಿಯೆಂಬ ಗ್ರಂಥದಲ್ಲಿ ಪ್ರಶಂಸಿಸಿದ್ದಾರೆ. ಅವರೆಲ್ಲ ಪ್ರತಿದಿನ ಸ್ನಾನ ಮಾಡಿ **ಮುಕುಂದಮಾಲಾಸ್ತೋತ್ರ**ವನ್ನು ಸ್ಫುಟವಾಗಿ ಹೇಳುತ್ತಿದ್ದರಂತೆ! ಇಂತಹ ಜನರಿಂದ ಕೂಡಿದ ಸಮಾಜವೇ ಸುಸಂಸ್ಕೃತವಾದುದು.

ಶಿಕ್ಷಣವು ಮಾತೃಭಾಷೆಯಲ್ಲಿಯೇ ಇರಬೇಕೆಂಬುದು ಅವರ ನಿಲುವಾಗಿತ್ತು. ಆದ್ದರಿಂದ ಆಧ್ಯಾತ್ಮಿಕವಿಚಾರಗಳನ್ನು ಅವರು ಸರಳವಾದ ಕನ್ನಡದಲ್ಲಿ ಜನರಿಗೆ ಒದಗಿಸಿದರು. ಅಂದಿನ ಕಾಲದಲ್ಲಿ ವೇದಾಂತವು ಸಾಮಾನ್ಯಜನರಿಗೆ ಎಟುಕುವುದಿಲ್ಲ ವೆಂಬ ಭಾವನೆ ಬಲವಾಗಿತ್ತು. ಅಲ್ಲದೆ ಸಂಸ್ಕೃತದಲ್ಲಿರುವ ಈ ಉಚ್ಚವಿಷಯವನ್ನು ಅನುವಾದ ಮಾಡುವುದು ಮ್ಲೇಚ್ಛಸದೃಶವೆಂದು ಕೆಲವರು ಪಂಡಿತರು ವಾದಿಸುತ್ತಿದ್ದರು. ಶ್ರೀಗಳವರನ್ನು ಈ ವಿಷಯವಾಗಿ ಅನೇಕರು ದೂಷಿಸುತ್ತಿದ್ದರು. ಆದರೆ ಶ್ರೀಗಳವರು ಸಂಸ್ಕೃತವನ್ನು ಬಿಟ್ಟು ಉಳಿದ ಭಾಷೆಗಳು ಮ್ಲೇಚ್ಛ ಭಾಷೆಯೆಂದು ಎಲ್ಲಿಯೂ ಹೇಳಿಲ್ಲ. ಕನ್ನಡವು ಸಂಸ್ಕೃತದ ಶಿಶುವಿನಂತೆಯೇ ಎಂದು ಹೇಳಿ, ಶಾಂಕರ ಸಾಹಿತ್ಯವನ್ನು ಪೂರ್ಣವಾಗಿ ಕನ್ನಡದಲ್ಲಿ ಅನುವಾದಮಾಡಿ ಸಮಾಜಕ್ಕೆ ಪರಮೋಪಕಾರ ಮಾಡಿದರು. ಇದು ಅವರ ಮನೋವೈಶಾಲ್ಯವನ್ನು ತೋರಿಸುತ್ತದೆ. ಅಧ್ಯಾತ್ಮವಿದ್ಯಾಶ್ರವಣಕ್ಕೆ ಸಾಧನಚತುಷ್ಟಯವು ಬೇಕೇಹೊರತು, ಭಾಷಾ ಪಾಂಡಿತ್ಯವಲ್ಲ.

ಲೋಕವು ಪ್ರವೃತ್ತಿ, ನಿವೃತ್ತಿಧರ್ಮದ್ವಯಯುಕ್ತವಾದುದು. ಸೋಪಾನ ಪರಂಪರೆಯಿಂದ ಪ್ರವೃತ್ತಿಧರ್ಮವು ಮೋಕ್ಷಸಾಧಕವು. ಎಲ್ಲರೂ ಭೌತಿಕಸುಖವನ್ನು ಆತ್ಯಂತಿಕವಾಗಿ ತ್ಯಾಗಮಾಡಲು ಶಕ್ತರಲ್ಲವೆಂಬುದು ಅವರಿಗೆ ತಿಳಿದಿತ್ತು. ಅಧ್ಯಾತ್ಮ ಪ್ರಕಾಶ ಪತ್ರಿಕೆಯ ಪ್ರಥಮ ಸಂಚಿಕೆಯಲ್ಲಿ ಅವರು ಪತ್ರಿಕೆಯ ಧ್ಯೇಯೋದ್ದೇಶಗಳನ್ನು ವಿವರಿಸುತ್ತ, 'ವಿಶ್ವವು ಅಧ್ಯಾತ್ಮ ಮತ್ತು ಅಧಿಭೂತಗಳಿಂದ ಯುಕ್ತವಾಗಿದೆ. ನಮ್ಮ ಹಿರಿಯರು ಈ ಎರಡಕ್ಕೂ ಸೂಕ್ತ ಸ್ಥಾನವನ್ನು ಕೊಟ್ಟಿದ್ದರು. ಈಗ ಅಧಿಭೂತವು ಪ್ರಾಧಾನ್ಯವಾಗಿ ವಿಜೃಂಭಿಸುತ್ತಿರುವುದರಿಂದ ಜಗತ್ತು ಅಲ್ಲೋಲಕಲ್ಲೋಲವಾಗಿದೆ. ಭೌತಿಕ ಸಂಪತ್ತಿನ ಸುಖವನ್ನು ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಅನುಭವಿಸಬೇಕೆಂದು ಜ್ಞಾಪಿಸಲು ಈ ಪ್ರಯತ್ನವನ್ನು ಪ್ರಾರಂಭಿಸಲಾಗಿದೆ' ಎಂದು ಹೇಳಿರುತ್ತಾರೆ. ಕೇವಲ

ಭೌತಿಕಸುಖವನ್ನು ಕೊಡುವುದು ವಿದ್ಯೆಯೆನಿಸುವುದಿಲ್ಲ, ಯಾವುದು ಸಮಾಜವನ್ನು ಉನ್ನತಿಪಥದಲ್ಲಿ ಕೊಂಡೊಯ್ಯುತ್ತದೆಯೋ ಅದೇ ವಿದ್ಯೆ. ಪ್ರಸಿದ್ಧವಾದ ಋಣತ್ರಯದ ಜೊತೆಗೆ ಮನುಷ್ಯನಿಗೆ ನಾಲ್ಕನೆಯದಾದ ಸಾಮಾಜಿಕ ಋಣವೂ ಇದೆ. ಅದನ್ನು ತೀರಿಸಲು ಅದ್ವೈತವಿದ್ಯೆಯೇ ಉತ್ತಮ ಸಾಧನ. ತಾರತಮ್ಯವಿಲ್ಲದ ಈ ದರ್ಶನದಲ್ಲಿ ಕಲಹಕ್ಕೆ ಅವಕಾಶವೇ ಇಲ್ಲ, ಉಳಿದ ಮತಾವಲಂಬಿಗಳಲ್ಲಿ ಯಾವ ರೀತಿಯ ಹಿಂಸಾಚಾರ ಮತ್ತು ರಕ್ತಪಾತ ನಡೆಯುತ್ತದೆಯೋ ಅದು ಅದ್ವೈತಿಗಳಲ್ಲಿ ಸಾಧ್ಯವೇ ಇಲ್ಲ, ಯಾವ ದರ್ಶನದಲ್ಲಿ ಎಲ್ಲವೂ ಆತ್ಮಸ್ವರೂಪವೇ ಆಗಿದೆಯೋ ಅಲ್ಲಿ ಯಾರು ಯಾರ ಜೊತೆ ವಾದ ಮಾಡಬೇಕು? ಆಚಾರ್ಯಶಂಕರರಿಂದ ಹಿಡಿದು ವಿದ್ಯಾರಣ್ಯರ ವರೆಗೆ ಎಲ್ಲ ಅದ್ವೈತಾಚಾರ್ಯರೂ ಸನಾತನಧರ್ಮಸಂಸ್ಥಾಪಕರೇ ಹೊರತು, ಮತ ಸ್ಥಾಪಕರಲ್ಲ, ಮತಪ್ರಚಾರಕರೂ ಅಲ್ಲ, ವ್ಯಕ್ತಿಧರ್ಮವನ್ನು ರಾಷ್ಟ್ರಧರ್ಮದೊಂದಿಗೆ ಸಮನ್ವಯಗೊಳಿಸಿ ಅವರೆಲ್ಲ ಐಕ್ಯತೆಯನ್ನು ಸಾಧಿಸಿದರು. ವಿದ್ಯೆಯ ಪರಮ ಪ್ರಯೋಜನವು ಇದೇ ಆಗಿದೆ. ಇದೇ ಶ್ರೀಗಳವರ ಅಭಿಮತವಾಗಿದೆ.

* * * * *

# ಅಧ್ಯಾಯ - 12

## ಪತ್ರಿಕಾಸಂಪಾದಕರಾಗಿ ಶ್ರೀಗಳವರು

**ಪ್ರಸರತಿ ಶಾಂಕರವಾಣೀಂ ಪ್ರಸಾದಯತಿ ಚಿತ್ತಮಿದಾನೀಮ್ ।**
**ಪ್ರಕಾಶೋತ್ತರಾಧ್ಯಾತ್ಮಪತ್ರಿಕೇಯಂ ದರ್ಶಯತಿ ಪದಂ ಗೈರ್ವಾಣೀಮ್ ॥**

ಯಾವುದೇ ವಿಷಯವನ್ನು ಜನಸಾಮಾನ್ಯನಲ್ಲಿ ಪ್ರಸಾರಮಾಡಲು ಸಮೂಹ ಮಾಧ್ಯಮಕ್ಕಿಂತ ಉತ್ತಮ ಸಾಧನವಿಲ್ಲ, ಆಸ್ತಿಕಮಹಾಜನರಲ್ಲಿ ತತ್ಸಂಬದ್ಧವಾದ ವಿಚಾರ ಗಳನ್ನು ಪ್ರಚಾರ ಮಾಡಲು ಪತ್ರಿಕೆಯೊಂದರ ಅವಶ್ಯಕತೆಯಿದೆಯೆಂದು ಬಹು ದಿನ ಗಳಿಂದ ರಾಯರ ಮನಸ್ಸಿನಲ್ಲಿ ಆಕಾಂಕ್ಷೆಯಿದ್ದಿತು. ಈ ಕಾರ್ಯವು ಬಹಳ ದುಷ್ಕರ ವಾದರೂ, ಅದರ ಪ್ರಯೋಜನದ ದೃಷ್ಟಿಯಿಂದ ಹೇಗಾದರೂ ಅಧ್ಯಾತ್ಮಪತ್ರಿಕೆ ಯೊಂದನ್ನು ಪ್ರಾರಂಭಿಸಿ, ತಮ್ಮ ಪಾಂಡಿತ್ಯ ಮತ್ತು ಅನುಭವಗಳನ್ನು ಜಿಜ್ಞಾಸು

ಗಳೊಂದಿಗೆ ಹಂಚಿಕೊಳ್ಳಲು ಅವರು ಕಾತರರಾಗಿದ್ದರು. ಈ ಕಾರ್ಯ ಬಹಳ ಕಾಲ ದವರೆಗೆ ಮನಸ್ಸಿನಲ್ಲಿಯೇ ಉಳಿದಿತ್ತು. ಅವರ ಶಾಲಾ ಉದ್ಯೋಗ, ವೇದಾಂತಪಾಠ, ಪ್ರವಚನಗಳ ನಡುವೆ. ಈ ಉದ್ಯಮವನ್ನು ಕಾರ್ಯರೂಪಕ್ಕೆ ತರಲು ಆಗಿರಲಿಲ್ಲ, ಆದರೂ ತಮ್ಮ ಗೆಳೆಯರಾದ ಚಿದಂಬರಯ್ಯನವರ ಸಹಕಾರದಿಂದ ಅವರೊಂದಿಗೆ, 'ಪುಂಡರೀಕ' ಎಂಬ ಹೆಸರಿನಿಂದ ಒಂದು ಪತ್ರಿಕೆಯನ್ನು ಆರಂಭಿಸಲು ಪ್ರಯತ್ನಿಸಿದರು. ಆದರೆ ನಿರಂತರವಾಗಿ ಸ್ಥಾನಪರಿವರ್ತನವನ್ನು ಪಡೆಯುವ ಉದ್ಯೋಗದಲ್ಲಿ ಈ ಪ್ರಯತ್ನವು ಸಫಲವಾಗಲಿಲ್ಲ, ಪತ್ರಿಕೆಯು ಕೇವಲ ನಾಮಕರಣಕ್ಕೇ ಸೀಮಿತವಾಯಿತು. ಕೃತಸಂಕಲ್ಪರಾದ ರಾಯರು ಮತ್ತೆಮತ್ತೆ ವಿಘ್ನಗಳು ಬಾಧಿಸುತ್ತಿದ್ದರೂ, ತಮ್ಮ ಪ್ರಯತ್ನವನ್ನು ಬಿಡಲಿಲ್ಲ, ಮಹಾತ್ಮರ ಶಕ್ತಿಯು ಆಪತ್ಕಾಲದಲ್ಲಿಯೇ ಅಭಿವ್ಯಕ್ತವಾಗುತ್ತದೆಯಲ್ಲವೆ? ಕ್ರಿ.ಶ. 1923ರಲ್ಲಿ ರಾಯರು ಬೆಂಗಳೂರಿಗೆ ಬಂದಾಗ, ಅವರ ಈ ಪ್ರಯತ್ನವು ಸಫಲವಾಯಿತು. ಬಹುಪ್ರಯತ್ನದಿಂದ **'ಅಧ್ಯಾತ್ಮಪ್ರಕಾಶ'** ಎಂಬ ವಿಚಾರಪೂರ್ಣವಾದ ಪತ್ರಿಕೆಯು ಶ್ರೀರಾಮ ನವಮಿಯ ಶುಭ ದಿನದಲ್ಲಿ ಜನ್ಮ ತಳೆಯಿತು. ಸಿದ್ಧಿಯನ್ನು ಪಡೆದ ರಾಯರು ತಮ್ಮ ಹಿಂದಿನ ಕ್ಲೇಶಗಳನ್ನು ಮರೆತು, ಕಾರ್ಯಪರರಾದರು. ಆದರೆ ಧನಾಭಾವದಿಂದ ಮತ್ತು ಕೊಳ್ಳುವವರ ಪ್ರೋತ್ಸಾಹದ ಅಭಾವದಿಂದ ಪತ್ರಿಕೆಯು ಒಂದುವರ್ಷ ಮಾತ್ರ ಪ್ರಕಟವಾಗಿ, ನಿಂತುಹೋಯಿತು. ಕೃತಮತಿಗಳಾದ ರಾಯರು, ಮುಂದಿನ ವರ್ಷ ಪತ್ರಿಕೆಯನ್ನು ಮತ್ತೆ ಆರಂಭಿಸಿದರು. ಆಗಲೂ ನಾಲ್ಕು ತಿಂಗಳುಗಳಲ್ಲಿಯೇ ಅಂತ್ಯವನ್ನು ಕಾಣಬೇಕಾಯಿತು. ಕೊನೆಗೆ ಆರು ವರ್ಷಗಳ ಅಜ್ಞಾತವಾಸದಿಂದ ಮುಕ್ತವಾಗಿ, ಕ್ರಿ.ಶ. 1931ರಲ್ಲಿ ಮೂರನೆಯ ಬಾರಿಗೆ ಪ್ರಾರಂಭವಾದ ಈ ಪತ್ರಿಕೆಯು, ಇಂದಿಗೂ ನಿರಂತರವಾಗಿ ಜನರಿಗೆ ಅದ್ವೈತಾಮೃತವನ್ನು ಪಾನಮಾಡಿಸುತ್ತಿದೆ. ಆಧ್ಯಾತ್ಮಿಕಲೇಖನಗಳು, ಅದಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರಗಳು, ಅನುವಾದ ಮಾಡಿದ ಗ್ರಂಥದ ಭಾಗಗಳು, ಸುಭಾಷಿತಗಳು, ಕಾರ್ಯಾಲಯದ ಕಾರ್ಯಕ್ರಮಗಳ ಪರಿಚಯ, ಹೀಗೆ ಅನೇಕ ಉಪಯುಕ್ತ ವಿಷಯಗಳಿಂದ ಸಂಪನ್ನವಾದ ಪತ್ರಿಕೆಯು, ಇಂದಿಗೂ ಬಹುಜನರಿಗೆ ಪ್ರೀತಿಪಾತ್ರವಾಗಿದೆ. ಒಂದು ಅಧ್ಯಾತ್ಮ ಪತ್ರಿಕೆಯು ಹೀಗೆ ಎಂಭತ್ತುವರ್ಷಗಳ ಕಾಲ ರಾಜಾಶ್ರಯವಾಗಲಿ, ಸರ್ಕಾರದ ಅನುದಾನವಾಗಲೀ ಇಲ್ಲದೆ ಇದ್ದರೂ ನಿರಂತರವಾಗಿ ಪ್ರಕಟವಾಗಿರುವುದೇ ಅದರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಹಾಗೂ ಮೌಲ್ಯ ಪ್ರತಿಪಾದಕವಾಗಿದೆ.

## ಪತ್ರಿಕೆಯ ವಿಶೇಷಾಂಶಗಳು

ಈ ಪತ್ರಿಕೆಯ ಪ್ರಕಟಣೆಯನ್ನು ಪ್ರಾರಂಭಿಸಿದುದರಿಂದ ಶ್ರೀಗಳವರ ಅಧ್ಯಾತ್ಮ ವಿದ್ಯಾಪ್ರಚಾರಕಾರ್ಯವು ಸುಗಮವಾಯಿತು. ಪತ್ರಿಕೆಯು ಅವರ ದುರ್ಗಮವಾದ ಕೆಲಸದಲ್ಲಿ ಅನೇಕವಿಧವಾಗಿ ತನ್ನಯೋಗದಾನವನ್ನು ಈ ರೀತಿ ನೀಡಿತು.

1. ಅಂದಿನ ಕಾಲದಲ್ಲಿ ಪ್ರಸಿದ್ಧರಾಗಿದ್ದ ಮತ್ತು ಪ್ರಸಿದ್ಧರಲ್ಲದ ಎಲ್ಲಾ ಅದ್ವೈತ ವಿದ್ವಾಂಸರ ಮತ್ತು ಜಿಜ್ಞಾಸುಗಳ ಲೇಖನಗಳನ್ನು ಪ್ರಕಟಿಸಲು ಅಪೂರ್ವವಾದ ಅವಕಾಶವಾಯಿತು. ಇದರಿಂದ ಅವರುಗಳ ಮಧ್ಯೆ ಪರಸ್ಪರ ಪರಿಚಯ ಲಾಭ ಮತ್ತು ವಿಚಾರವಿನಿಮಯದ ಅವಕಾಶಗಳು ಹೆಚ್ಚಿದವು.

2. 'ಬಹುಜನಹಿತಾಯ ಬಹುಜನಸುಖಾಯ' ಎಂಬ ನ್ಯಾಯದಂತೆ, ಪತ್ರಿಕೆಯ ಮೂಲಕ ಕಾರ್ಯಾಲಯದ ಕಾರ್ಯಕ್ರಮಗಳಿಗೆ ಪ್ರಚಾರವು ದೊರಕಿತು. ಇಂತಹ ಕಾರ್ಯಕ್ರಮದ ವಿಷಯಗಳನ್ನು ಬಹಳ ಜನರಿಗೆ ತಿಳಿಸಲು ಪತ್ರಿಕೆಯು ಉತ್ತಮ ಮಾಧ್ಯಮವಾಯಿತು. ಕಾರ್ಯಕ್ರಮಗಳ ವಿವರವನ್ನು ಪತ್ರಿಕೆಯ ಮೂಲಕ ತಿಳಿದ ಆಸ್ತಿಕ ಮಹಾಜನರು ಉತ್ಸಾಹದಿಂದ ಮತ್ತು ಸಮಯಕ್ಕೆ ಸರಿಯಾಗಿ ಕಾರ್ಯಾಲಯಕ್ಕೆ ಬಂದು, ಅಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳ ಪೂರ್ಣ ಪ್ರಯೋಜನವನ್ನು ಪಡೆಯುವಂತಾಯಿತು.

3. ಪತ್ರಿಕೆಯ ಪ್ರಸಾರದಿಂದ ಪೂಜ್ಯಪಾದರ ಅಭಿಮಾನಿಗಳ ಸಂಖ್ಯೆ ಹೆಚ್ಚಿತು. ದೇಶದ ನಾನಾಭಾಗಗಳಿಂದ ಜಿಜ್ಞಾಸುಗಳು ಶ್ರೀಗಳವರ ಸನ್ನಿಧಿಯನ್ನು ಹೊಂದಿ ತಮಗೆ ಶ್ರೇಯಸ್ಕರವಾದ ಜ್ಞಾನವನ್ನು ಪಡೆದರು.

4. ಜನಸಾಮಾನ್ಯರಲ್ಲಿ ಅಧ್ಯಾತ್ಮವಿದ್ಯಾಪ್ರಚಾರವು ತೀವ್ರಗತಿಯಲ್ಲಿ ನಡೆದು, ಈ ವಿದ್ಯೆಯು ಪಂಡಿತರಿಗೆ ಮಾತ್ರ ಸೀಮಿತವೆಂಬ ಭಾವನೆಯನ್ನು ಅಳಿಸಿ ಹಾಕಿತು. ಎಲ್ಲರಿಗೂ ಸಮಾನವಾದ ಅವಕಾಶವನ್ನು ಕಲ್ಪಿಸಿತು.

5. ಅಂದಿನ ಕಾಲದಲ್ಲಿ ಅಧ್ಯಾತ್ಮವಿಷಯಕವಾದ ಮತ್ತು ಅದಕ್ಕೇ ಮೀಸಲಾದ ಪತ್ರಿಕೆಗಳು ಕನ್ನಡದಲ್ಲಿ ಅತಿವಿರಳವಾಗಿದ್ದುದರಿಂದ ಸ್ವಾಮೀಜಿಯವರದು ನೂತನ ಆವಿಷ್ಕಾರವೇ ಆಯಿತು.

6. ಶಂಕರಭಗವತ್ಪಾದರು ಅನೇಕ ಆಧ್ಯಾತ್ಮಿಕ ಪ್ರಕರಣ ಗ್ರಂಥಗಳನ್ನು ರಚಿಸಿರುತ್ತಾರೆ. ಅವೆಲ್ಲವೂ ಸಂಸ್ಕೃತದಲ್ಲಿರುವುದರಿಂದ ಸಾಮಾನ್ಯಜನರಿಗೆ ಅರ್ಥ ಮಾಡಿ

ಕೊಳ್ಳಲು ಸಾಧ್ಯವಿರಲಿಲ್ಲ. ಅಲ್ಪಪ್ರಚಾರವುಳ್ಳ ಪ್ರಕರಣಗಳನ್ನು ಕೂಡ ಶ್ರೀಗಳವರು ಪರಿಶೋಧಿಸಿ ಸುಲಲಿತವಾದ ಶೈಲಿಯಲ್ಲಿ ಟಿಪ್ಪಣಿಗಳು ಮತ್ತು ಅನುವಾದದ ಜೊತೆ ಈ ಪತ್ರಿಕೆಯಲ್ಲಿ ಪ್ರಥಮತಃ ಪ್ರಕಟಿಸಿದರು. ಇದರಿಂದ ಆಚಾರ್ಯರ ಎಲ್ಲ ಪ್ರಕರಣಗಳನ್ನು ಎಲ್ಲರೂ ಓದಿ ಅರ್ಥಮಾಡಿಕೊಳ್ಳುವ ಸುವರ್ಣಾವಕಾಶವು ದೊರೆಯಿತು.

6. ಶಂಕರರ ಭಾಷ್ಯಗಳು ಅನೇಕ ವ್ಯಾಖ್ಯಾನಗಳಿಂದ ಅಲಂಕೃತವಾಗಿವೆ. ಆದರೆ ಅಲ್ಲಲ್ಲಿ ವ್ಯಾಖ್ಯಾನಕಾರರ ಅಭಿಪ್ರಾಯಗಳು. ಭಾಷ್ಯಕಾರರ ಅಭಿಪ್ರಾಯಗಳಿಗಿಂತ ಭಿನ್ನವಾಗಿದೆ. ಈ ವಿಷಯವನ್ನು ಚೆನ್ನಾಗಿ ವಿಮರ್ಶಿಸಿ, ಶುದ್ಧವಾದ ಶಾಂಕರಪ್ರಕ್ರಿಯೆಯನ್ನು ಪುನಃ ಪ್ರತಿಷ್ಠಾಪಿಸಲು ಪೂಜ್ಯಪಾದರಿಗೆ ಸುವರ್ಣಾವಕಾಶವು ಇದರಿಂದ ಕಲ್ಪಿತವಾಯಿತು.

7. ಹತ್ತಿರದಲ್ಲಿರುವ ಜಿಜ್ಞಾಸುಗಳು ಸ್ವಾಮೀಜಿಯವರ ಜೊತೆಯಲ್ಲಿ ಪ್ರತ್ಯಕ್ಷವಾಗಿ ಸಂವಾದ ನಡೆಸಿ, ತಮ್ಮ ಸಂದೇಹಗಳಿಗೆ ಪರಿಹಾರವನ್ನು ಪಡೆಯುತ್ತಿದ್ದರು. ಆದರೆ ದೂರದಲ್ಲಿರುವವರಿಗೆ ಆ ಸೌಕರ್ಯವು ಇರಲಿಲ್ಲ. ಈಗ ಪತ್ರಿಕೆಯು ಅವರ ನಡುವೆ ಸಂಬಂಧಸೇತುವಾಗಿ ಕೆಲಸ ಮಾಡಿತು. ಜಿಜ್ಞಾಸುಗಳು ಪತ್ರಗಳ ಮೂಲಕ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಪೂಜ್ಯಪಾದರನ್ನು ಸಂಪರ್ಕಿಸುತ್ತಿದ್ದರು. ಹಾಗೂ ಅವರಿಂದ ಸಮರ್ಪಕವಾದ ಉತ್ತರವನ್ನು ಪಡೆದು ತೃಪ್ತರಾಗುತ್ತಿದ್ದರು. ಇದರಿಂದ ಪ್ರಾಶ್ನಿಕರಲ್ಲದೆ, ಸಮಾನಮನಸ್ಕರಾದ ಇತರರೂ ಪತ್ರಿಕೆಯಲ್ಲಿ ಉತ್ತರಗಳನ್ನು ಓದಿ ಲಾಭ ಪಡೆಯುತ್ತಿದ್ದರು.

ಹೀಗೆ ಈ ಪತ್ರಿಕೆಯು ಜನಸೇವಾತತ್ಪರರಾದ ರಾಯರಿಗೆ ಪ್ರಮುಖವಾದ ಅಸ್ತ್ರವಾಗಿ ಅವರ ಸೇವಾಕ್ಷೇತ್ರವು ಮತ್ತಷ್ಟು ವಿಸ್ತಾರವಾಯಿತು. ಪತ್ರಿಕೆಯ ಸಾಂಸ್ಕೃತಿಕ ಪರಂಪರಾಪೂರಕತ್ವವನ್ನು ತಿಳಿದು, ಅಂದಿನ ಸರ್ಕಾರವು, ಈ ಪತ್ರಿಕೆಯನ್ನು ಶಾಲಾ ಕಾಲೇಜುಗಳ ವಾಚನಾಲಯಗಳಿಗೆ ತರಿಸಬಹುದೆಂದು ಆದೇಶ ನೀಡಿತು. ಬಾಲ್ಯದಿಂದಲೇ ಸನಾತನಭಾರತೀಯ ಸಂಸ್ಕೃತಿಯ ಪರಿಚಯಲಾಭವನ್ನು ಮಕ್ಕಳು ಪಡೆಯುವಂತಾಯಿತು. ಹೀಗೆ ಆಬಾಲವೃದ್ಧರೆಲ್ಲರೂ ರಾಯರಿಂದ ವ್ಯವಸ್ಥಿತವಾದ ಈ ಉದ್ಯೋಗದಿಂದ ಉಪಕೃತರಾದರು. ಸದುದ್ದೇಶದಿಂದ ಮಾಡಿದ ಪ್ರಯತ್ನವು ಉನ್ನತಿಗೆ ಸಾಧಕವಾಗದೆ ಇರುತ್ತದೆಯೇ? ಪ್ರಾಯಶ, ಮಹಾತ್ಮರ ರೀತಿಯೇ ಇಂಥಹುದು. ಚಂದನದ ವೃಕ್ಷವು ತನ್ನ ದೇಹದ ಶೈತ್ಯಕ್ಕಾಗಿಯೇ ಬೆಳೆಯುವುದಿಲ್ಲವಲ್ಲವೇ?

# ಅಧ್ಯಾಯ - 13

## ಅಧ್ಯಾತ್ಮಪ್ರಕಾಶಕಾರ್ಯಾಲಯದ ಸ್ಥಾಪಕರಾಗಿ ಶ್ರೀಗಳು

**ಕಾರ್ಯಾಲಯಾಃ ಸಂತು ಸಹಸ್ರಶೋऽನ್ಯೇತತ್ತುಲಾಂ ನ ವಹಂತಿ ಸತ್ಯಮ್ ।**
**ಶ್ರೀಸಚ್ಚಿದಾನಂದಯತೀಶ್ವರೇಣ ಪ್ರವರ್ಧಿತೇऽಯಮಪೂರ್ವಸಂಸ್ಥಾ ॥**

ಭಾರತೀಯದರ್ಶನದ ಗಭೀರತೆ ಮತ್ತು ವೈಶದ್ಯವನ್ನು ಲೋಕಹಿತಕ್ಕಾಗಿ ಪ್ರಕಾಶಪಡಿಸಲು, ಕ್ರಿಯಾಶೀಲರಾದ ರಾಯರು ತಮ್ಮ ಮನೆಯಲ್ಲಿಯೇ ಮುದ್ರಣಾಲಯವನ್ನು ಸ್ಥಾಪಿಸಿದರು. ಯಾವಾಗ ಹೀಗೆ ಮುದ್ರಣಾಲಯವನ್ನು ಆರಂಭಿಸಿ, ತಾವು ಬರೆದ ಪುಸ್ತಕಗಳನ್ನು ಪ್ರಕಟಿಸಲು ಪ್ರಾರಂಭಿಸಿದರೋ, ಆಗಲೇ ಕ್ರಿ.ಶ. 1920ರಲ್ಲಿ ಕಾರ್ಯಾಲಯವು ವ್ಯಕ್ತಾವ್ಯಕ್ತರೂಪದಿಂದ ಆರಂಭಗೊಂಡಿತು. ಬಹುದಿನಗಳಿಂದಲೂ ರಾಯರ ಮನಸ್ಸಿನಲ್ಲಿ, ಸಾಮೂಹಿಕವಾದ ಪ್ರಚಾರ ಮಾಧ್ಯಮ ಗಳ ಮೂಲಕ ಭಾರತೀಯ ವೇದ, ಇತಿಹಾಸ ಮತ್ತು ಪುರಾಣಗಳ ಪರಿಚಯವನ್ನು ಎಲ್ಲರಿಗೂ ಮಾಡಿಸಿಕೊಡಬೇಕೆಂಬ ಬಯಕೆಯಿತ್ತು. ಅದಕ್ಕಾಗಿ ಆರಂಭದಶೆಯಲ್ಲಿ ಮನೆಯಲ್ಲಿಯೂ ಕಾರ್ಯಾಲಯದ ಕಾರ್ಯಕ್ರಮಗಳನ್ನು ಆರಂಭಿಸಿದರು. ಸಾರ್ವಜನಿಕವಾದ ಕಾರ್ಯಾಲಯದ ಮುಖ್ಯ ಉದ್ದೇಶಗಳು ಕೆಳ ಕಂಡಂತೆ ಇವೆ.

1. ಭಾರತೀಯ ತತ್ತ್ವಶಾಸ್ತ್ರದ ಪ್ರಚಾರದ ಮೂಲಕ ಅಧ್ಯಾತ್ಮವಿಚಾರದಲ್ಲಿ ಜನ ಸಾಮಾನ್ಯರ ಆಸಕ್ತಿಯನ್ನು ವರ್ಧಿಸುವುದು.
2. ಮೂಢನಂಬಿಕೆಗಳನ್ನು ದೂರಮಾಡುವುದರ ಮೂಲಕ ಆತ್ಮೋನ್ನತಿಗೆ ಬೇಕಾದ ಮಾರ್ಗದರ್ಶನ ಮಾಡುವುದು.
3. ಅಧ್ಯಾತ್ಮವಿಚಾರಪರರ ನಡುವೆ ಪರಸ್ಪರ ವಿಚಾರವಿನಿಮಯಕ್ಕೆ ಅವಕಾಶಗಳನ್ನು ಕಲ್ಪಿಸುವುದು.
4. ದೇಶದ ವಿವಿಧಭಾಗಗಳಲ್ಲಿ ಇಂತಹುದೇ ಕಾರ್ಯಾಲಯಗಳನ್ನು ಸ್ಥಾಪಿಸಿ, ಅವುಗಳ ಮೂಲಕ ಅಧ್ಯಾತ್ಮವಿದ್ಯೆಯ ವಿಶೇಷಪ್ರಚಾರಕ್ಕೆ ಅವಕಾಶವನ್ನು ಕಲ್ಪಿಸುವುದು.

5. ಅಧ್ಯಾತ್ಮವಿದ್ಯೆಯನ್ನು ಕಲಿಯಲು ಆಸಕ್ತರಾದ ವಿದ್ಯಾರ್ಥಿಗಳಿಗೆ ಉಚಿತವಾಗಿ ಅಶನವಸನಾದಿ ವ್ಯವಸ್ಥೆಗಳನ್ನು ಕಲ್ಪಿಸಿ, ಸನಾತನ ವಿದ್ಯೆಯಲ್ಲಿ ಪರಿಣತಿಯನ್ನು ಪಡೆಯಲು ಅವಕಾಶ ಮಾಡಿಕೊಡುವುದು.

ಈ ಉದ್ದೇಶಗಳನ್ನು ಸಫಲಗೊಳಿಸಲು ಕಾರ್ಯಾಲಯದಲ್ಲಿ ನಿಯಮಿತವಾದ ವೇಳಾಪಟ್ಟಿಗೆ ಅನುಸಾರವಾಗಿ ಕಾರ್ಯಕ್ರಮಗಳು ಆರಂಭಗೊಂಡವು. ಬೆಳಿಗ್ಗೆ ಜಿಜ್ಞಾಸುಗಳ ಉಪಕಾರಾರ್ಥವಾಗಿ, ಶಾಂಕರಭಾಷ್ಯಗಳ ಪ್ರವಚನ, ಸಂಜೆ ಸಾಮಾನ್ಯರಿಗಾಗಿ ಭಜನೆ ಕಾರ್ಯಕ್ರಮ, ಆಗಾಗ್ಗೆ ವಿಶೇಷ ಪರಿಣತಿಯುಳ್ಳವರಿಂದ ಉಪನ್ಯಾಸಗಳು ನಡೆಯುತ್ತಿದ್ದವು. ವಿಶೇಷವಾಗಿ ಶಂಕರಾಚಾರ್ಯರ ಪರಮಭಕ್ತರಾದ ರಾಯರು, ಪ್ರತಿ ವೈಶಾಖಮಾಸದಲ್ಲಿ ಶಂಕರರ ಜಯಂತಿಯನ್ನು ಆಯೋಜಿಸಿ, ಶಾಂಕರಸಪ್ತಾಹವನ್ನು ನಡೆಸುತ್ತಿದ್ದರು. ಆಗ ಬೆಳಗಿನಿಂದ ಸಂಜೆಯವರೆಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದರು. ಬೆಳಿಗ್ಗೆ ಏಕಾದಶವಾರ ರುದ್ರಾಭಿಷೇಕ, ನಂತರ ಶಂಕರ ಭಗವತ್ಪಾದರ ಅರ್ಚನೆ, ಗೀತಾಪಾರಾಯಣ, ಸಂಜೆ ಇತಿಹಾಸ ಮತ್ತು ಪುರಾಣಗಳಲ್ಲಿರುವ ಪರಮಭಾಗವತರ ಕಥೆಗಳನ್ನು ಆಧರಿಸಿ, ವಿದ್ವತ್ಪೂರ್ಣವಾದ ಉಪನ್ಯಾಸ ಅಥವಾ ಹರಿಕಥೆಗಳು ಆಯೋಜಿಸಲ್ಪಡುತ್ತಿದ್ದವು. ನಾಡಿನ ಉದ್ದಾಮ ಪಂಡಿತರು ಉತ್ಸಾಹದಿಂದ ಈ ಉತ್ಸವದಲ್ಲಿ ಭಾಗವಹಿಸುತ್ತಿದ್ದರು.

ಸರ್ಕಾರದ ಉದ್ಯೋಗದಿಂದ ನಿವೃತ್ತಿಹೊಂದಿದ ನಂತರ ರಾಯರು ಹೇಮಾವತಿ ನದೀತೀರದ ಶಾಂತ ಪರಿಸರದಲ್ಲಿರುವ ಹೊಳೆನರಸೀಪುರಕ್ಷೇತ್ರದಲ್ಲಿ ವಾಸಿಸಲು ಇಚ್ಛಿಸಿದರು. ಸಾಕಷ್ಟು ಬಳಲಿದ್ದರೂ ವಿಶ್ರಾಂತಿಯನ್ನು ಬಯಸದೆ, ದ್ವಿಗುಣಿತವಾದ ಉತ್ಸಾಹದಿಂದ ಕಾರ್ಯತತ್ಪರರಾದರು. ಇದುವರೆಗೆ ಬೆಂಗಳೂರು ನಗರವು ಅವರ ಕಾರ್ಯಕ್ಷೇತ್ರವಾಗಿತ್ತು. ಈಗಲಾದರೋ ರಾಯರೊಂದಿಗೆ, ಮುದ್ರಣಾಲಯ ಸಹಿತವಾದ ಕಾರ್ಯಾಲಯವು ಬೆಂಗಳೂರು ನಗರದಿಂದ ಹೊಳೆನರಸೀಪುರಕ್ಕೆ ಸ್ಥಾನಾಂತರಗೊಂಡಿತು. ಅಲ್ಲಿ ನೂತನವಾದ ಉತ್ಸಾಹದಿಂದ ರಾಯರು ಬಹ್ವಪೇಕ್ಷಿತವಾದ ಸನಾತನ ವಿದ್ಯಾಪ್ರಚಾರವನ್ನು ಆರಂಭಿಸಿದರು. ಹಿಂದೆ ಹೇಳಿದ ಕಾರ್ಯಕ್ರಮಗಳಲ್ಲದೆ, ಜಿಜ್ಞಾಸುಗಳ ಸೌಲಭ್ಯಕ್ಕಾಗಿ ವಾಚನಾಲಯವೂ ಆರಂಭಗೊಂಡಿತು. ಮಹಾಜನರ ಸೌಕರ್ಯಕ್ಕಾಗಿ ರಾಯರು ಸ್ವಲಿಖಿತ ಪುಸ್ತಕಗಳ ಜೊತೆಗೆ ಅಧ್ಯಾತ್ಮ ಸಂಬಂಧಿಯಾದ ಬೇರೆಯ ಪುಸ್ತಕಗಳನ್ನು ಕೊಂಡು, ವಾಚನಾಲಯವನ್ನು ಸುಸಜ್ಜಿತಗೊಳಿಸಿದರು. ಸದುದ್ದೇಶದಿಂದ ಸ್ಥಾಪಿತವಾದ ಈ ವಾಚನಾಲಯವು ಇಂದಿಗೂ ವಿದ್ಯಾತತ್ಪರರ ಆಶೋತ್ತರಗಳನ್ನು ಪೂರೈಸುತ್ತ ವಿರಾಜಿಸುತ್ತಿದೆ. ಸ್ವಯಂ ರಾಯರೇ

ವಿವಿಧ ಸ್ಥಳಗಳಲ್ಲಿ ಸಂಚರಿಸುತ್ತ, ವಿಚಾರ ಪೂರ್ಣವಾದ ಉಪನ್ಯಾಸಗಳಿಂದ ಜನರನ್ನು ಆನಂದಗೊಳಿಸುತ್ತಿದ್ದರು. ಕ್ರಮವಾಗಿ ಅವರ ಶಿಷ್ಯವರ್ಗವು ಪ್ರವೃದ್ಧಿಯನ್ನು ಹೊಂದಿತು. ಸರಿಯಾದ ಮಾರ್ಗದಲ್ಲಿ ಆರಂಭಿಸಲ್ಪಟ್ಟ ಎಲ್ಲ ಯತ್ನಗಳೂ ಫಲಿಸುತ್ತವೆಯಲ್ಲವೇ? ಮುಂಬಯಿಯ ದಾದರ್ ವಿಭಾಗದಲ್ಲಿಯೂ ಕಾರ್ಯಾಲಯದ ಅಂಗ ಸಂಸ್ಥೆಯು ಉದ್ಭವಿಸಿತು.

ಈ ವರೆಗೆ ಅವರ ಮನೆಯೇ ಎಲ್ಲ ಕಾರ್ಯಕ್ರಮಗಳ ಆವಾಸಭೂಮಿ ಯಾಗಿದ್ದಿತು. ಕಾರ್ಯಾಲಯದ ಕಾರ್ಯವ್ಯಾಪ್ತಿಯ ವಿಸ್ತಾರದಿಂದ ಅವರ ಮನೆಯು ಸಾಲದಾಯಿತು. ಆ ಸಂದರ್ಭದಲ್ಲಿ ದೈವಸಂಕಲ್ಪವಾದ ನ್ಯಾಯಶಾಸ್ತ್ರಜ್ಞರೂ, ನಿಃಸ್ವಾರ್ಥ ಪರರೂ ಆದ ಅರಕಲಗೂಡಿನ ಶ್ರೀಕಂಠಯ್ಯನೆಂಬುವವರು, ರಾಯರ ಕಾರ್ಯ ಗಳಿಂದ ಪ್ರೇರಿತರಾಗಿ, ಕಾರ್ಯಾಲಯಭವನದ ನಿರ್ಮಾಣಾರ್ಥವಾಗಿ ಹೊಳೆನರಸೀ ಪುರದಲ್ಲಿದ್ದ ತಮ್ಮ ನಿವೇಶನವನ್ನು ಸ್ವಸಂತೋಷದಿಂದ ದಾನವಾಗಿ ಕೊಟ್ಟರು. ಕೂಡಲೇ ರಾಯರು ತಮ್ಮ ಗ್ರಾಮವಾದ ಯಲ್ಲಂಬಳಸೆಯಲ್ಲಿದ್ದ ಪಿತ್ರಾರ್ಜಿತವಾದ ಮನೆ ಮುಂತಾದವುಗಳೆಲ್ಲವನ್ನೂ ಮಾರಿ, ಕಾರ್ಯಾಲಯದ ಭವನದ ನಿರ್ಮಾಣವನ್ನು ಆರಂಭಿಸಿದರು. ಶಂಕರರ ದರ್ಶನದ ವಿಷಯದಲ್ಲಿ ಅವರ ನಿಷ್ಠೆ ಎಷ್ಟಿತ್ತೆಂದರೆ, ನಿರ್ಮಾಣದ ಆರಂಭದಿಂದಲೂ ತಮ್ಮ ಮನೆಯನ್ನು ಬಿಟ್ಟು, ಅಪೂರ್ಣವಾದ ಕಾರ್ಯಾಲಯದಲ್ಲಿಯೇ ವಾಸಮಾಡುತ್ತ, ಶೀತೋಷ್ಣವಾತಾವರಣಗಳೆರಡರಲ್ಲಿಯೂ ಸಮದರ್ಶಿಯಾಗಿದ್ದುಕೊಂಡು, ತನು - ಮನ - ಧನಸಮರ್ಪಣಪೂರ್ವಕವಾಗಿ, ಕಾರ್ಯಾಲಯ ಭವನದ ನಿರ್ಮಾಣದಲ್ಲಿ ಸಿದ್ಧಿಯನ್ನು ಪಡೆದರು. ಕ್ರಿ.ಶ. 1945ರ ಶ್ರೀಪಾರ್ಥಿವ ಸಂವತ್ಸರದ ಚೈತ್ರ ಶುದ್ಧ ಪ್ರತಿಪದೆಯ ದಿನ (ಯುಗಾದಿ ಹಬ್ಬ) ಕಾರ್ಯಾಲಯದ ಪ್ರವೇಶೋತ್ಸವ ಸಮಾರಂಭವು ವಿಜೃಂಭಣೆಯಿಂದ ಜರುಗಿತು. ಕ್ರಮವಾಗಿ ದೊರೆತ ರಾಜಾಶ್ರಯದಿಂದ, ಹಾಗೂ ಮಹಾಜನರ ಸಹಕಾರದಿಂದ, ಪ್ರಧಾನಭವನಕ್ಕೆ ಪೂರಕರೂಪವಾಗಿ ವಿದ್ಯಾನಿಲಯ, ಛಾತ್ರಾವಾಸ, ಪುಸ್ತಕಾಲಯ ಮತ್ತು ಮುದ್ರಣಾಲಯಗಳು ನಿರ್ಮಿತವಾದವು. ಭವನವು ಸಿದ್ಧವಾದ ಕೂಡಲೇ, ಅದರ ವಿಶಾಲವಾದ ಪ್ರಾಂಗಣದಲ್ಲಿ ಎಲ್ಲ ಕಾರ್ಯಕ್ರಮಗಳೂ ಅಮಿತೋತ್ಸಾಹದಿಂದ ಆರಂಭಗೊಂಡವು. ಅದರ ಕೀರ್ತಿಯು ಎಲ್ಲ ದಿಕ್ಕುಗಳಲ್ಲಿಯೂ ಹರಡಿತು. ರಾಯರು ಮನೆಯನ್ನು ತ್ಯಜಿಸಿ, ಪೂರ್ಣವಾಗಿ ಕಾರ್ಯಾಲಯದಲ್ಲಿಯೇ ವಾಸಮಾಡಲು ಆರಂಭಿಸಿದರು. ಆಸೇತುಹಿಮಾಚಲಪರ್ಯಂತ ವಿವಿಧ ಪ್ರದೇಶಗಳಿಂದ ಸಾಧುಗಳು,

ಜಿಜ್ಞಾಸುಗಳು ಹಾಗೂ ಪಂಡಿತರು ಬಂದು ಕಾರ್ಯಕ್ರಮಗಳ ಪ್ರಯೋಜನವನ್ನು ಪಡೆಯತೊಡಗಿದರು. ಕ್ರಿ.ಶ. 1953ರಲ್ಲಿ ಹೃಷೀಕೇಶದಿಂದ, ಶ್ರೀಶಂಕರಾನಂದಸರಸ್ವತೀ ಮಹಾಸ್ವಾಮಿಗಳು, ಇಲ್ಲಿಯ ಹಾರ್ದಿಕ ವಾತಾವರಣ, ಮತ್ತು ರಾಯರ ಸಾಧನೆ ಗಳನ್ನು ಕಂಡು ವಿಸ್ಮಿತಾಂತಃಕರಣವುಳ್ಳವರಾಗಿ, ಇಲ್ಲಿಯೇ ಚಾತುರ್ಮಾಸ್ಯವನ್ನು ಪೂರೈಸಿದರು. ಒಂದು ಸಲ ಸಂಚಾರಕ್ರಮದಿಂದ ಶೃಂಗೇರಿ ಪೀಠಾಧೀಶ್ವರರೂ, ಪರಮ ಹಂಸರೂ ಆದ **ಶ್ರೀಶ್ರೀ ಅಭಿನವವಿದ್ಯಾತೀರ್ಥ ಮಹಾಸ್ವಾಮಿಗಳು** ಕಾರ್ಯಾಲಯಕ್ಕೆ ಬಂದು (3-5-62), ಪೂಜ್ಯಪಾದರ **'ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ'** ಗ್ರಂಥವನ್ನು ಕುರಿತು, ಸುದೀರ್ಘವಾದ ಸಂವಾದವನ್ನು ನಡೆಸಿ, ಆ ಅಪೂರ್ವ ಗ್ರಂಥದ ವಿಚಾರ ಧಾರೆಯಿಂದ ಸಂತೋಷಗೊಂಡವರಾಗಿ, ಆ ಗ್ರಂಥದ ಪ್ರಕಟಣೆಗೆ ಎರಡು ನೂರಾ ಐವತ್ತು ರೂಪಾಯಿಗಳ ಧನಸಹಾಯವನ್ನು ಅನುಗ್ರಹಿಸಿದರು.

ಹೊಳೇನರಸೀಪುರದ ಪ್ರಧಾನಕಾರ್ಯಾಲಯವು ಸುಸ್ಥಿರವಾದ ಮೇಲೆ, ಬೆಂಗಳೂರು ನಗರದ ಮಹಾಜನರ ಅಪೇಕ್ಷೆಯ ಮೇರೆಗೆ, ಕ್ರಿ.ಶ. 1959ರಲ್ಲಿ ಅಲ್ಲಿಯ ಶಾಖೆಯು ಪುನರಾರಂಭವಾಯಿತು. ಕ್ರಮವಾಗಿ ಕೋಲಾರ, ಮೈಸೂರು ಮತ್ತೂರು ಮತ್ತು ಆಂಧ್ರಪ್ರದೇಶದ ರಾಯದುರ್ಗದಲ್ಲಿಯೂ ಶಾಖೆಗಳು ಪ್ರಾರಂಭವಾದವು. ಇಂದಿಗೂ ಈ ಶಾಖೆಗಳು ಶ್ರೀಗಳವರ ಉದ್ದೇಶಕ್ಕೆ ಅನುಸಾರವಾಗಿ ಅಧ್ಯಾತ್ಮವಿದ್ಯಾ ಪ್ರಚಾರವನ್ನು ಮಾಡುತ್ತಿದೆ. ಶ್ರೀಗಳವರ ಶಿಷ್ಯರೇ ಕಾರ್ಯಾಲಯದ ಶಾಖೆಗಳ ವ್ಯವಸ್ಥಾಪಕರಾಗಿರುತ್ತಾರೆ. ಕಲ್ಯಾಣಕಾರಿಗಳು ಎಂದಿಗೂ ದುರ್ಗತಿಯನ್ನು ಹೊಂದು ವುದಿಲ್ಲವೆಂಬುದಕ್ಕೆ ಇದಕ್ಕಿಂತ ನಿದರ್ಶನವು ಬೇಕಾಗುವುದೇ!

* * * * *

# ಅಧ್ಯಾಯ - 14

# ಸಂನ್ಯಾಸಿಗಳಾಗಿ ಶ್ರೀಗಳವರು

ಸನಾತನ ಭಾರತೀಯ ಧರ್ಮಕ್ಕೆ ಅನುಸಾರವಾಗಿ, ನಾಲ್ಕು ವರ್ಣಗಳಿರುವಂತೆ, ನಾಲ್ಕು ಆಶ್ರಮಗಳೂ ಇವೆ. ಈ ಆಶ್ರಮಗಳ ಕ್ರಮವಾದ ಅನುಸರಣೆಯು ಅಭ್ಯುದಯಹೇತುವೆಂದು ನಮ್ಮ ಪೂರ್ವಜರು ಭಾವಿಸುತ್ತಿದ್ದರು. ಬ್ರಹ್ಮಚರ್ಯದಲ್ಲಿ ವಿದ್ಯೆಯನ್ನು ಅಧ್ಯಯನ ಮಾಡಿ, ಗೃಹಸ್ಥಾಶ್ರಮವನ್ನು ಪ್ರವೇಶಿಸ ಬೇಕು. ಗೃಹಸ್ಥಾಶ್ರಮದಲ್ಲಿ ಪುತ್ರರನ್ನು ಪಡೆದು, ಋಣತ್ರಯವನ್ನು ಪರಿಹರಿಸಿಕೊಂಡು, ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಬೇಕು. ಅಂತ್ಯದಲ್ಲಿ ಮನವು ಮೋಕ್ಷದಲ್ಲಿ ಸ್ಥಿರಗೊಳ್ಳಬೇಕು. ಇದು ಧರ್ಮಶಾಸ್ತ್ರದ ನಿಯಮ. ಯಾರಾದರೂ ಜನ್ಮತಃ ವಿರಕ್ತರಾದರೆ ಅವರಿಗೆ ಬ್ರಹ್ಮಚರ್ಯಾಶ್ರಮದಿಂದಲೇ ತುರೀಯಾಶ್ರಮಪ್ರವೇಶಕ್ಕೆ ಅವಕಾಶವಿದ್ದಿತು. ಶಂಕರ ಭಗವತ್ಪಾದರು ಹೀಗೆ ಬ್ರಹ್ಮಚರ್ಯದಿಂದಲೇ ಸಂನ್ಯಾಸವನ್ನು ಪ್ರವೇಶ ಮಾಡಿದರು.

ದಯಾನಂದ ಸರಸ್ವತಿಗಳ ಪ್ರಕಾರ ಯಾವುದರಲ್ಲಿ ಸರಿಯಾದ ನಿಯಮಗಳು ಪರಿಗಣಿಸಲ್ಪಡಬೇಕೋ ದುಃಖ ಮತ್ತು ಕರ್ಮಗಳನ್ನು ಯಾವ ಆಶ್ರಮವು ದೂರ ವಿಡುತ್ತದೆಯೋ ಅದು ಸಂನ್ಯಾಸವೆನಿಸುತ್ತದೆ. ಬ್ರಹ್ಮಜ್ಞಾನಸಾಧನೆಗಾಗಿ ಸಂನ್ಯಾಸವೇ ಪರಮೋಪಾಯವೆಂದು ಬಹಳ ಜನರ ಅಭಿಪ್ರಾಯವಿದೆ. **ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾತ್ (ಮುಂ. 2-12)** ಎಂಬ ಉಪನಿಷತ್ತಿನ ವಾಕ್ಯದ ಪ್ರಕಾರ, ಕರ್ಮದ ಮೂಲಕ ಬ್ರಹ್ಮಜ್ಞಾನಪ್ರಾಪ್ತಿಯು ಅಸಂಭವವೆಂದು ಸ್ಪಷ್ಟವಾಗುತ್ತದೆ. ವೇದಾಂತವಿಜ್ಞಾನಸುನಿಶ್ಚಿತಾರ್ಥರಾದ ಮತ್ತು ಶುದ್ಧಸತ್ವರಾದ ಯತಿಗಳೇ ಮೋಕ್ಷಕ್ಕೆ ಅರ್ಹರಾಗಿರುತ್ತಾರೆ. ಅವರು ಏಷಣಾತ್ರಯದಿಂದ ವಿಮುಕ್ತರಾಗಿ ಭಿಕ್ಷೆಯಿಂದ ಜೀವಿಸುತ್ತಾರೆ. ಉಳಿದ ಆಶ್ರಮಗಳಿಗೆ ಹೋಲಿಸಿದರೆ ತುರೀಯಾಶ್ರಮದಲ್ಲಿ ಮನಸ್ಸಿನ ಸ್ಥಿರೀಕರಣವು ಸುಲಭಸಾಧ್ಯವಾಗಿರುತ್ತದೆ. ಬ್ರಹ್ಮಚರ್ಯದಲ್ಲಿ, ವಟುಗಳು ವಿದ್ಯಾರ್ಜನೆಯಲ್ಲಿ ವ್ಯಗ್ರರಾಗಿರುತ್ತಾರೆ. ಗೃಹಸ್ಥರಿಗೆ ಮನೆಯ ಜವಾಬ್ದಾರಿಯು ಅಗಾಧವಾಗಿರುತ್ತದೆ. ವಾನಪ್ರಸ್ಥದಲ್ಲಿಯೂ ಉಪವಾಸ, ವ್ರತಾಚರಣೆ ಮುಂತಾದ ಅನುಷ್ಠಾನಗಳು ಹೇರಳವಾಗಿರುತ್ತವೆ. ಸಂನ್ಯಾಸಾಶ್ರಮದಲ್ಲಿ ಮಾತ್ರ ಎಲ್ಲ

ಕರ್ಮಗಳನ್ನೂ ತ್ಯಜಿಸಿ, ಬ್ರಹ್ಮದಲ್ಲಿ ಮನಸ್ಸನ್ನು ಸ್ಥಿರೀಕರಿಸಲು ವಿಪುಲವಾದ ಅವಕಾಶ ಗಳಿರುತ್ತವೆ. ಸರ್ವಸಂಗಪರಿತ್ಯಾಗಿಯಾದ ಪುರುಷನು ಕ್ರಮವಾಗಿ ಸರ್ವ ದ್ವಂದ್ವಗಳಿಂದ ವಿಮುಕ್ತನಾಗಿ, ಕೊನೆಗೆ ಬ್ರಹ್ಮಜ್ಞಾನಿಯೆನಿಸುತ್ತಾನೆ.

## ಸಂನ್ಯಾಸದ ಪ್ರಕಾರಗಳು

ಸಂನ್ಯಾಸವನ್ನು ತಿಳಿದವರು ಎರಡು ವಿಧವಾಗಿ ಪರಿಗಣಿಸುತ್ತಾರೆ. ಯಾವ ಸಂನ್ಯಾಸದಲ್ಲಿ ಇಹ ಮತ್ತು ಪರಲೋಕಗಳ ಫಲದಲ್ಲಿ ವಿರಾಗವಿದ್ದರೂ, ಆತ್ಮಾನಾತ್ಮ ವಿವೇಕವು ಪರಿಪಕ್ವದಶೆಯನ್ನು ಮುಟ್ಟಿರುವುದಿಲ್ಲವೋ, ಅದು, ವಿವಿದಿಷಾ ಸಂನ್ಯಾಸ ವೆಂದು ಹೇಳಲ್ಪಡುತ್ತದೆ. ಈ ಸಂನ್ಯಾಸದಲ್ಲಿ, ಯೋಗಿಯು ಸಮಾಧಿಯೇ ಮುಂತಾದ ಜ್ಞಾನ ಸಾಧನಗಳ ಮೂಲಕ, ಬ್ರಹ್ಮಾತ್ಮೈಕ್ಯಪ್ರಾಪ್ತಿಗಾಗಿ ಪ್ರಯತ್ನಶೀಲನಾಗಿರುತ್ತಾನೆ. ಇನ್ನೊಂದು ಬಗೆಯದಾದ, **'ವಿದ್ವತ್ಸಂನ್ಯಾಸ'**ದಲ್ಲಿ ಪುರುಷನು ಅನನ್ಯವ್ಯಾಪಾರ ರೂಪ ವಾದ ಬ್ರಹ್ಮನಿಷ್ಠೆಯನ್ನು ಪಡೆದಿರುತ್ತಾನೆ. ಇದನ್ನೇ ಪರಮಹಂಸಪಾರಿವ್ರಾಜ್ಯ ಎಂದೂ ಹೇಳುತ್ತಾರೆ.

ಈ ವಿಷಯಗಳನ್ನು ಕೂಲಂಕಷವಾಗಿ ವಿವೇಚಿಸಿದ ರಾಯರು, ಋಣ ತ್ರಯದ ಜೊತೆಗೆ ನಾಲ್ಕನೆಯದಾದ ಸಮಾಜದ ಋಣವನ್ನು ಪರಿಹರಿಸಿಕೊಂಡು, ಕೃತಕೃತ್ಯರಾಗಿ, ಕೊನೆಯಲ್ಲಿ ಸಂನ್ಯಾಸಯೋಗದಿಂದ ಬ್ರಹ್ಮೈಕ್ಯರಾಗಲು ಮನಸ್ಸು ಮಾಡಿದರು. ವೈರಾಗ್ಯದ ಚರಮಸೀಮೆಯನ್ನು ಹೊಂದಲು, ಕ್ರಮವಾಗಿ ಅರ್ಹತೆ ಯನ್ನು ಸಂಪಾದಿಸಲು ಇಚ್ಛಿಸಿದರು. ದೈನಂದಿನ ನಿತ್ಯನೈಮಿತ್ತಿಕಕಾರ್ಯಗಳಲ್ಲಿ, ನಿಯಮ ಪರರಾಗಿದ್ದುಕೊಂಡು ಆಗಾಗ್ಗೆ ಸಂನ್ಯಾಸಿಗಳ ಸಮಾಗಮದ ಮೂಲಕ, ಪರಮಾರ್ಥ ಸೋಪಾನಾರೋಹಣಕ್ರಮವನ್ನು ಅರಿತರು. ಅನಂತರ ಪರಮಹಂಸಪಾರಿವ್ರಾಜ್ಯಪದ ವನ್ನು ಹೊಂದಲು, ತುರೀಯಾಶ್ರಮವನ್ನು ಪ್ರವೇಶಿಸಲು ನಿಶ್ಚಯಿಸಿದರು.

## ಸುಬ್ಬರಾಯಶರ್ಮರ ತುರೀಯಾಶ್ರಮಪ್ರವೇಶ

ಬಾಲ್ಯದಿಂದಲೇ ವೇದಾಂತವನ್ನು ಜೀವನಸರ್ವಸ್ವವಾಗಿ ಭಾವಿಸಿದ ರಾಯರು, ಸ್ವಭಾವತಃ ನಿಯಮಪರರೂ, ವೈರಾಗ್ಯಮೂರ್ತಿಗಳೂ ಆಗಿದ್ದರು. ನಿರಂತರವಾದ ಕಾರ್ಯಕ್ರಮಗಳ ನಡುವೆಯೂ ಸಂಧ್ಯಾವಂದನೆ ಅತಿಥಿಅಭ್ಯಾಗತರ ಪರಿಚರ್ಯೆ ಅಧ್ಯಯನ ಅಧ್ಯಾಪನ ಮತ್ತು ದೇವತಾರ್ಚನೆಗಳನ್ನು ಎಂದಿಗೂ ಮರೆಯುತ್ತಿರಲಿಲ್ಲ. ಬೆಟಗೇರಿ ಕೃಷ್ಣಶಾಸ್ತ್ರಿಗಳಂತಹ ಆಚಾರನಿಷ್ಠರ ಪರಿಚಯದಿಂದ ರಾಯರ ಧರ್ಮ

ಶ್ರದ್ಧೆಯು ವರ್ಧಿಸಿತು. ಭಾಷ್ಯಶಾಂತಿಯ ಸಮಯದಲ್ಲಿ ಕಾಲಟಿಗೆ ಪ್ರಯಾಣ ಮಾಡುತ್ತಿರುವಾಗ ಶಾಸ್ತ್ರಿಗಳು ಉಭಯ ಸಂಧ್ಯಾಕಾಲಗಳಲ್ಲಿ ರೈಲುಬಂಡಿಯು ಎಲ್ಲಿ ನಿಲ್ಲುತ್ತದೆಂಬ ವಿಷಯವನ್ನು ಸಂಗ್ರಹಿಸಿದ್ದರು. ಇದು ಸ್ನಾನಾಹ್ನೀಕಕರ್ಮಗಳಿಗೆ ಅನುಕೂಲವಾಗಲೆಂದೇ ಹೊರತು, ಅನ್ಯರಂತೆ ಭೋಜನಾದಿಗಳ ಚಿಂತೆಯಿಂದಲ್ಲ. ಕಾಲಟೀಗ್ರಾಮದಲ್ಲಿ ರಾಯರು ಶೃಂಗೇರಿಯ ಪೀಠಾಧೀಶ್ವರರಿಂದ ಭಾಷ್ಯಶಾಂತಿಯ ಜೊತೆಯಲ್ಲಿ ಪಂಚಾಕ್ಷರೀ ಮಂತ್ರೋಪದೇಶವನ್ನೂ ಪಡೆದರು. ಅಂದಿನಿಂದ ಬೆಳಿಗ್ಗೆ ಸ್ನಾನ, ಆಹ್ನೀಕ, ಪೂಜೆ, ಪಾರಾಯಣ, ಮತ್ತು ಮಂತ್ರಜಪಗಳನ್ನು ಶ್ರದ್ಧೆಯಿಂದ ನೆರವೇರಿಸುತ್ತಿದ್ದರು. ಸಣ್ಣ ಹರಿಹರೇಶ್ವರನ ದರ್ಶನವನ್ನು ಪಡೆದು, ಸ್ತೋತ್ರ ಪಠಣ ವನ್ನು ಕೈಗೊಳ್ಳುತ್ತಿದ್ದರು. ಭಕ್ತಿಯೇ ಮುಕ್ತಿಯ ಉಪಾಯಗಳಲ್ಲಿ ಶ್ರೇಷ್ಠವಾದು ದೆಂಬುದು ಅವರ ನಂಬುಗೆಯಾಗಿತ್ತು.

ಕೋಲಾರ ವಿಭಾಗದ, ಆವನಿ ಮಠದಲ್ಲಿ ಉತ್ತರಾಧಿಕಾರಿಗಳನ್ನು ನಿಯೋಜಿ ಸುವ ಸಂದರ್ಭದಲ್ಲಿ, ಕೃಷ್ಣಸ್ವಾಮಿಅಯ್ಯರ್‌ರು ಸುಬ್ಬರಾಯರ ಹೆಸರನ್ನು ಸೂಚಿಸಿದ್ದರು. ಮಠದ ಅಧಿಪತ್ಯದ ಬಗ್ಗೆ ಆಸಕ್ತಿಯಿಲ್ಲದಿದ್ದರೂ, ರಾಯರು ಸಂನ್ಯಾಸದೀಕ್ಷೆಯನ್ನು ಗಮನಿಸಿ, ತುರೀಯಾಶ್ರಮಪ್ರವೇಶಕ್ಕೆ ಇದೊಂದು ಅಪೂರ್ವವಾದ ಅವಕಾಶವೆಂದು ತಿಳಿದು ತಮ್ಮ ಒಪ್ಪಿಗೆಯನ್ನಿತ್ತಿದ್ದರು. ಆದರೆ ಆ ಮಠದಲ್ಲಿ ಬ್ರಹ್ಮಚಾರಿಗಳೇ ಉತ್ತರಾಧಿ ಕಾರಿಗಳಾಗಬೇಕೆಂಬ ನಿಯಮವಿದ್ದುದಾಗಿ ತಿಳಿದು ಬಂದಿತು. ಆದುದರಿಂದ ರಾಯರ ತುರೀಯಾಶ್ರಮಪ್ರವೇಶದ ನಿರ್ಧಾರವು ಆಗ ಸಫಲವಾಗಲಿಲ್ಲ. ಆಗ ರಾಯರಿನ್ನೂ ಸರ್ಕಾರದ ಕೆಲಸದಿಂದ ನಿವೃತ್ತರೂ ಆಗಿರಲಿಲ್ಲ. (1931)

ಉದ್ಯೋಗದಿಂದ ನಿವೃತ್ತರಾದ ಮೇಲೆ ರಾಯರು, ಹೊಳೆನರಸೀಪುರದಲ್ಲಿ ತಮ್ಮ ವಾಸವನ್ನು ಆರಂಭಿಸಿ, ವೇದಾಂತ ಕೈಂಕರ್ಯವನ್ನು ದ್ವಿಗುಣಗೊಳಿಸಿದರು. ಸರ್ಕಾರದಿಂದ ದೊರೆತ ಮೂರುವರ್ಷಗಳ ವೃತ್ತಿವಿಸ್ತರಣೆಯನ್ನು ಅಪೇಕ್ಷಿಸದೇ ಸಂಪೂರ್ಣಸಮಯವನ್ನು ವೇದಾಂತದ ಪ್ರಚಾರಕಾರ್ಯಕ್ಕಾಗಿ ವಿನಿಯೋಗಿಸಲು ಇಚ್ಛಿಸಿದರು. ದೈವಕೃಪೆಯಿಂದ ಪ್ರಾಪ್ತವಾದ ರಾಜಾಶ್ರಯದಿಂದ ಅವರ ಕಾರ್ಯ ವ್ಯಾಪ್ತಿಯು ವಿಸ್ತಾರವಾಯಿತು. ಪ್ರಸ್ಥಾನತ್ರಯಭಾಷ್ಯಗಳ ಅನುವಾದ, ಅವುಗಳನ್ನು ಸಮಯಕ್ಕೆ ಸರಿಯಾಗಿ ತಮ್ಮ ಮುದ್ರಣಾಲಯದಲ್ಲಿಯೇ ಪ್ರಕಟಿಸಿ ಮಹಾರಾಜರ ಸನ್ನಿಧಿಗೆ ಸಮರ್ಪಿಸುವುದು ದೈನಂದಿನ ಅಧ್ಯಾಪನ ಮತ್ತು ಪ್ರವಚನಗಳು, ಕಾರ್ಯಾಲಯ ಭವನದ ನಿರ್ಮಾಣ ಕಾರ್ಯ, ಮುಂತಾದ ಕಾರ್ಯ ಬಾಹುಲ್ಯದ

ಮಧ್ಯೆ ಸ್ವಲ್ಪಕಾಲ ಅವರಿಗೆ ತಮ್ಮ ವಿಚಾರವನ್ನು ಆಲೋಚಿಸಲು ಅವಕಾಶವಿರಲಿಲ್ಲ, ಪರಹಿತದಲ್ಲಿ ನಿರತರಾದವರಿಗೆ ಸ್ವಂತ ವಿಷಯಗಳಲ್ಲಿ ಆದರವಿರುವುದಿಲ್ಲವಲ್ಲವೇ? ಕ್ರಮವಾಗಿ ಮಹಾಜನರ ಸಹಕಾರದಿಂದ ಮತ್ತು ಸ್ವಂತ ಪರಿಶ್ರಮದಿಂದ ಕಾರ್ಯಾಲಯವು ಉನ್ನತಿಯನ್ನು ಪಡೆಯಿತು. ಈ ರೀತಿಯ ಸದುದ್ದೇಶದಿಂದ ಸ್ಥಾಪಿತವಾದ ಈ ಅಧ್ಯಾತ್ಮ ರೂಪಿಯಾದ ವೃಕ್ಷವು ಪೂರ್ಣ ಪ್ರಮಾಣದಿಂದ ವಿಕಸಿತ ವಾಗಿ ಫಲಪುಷ್ಪಭರಿತವಾಯಿತು. ಅದರ ಸಾರ್ಥಕತೆಯನ್ನು ವೀಕ್ಷಿಸಿ, ಕೌಟುಂಬಿಕ ಭಾರವನ್ನು ಯಥೋಚಿತವಾಗಿ ನಿರ್ವಹಿಸಿ ಕಾರ್ಯಾಲಯದ ಕಾರ್ಯನಿರ್ವಹಣೆಗೆ ದಕ್ಷಜನೋಪೇತವಾದ ಕಾರ್ಯಸಮಿತಿಯನ್ನು ರಚಿಸಿ ಸಂನ್ಯಾಸವನ್ನು ಸ್ವೀಕರಿಸಲು ರಾಯರು ನಿರ್ಧರಿಸಿದರು. ವಸ್ತುತಃ ಅದುವರೆಗೂ ಅವರು ಕಾಷಾಯವಸ್ತ್ರವೊಂದ ನ್ನುಳಿದು ಇನ್ನೆಲ್ಲ ವಿಧಗಳಿಂದಲೂ ಸಂನ್ಯಾಸಿಗಳೇ ಆಗಿದ್ದರು. ಸಾಂಪ್ರದಾಯಿಕ ರೀತಿ ಯಿಂದ, ಸರ್ವಧಾರೀ ಸಂವತ್ಸರದ ಜ್ಯೇಷ್ಠ ಶುಕ್ಲ ತದಿಗೆಯ ದಿನ, ಅವರು ಪಾರಿವ್ರಾಜ್ಯವನ್ನು ಅಂಗೀಕರಿಸಿದರು. (10-6-1948) ಸಿದ್ಧರು ಸ್ವಾಧೀನಕುಶಲ ರಹುದಲ್ಲವೇ?

ತುರೀಯಾಶ್ರಮಸ್ವೀಕಾರದ ಸಾಂಗತಾಸಿದ್ಧ್ಯರ್ಥವಾಗಿ ಗುರುಸ್ಥಾನದಲ್ಲಿ ನಿಂತು ಯೋಗಪಟ್ಟವನ್ನು ಅನುಗ್ರಹಿಸಲು, ಯೋಗ್ಯರಾದ ವ್ಯಕ್ತಿಯ ಅವಶ್ಯಕತೆ ಇತ್ತು. ಈ ವಿಷಯದಲ್ಲಿ ರಾಯರ ಶಿಷ್ಯವರ್ಯರಾದ ಸುಬ್ಬರಾಯ ಅವಧಾನಿಗಳು ತಮ್ಮ ಯೋಗದಾನವನ್ನು ನೀಡಿದರು. ಅವರ ಸ್ವಗ್ರಾಮವಾದ ಮತ್ತೂರಿನಲ್ಲಿ ಆಗ "**ಬೋಧಾನಂದಸರಸ್ವತೀ**" ಎಂಬ ಸ್ವಾಮಿಗಳು ಸ್ವಯಿಚ್ಛೆಯಿಂದ ವಾಸಮಾಡುತ್ತಿದ್ದರು. ಸುಬ್ಬ ರಾಯರ ಪ್ರಾರ್ಥನೆಯನ್ನು ಅಂಗೀಕರಿಸಿ, ಅವರು ಹೊಳೆನರಸೀಪುರಕ್ಕೆ ಬಂದು, ರಾಯರಿಗೆ ಮಹಾವಾಕ್ಯೋಪದೇಶಪೂರ್ವಕವಾಗಿ, ಸಚ್ಚಿದಾನಂದೇಂದ್ರಸರಸ್ವತಿ ಎಂದು ಯೋಗಪಟ್ಟವನ್ನು ಅನುಗ್ರಹಿಸಿದರು. ಈ ಸಮಾರಂಭಕ್ಕೆ ಮೈಸೂರು ನಗರದಿಂದ ವೇದ ರತ್ನಂ ವೆಂಕಟರಾಮಅವಧಾನಿಗಳು, ವೇ॥ಬ್ರ॥ಧಾಳಿನರಸಿಂಹಭಟ್ಟರು ಆಗಮಿಸಿದ್ದರು.

ಪೂಜ್ಯಪಾದರು ಹೇಮಾವತೀನದಿಯ ಜಲಮಧ್ಯದಲ್ಲಿ ಶಿಖಾಯಜ್ಞೋಪವೀತ ಗಳನ್ನು ವಿಸರ್ಜಿಸಿ, ತುರೀಯಾಶ್ರಮವನ್ನು ಪ್ರವೇಶಿಸಿದರು.

## ಆಶ್ರಮನಿಯಮ ಪರಿಪಾಲನೆ

ಪೂಜ್ಯಪಾದರು ಯತ್ಯಾಶ್ರಮಧರ್ಮಗಳನ್ನು ಚಾಚೂ ತಪ್ಪದೆ ಪರಿ ಪಾಲಿಸುತ್ತಿದ್ದರು. ಪರಿಣತವಯಸ್ಸಿನಲ್ಲಿಯೂ ಅವರು ಈ ಆಶ್ರಮದ ಕಠಿನನಿಯಮ

ಗಳನ್ನು ಸಾಂಗೋಪಾಂಗವಾಗಿ ಆಚರಿಸುತ್ತಿದ್ದರು. ಶ್ರೇಷ್ಠರು ಏನನ್ನು ಆಚರಿಸುತ್ತಾರೆಯೋ, ಅಂತೆಯೇ ಉಳಿದವರು ಅನುಸರಿಸುತ್ತಾರೆ. ಲೋಕವು ಗತಾನುಗತಿಕವೇ ಹೊರತು ಪಾರಮಾರ್ಥಿಕವಲ್ಲ, ಆದ್ದರಿಂದ ಮೊದಲು ಬೋಧಕರು ಆಚಾರ ಧರ್ಮಗಳನ್ನು ಪಾಲಿಸಬೇಕೆಂಬುದು ಅಭಿಪ್ರಾಯವಾಗಿತ್ತು. ಅವರು ಯಾತ್ರೆಯ ಸಮಯದಲ್ಲಿ ದಿನಪೂರ್ತಿ ನಿರಾಹಾರದಿಂದ ಪ್ರಯಾಣ ಮಾಡಿ, ತಲುಪುವ ಸ್ಥಳವನ್ನು ಹೊಂದಿ ಸ್ನಾನಾದಿಗಳನ್ನು ಮಾಡಿದ ನಂತರವೇ ಭಿಕ್ಷೆಯನ್ನು ಸ್ವೀಕರಿಸುತ್ತಿದ್ದರು. ಶೀತಕಾಲದಲ್ಲೂ ಕೃಷ್ಣಾಜಿನವೇ ಅವರ ಹಾಸಿಗೆಯಾಗಿತ್ತು. ಹೀಗೆ ಶ್ರೀಗಳವರು ಕಾಯ ವಾಚಾ ಮತ್ತು ಮನಸ್ಸಿನಿಂದ ಸಂನ್ಯಾಸಿಗಳಾಗಿ ವೇದಾಂತಸೇವೆಯನ್ನು ಮಾಡಿದರು. ಸಂನ್ಯಾಸವನ್ನು ಸ್ವೀಕರಿಸಿದ ನಂತರ. 'ಸುಬ್ಬರಾಯರು' ಎಂದು ಹಸ್ತಾಕ್ಷರವನ್ನು ಮಾಡಲು ಇಷ್ಟವಿಲ್ಲದೆ, ಅವರು ವಿಶ್ರಾಂತಿವೇತನವನ್ನು ನಿರಾಕರಿಸಿದರು. ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಮಸ್ತ ಅಧಿಕಾರವನ್ನೂ ಶಿಷ್ಯರಿಗೆ ಬಿಟ್ಟುಕೊಟ್ಟು, ಕೇವಲ ವೇದಾಂತಪ್ರವಚನ ಮತ್ತು ಗ್ರಂಥರಚನೆಗಳನ್ನು ಲೋಕಹಿತಕ್ಕಾಗಿ ಮಾಡುತ್ತಿದ್ದರು. ಲೌಕಿಕವ್ಯಾಪಾರದಿಂದ ವಿಮುಖ ರಾದ ಮೇಲೆ, ಉಳಿದ ವಿರಾಮಸಮಯವನ್ನೆಲ್ಲ ಶಾಂಕರಸಿದ್ಧಾಂತದ ಪ್ರಚಾರ ಕಾರ್ಯಕ್ಕಾಗಿಯೇ ಮೀಸಲಾಗಿಟ್ಟರು. ಅದಕ್ಕಾಗಿ ಹಿಮಾಲಯದಿಂದ ಕನ್ಯಾಕುಮಾರಿ ಯವರೆಗೆ ಸಂಚರಿಸಿ, ವೇದಾಂತವಿದ್ಯೆಯ ವಿಶೇಷ ಪ್ರಚಾರವನ್ನು ಕೈಗೊಂಡರು. ಪ್ರಸಿದ್ಧಿ ಪೀಠಾಧೀಶ್ವರರ ಜೊತೆ ಮತ್ತು ಸಂನ್ಯಾಸಿಗಳೊಂದಿಗೆ ಸೇರಿ, ವೇದಾಂತದ ವಿಷಯಗಳನ್ನು ಸುದೃಢವನ್ನಾಗಿ ಮಾಡಲು ಯತ್ನಿಸಿದರು. ಗುಜರಾತ್ ಪ್ರಾಂತ್ಯದ 'ವಲಾದ್' ಎಂಬ ಪ್ರದೇಶದಲ್ಲಿ ಒಂದು ವೇದಾಂತಾಶ್ರಮವಿದೆ. ಅಲ್ಲಿ ಸ್ವಾಮಿ ಮಾಧವತೀರ್ಥರೆಂಬ ಸುಪ್ರಸಿದ್ಧರಾದ ಯೋಗೀಶ್ವರರಿದ್ದರು. ಪೂಜ್ಯಪಾದರು ಅಲ್ಲಿಗೆ ಹೋಗಿ, ತಮ್ಮ ಮೂಲಾವಿದ್ಯಾನಿರಾಸ ಎಂಬ ಗ್ರಂಥದ ವಿಷಯವನ್ನು ಚರ್ಚಿಸಿದರು. ಇದರಿಂದಾಗಿ, ಗುಜರಾತ್ ರಾಜ್ಯದಲ್ಲಿಯೂ, ಪೂಜ್ಯಪಾದರ ಸಂಶೋಧನೆಗಳ ಪ್ರಸಾರವು ನಡೆಯಿತು.

ಶ್ರೀಚರಣರಿಗೆ ಶಾಂಕರವೇದಾಂತವೇ ಸರ್ವಸ್ವವಾಗಿತ್ತು. ಆಚಾರ್ಯರ ವೇದಾಂತ ಸಂಪ್ರದಾಯವು, ಅವರ ಪರಮಗುರುಗಳಾದ ಶ್ರೀಗೌಡಪಾದಾಚಾರ್ಯರ ಪರಂಪರೆ ಯಿಂದ ಬಂದುದೆಂದು, ಆ ವಿಷಯದಲ್ಲಿ ಶ್ರೀಗಳಿಗೆ ಬಹಳ ಆದರವಿದ್ದಿತು. ಗೌಡಪಾದರ, **'ಮಾಂಡೂಕ್ಯಕಾರಿಕೆ'**ಯನ್ನು ಕುರಿತು, ಪೂಜ್ಯಪಾದರು, **'ಮಾಂಡೂಕ್ಯ ರಹಸ್ಯವಿವೃತಿಃ'** ಎಂಬ ಹೆಸರಿನ ವಿವೇಚನಾತ್ಮಕಕೃತಿಯನ್ನು ರಚಿಸಿದರು. ಓಂಕಾರ ಕ್ಷೇತ್ರವು ಗೌಡಪಾದರ ಸ್ಥಾನವೆಂದು ಪ್ರಸಿದ್ಧವಾಗಿದೆ. ಶ್ರೀಗಳವರು ತಮ್ಮ ಕೃತಿಯನ್ನು

ಈ ಪುಣ್ಯಕ್ಷೇತ್ರದಲ್ಲಿ ಪ್ರವಚನ ಮಾಡಿ, ಆಚಾರ್ಯರ ಪಾದಗಳಿಗೆ ಕೃತಜ್ಞತಾ ಪೂರ್ವಕವಾಗಿ ಅರ್ಪಿಸಬೇಕೆಂದು ಮನಸ್ಸಿನಲ್ಲಿ ನಿರ್ಧರಿಸಿದ್ದರು. ಅಂತೆಯೇ ತೀರ್ಥಯಾತ್ರೆಯ ನೆಪದಿಂದ ಅಲ್ಲಿಗೆ ಹೋಗಿ ಆ ಕರ್ತವ್ಯವನ್ನು ನೆರವೇರಿಸಿದರು. ಅದೇ ಸಂದರ್ಭದಲ್ಲಿ ದ್ವಾರಕಾಪೀಠಾಧೀಶ್ವರರಾದ ಶ್ರೀ ಸಚ್ಚಿದಾನಂದತೀರ್ಥ ಮಹಾ ಸ್ವಾಮಿಗಳೊಂದಿಗೆ ಸಂವಾದ ನಡೆಸುವ ಅವಕಾಶವೊದಗಿತು. ಅವರು ಈ ಗ್ರಂಥವನ್ನು ಪರಿಶೀಲಿಸಿ, ಸಂತೋಷಗೊಂಡವರಾಗಿ, ಅದರ ಪ್ರಕಟನೆಗೆ ದ್ರವ್ಯಸಹಾಯವನ್ನು ನೀಡಿದರು. ಕಾಂಚೀ ಕಾಮಕೋಟಿ ಪೀಠಾಧೀಶ್ವರರೂ ಕೂಡ ಈ ಗ್ರಂಥವನ್ನು ಓದಿ, ವಿಚಾರವಿನಿಯಮದಿಂದ ಸಂತುಷ್ಟರಾಗಿ, ಪೂಜ್ಯಪಾದರನ್ನು **ಆಸುಪ್ತೇಃ ಆಮೃತೇಃ ಕಾಲಂ ನಯೇದ್ವೇದಾಂತಚಿಂತಯಾ** ಎಂಬ ಉಕ್ತಿಯ ಸಾಕಾರಮೂರ್ತಿಯೆಂದು ಪ್ರಶಂಸೆ ಮಾಡಿರುತ್ತಾರೆ. ಶ್ರೀಗಳವರು ವೇದಾಂತವನ್ನು ಬಿಟ್ಟು ಬೇರೆನನ್ನೂ ಮನಸ್ಸಿನಲ್ಲಿಯೂ ಚಿಂತನೆಮಾಡುತ್ತಿರಲಿಲ್ಲ. ವೇದಾಂತಕ್ಕಾಗಿ ಎಷ್ಟು ಕೆಲಸ ಮಾಡಿದರೂ ಅವರಿಗೆ ತೃಪ್ತಿಯಿರುತ್ತಿರಲಿಲ್ಲ. ತಮಗೆ ಒಪ್ಪಿಗೆಯಾದ ಸಿದ್ಧಾಂತವನ್ನು ಪಂಡಿತರು ಯಾವ ರೀತಿಯಲ್ಲಿ ಸ್ವೀಕರಿಸುತ್ತಾರೆಂಬುದನ್ನು ಕಂಡುಕೊಳ್ಳಲು ಅವರು ದೇಶ ಸಂಚಾರವನ್ನು ಕೈಗೊಂಡರು. ವಾರಾಣಸಿಯ ಹಿಂದೂ ವಿಶ್ವವಿದ್ಯಾನಿಯಲವು ಸನಾತನ ಸಂಸ್ಕೃತಿಯ ಕೇಂದ್ರಬಿಂದುವಾಗಿತ್ತು. ಅಲ್ಲಿಗೆ ಹೋಗಿ ಪ್ರಾಧ್ಯಾಪಕರುಗಳನ್ನು ಭೇಟಿ ಮಾಡಿ ಆಧುನಿಕರಲ್ಲಿ ಅಧ್ಯಾತ್ಮವಿದ್ಯೆಯ ಆಳವನ್ನು ಕಂಡುಕೊಳ್ಳಬೇಕೆಂದು ಅವರು ಇಚ್ಛಿಸಿದರು. ಅದರಂತೆ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ವೇದಾಂತ ಪ್ರಾಧ್ಯಾಪಕರಾಗಿದ್ದ ಟಿ.ಆರ್.ವಿ.ಶ್ರೀಮೂರ್ತಿಗಳನ್ನು ಶ್ರೀಗಳವರು ಭೇಟಿ ಮಾಡಿದರು. ಅವರೊಂದಿಗೆ ಬಹಳ ವಿಚಾರಗಳನ್ನು ಚರ್ಚಿಸಿದರು. ಶ್ರೀ ಮೂರ್ತಿಯವರು 'ಸೆಂಟ್ರಲ್ ಫಿಲಾಸಫಿ ಆಫ್ ಬುದ್ಧಿಸಮ್' ಎಂಬ ಆಂಗ್ಲ ಭಾಷೆಯ ಕೃತಿಯನ್ನು ರಚಿಸಿದ್ದರು. ಈ ಗ್ರಂಥವು ಸಂಶೋಧನೆಯ ಕೃತಿಯಾಗಿದ್ದು, ಅದರ ಸಲುವಾಗಿ ಪ್ರೊಫೆಸರರಿಗೆ ಡಿ ಲಿಟ್ ಎಂಬ ಉನ್ನತ ಪದವಿಯು ದೊರಕಿತ್ತು. ಈ ಕೃತಿಯಲ್ಲಿ ಪ್ರೊಫೆಸರರು ವೇದಾಂತದ ತತ್ತ್ವಗಳನ್ನೇ ಬೌದ್ಧತತ್ತ್ವಗಳಿಗೆ ಹೋಲಿಸಿದ್ದರು. ಅವುಗಳ ಯುಕ್ತಾಯುಕ್ತತೆಯನ್ನು ಶ್ರೀಗಳವರು ತಮ್ಮ ಮಾಂಡೂಕ್ಯಕಾರಿಕಾಗ್ರಂಥದಲ್ಲಿ ಬಹಳ ಚೆನ್ನಾಗಿ ವಿಮರ್ಶಿಸಿದ್ದಾರೆ.

ಶ್ರೀಗಳವರು ಪ್ರಾಚೀನ ಮತ್ತು ನವೀನ ಪಂಡಿತರುಗಳೆಲ್ಲರಿಂದ ವಿಷಯಗಳನ್ನು ಸಂಗ್ರಹಿಸಿ, ಪಕ್ಷಪಾತವಿಲ್ಲದೆ ತಮ್ಮ ವಾದವನ್ನು ಮಂಡಿಸಿ, ಸಿದ್ಧಾಂತಗಳನ್ನು ರೂಪಿಸುತ್ತಿದ್ದರು. ವೇದಾಂತದ ವಿಚಾರಗಳನ್ನು ಉನ್ನತ ಸ್ತರಕ್ಕೆ ಕೊಂಡೊಯ್ದು,

ವ್ಯಾಪಕರೂಪದಿಂದ ವಿನಿಮಯ ನಡೆಸಲು ಅವಕಾಶ ಕಲ್ಪಿಸುವುದಕ್ಕಾಗಿ ವೇದಾಂತ ವಿಚಾರಗೋಷ್ಠಿಗಳು ಅವಶ್ಯವೆಂದು ಅವರ ಭಾವನೆಯಾಗಿತ್ತು. ಅದಕ್ಕಾಗಿ ಪಂಡಿತರ ಅಭಿಪ್ರಾಯಗಳನ್ನು ಸಂಗ್ರಹಿಸಿ, ಅಖಿಲಭಾರತವ್ಯಾಪ್ತಿಯಲ್ಲಿ ವೇದಾಂತ ವಿಚಾರಗಳನ್ನು ಕ್ರೋಡೀಕರಿಸಿ, ವೇದಾಂತ ವಿದ್ಯದ್ಗೋಷ್ಠಿ ಎಂಬ ಗ್ರಂಥವನ್ನು ಪ್ರಕಟಿಸಿದರು. ಇದರಲ್ಲಿ ಸ್ವಾಮೀಜಿಯವರ ಅಭಿಪ್ರಾಯಗಳ ಪರವಾದ ಮತ್ತು ವಿರೋಧವಾದ ಲೇಖನಗಳಿಗೆ ಸಮಾನವಾದ ಅವಕಾಶವನ್ನು ಕಲ್ಪಿಸಲಾಗಿದೆ. ಹೀಗೆ ಸನಾತನ ವೈದಿಕಧರ್ಮ ಪ್ರಚಾರಕ್ಕಾಗಿ ತಮ್ಮ ದೇಹಾರೋಗ್ಯವನ್ನು ಒತ್ತೆಯಿಟ್ಟು ಐವತ್ತು ವರ್ಷಗಳಿಗೂ ಹೆಚ್ಚು ಕಾಲ ಶ್ರಮಿಸಿದವರಲ್ಲಿ ಶ್ರೀಗಳವರು ಪ್ರಮುಖರೆಂಬುದರಲ್ಲಿ ಸಂಶಯವಿಲ್ಲ.

## ಪೂಜ್ಯಪಾದರಿಂದ ಯೋಗಪಟ್ಟವನ್ನು ಪಡೆದ ಪ್ರಮುಖ ಶಿಷ್ಯರು

ಶ್ರೀಗಳವರ ಕಾರ್ಯತತ್ಪರತೆ ಮತ್ತು ವೈದುಷ್ಯಗಳಿಂದ ಪ್ರಭಾವಿತರಾಗಿ ಅನೇಕ ಜನ ವಿಚಾರಶೀಲರು ಅವರ ಶಿಷ್ಯತ್ವವನ್ನು ಅಂಗೀಕರಿಸಿದರು. ಅವರಲ್ಲಿ ಕೆಲವರು ಶ್ರೀಗಳವರಂತೆಯೇ ಸಂನ್ಯಾಸ ದೀಕ್ಷೆಯನ್ನು ಪಡೆದು ವೇದಾಂತದ ಪರಮ ಪ್ರಯೋಜನವನ್ನು ಪಡೆಯಲು ಬಯಸಿದರು. ಉಳಿದ ಬಹಳಷ್ಟು ಶಿಷ್ಯರು ಗೃಹಸ್ಥ ಧರ್ಮದಲ್ಲಿಯೇ ಮುಂದುವರಿದು ಶ್ರೀಗಳವರ ಕೈಂಕರ್ಯಕ್ಕೆ ತಮ್ಮ ಕೈಲಾದ ಸೇವೆಯನ್ನು ಸಲ್ಲಿಸಿದರು. ಸಂನ್ಯಾಸಿಗಳಾಗಲು ಬಯಸಿದ ಶಿಷ್ಯರನ್ನು ಶ್ರೀಗಳವರು ಪರೀಕ್ಷಿಸಿ, ಯೋಗ್ಯರಾದವರಿಗೆ ದೀಕ್ಷೆಯನ್ನು ನೀಡುವುದರ ಮೂಲಕ ಅವರನ್ನು ಕೃತಾರ್ಥರನ್ನಾಗಿಸಿದರು. ಅಂತಹ ಪವಿತ್ರಾತ್ಮರಲ್ಲಿ ಕೆಲವರ ಸಂಗ್ರಹೀತನಾಮವನ್ನು ಕೆಳಗೆ ಕೊಡಲಾಗಿದೆ.

1. ಒರಿಸ್ಸಾ ಪ್ರದೇಶದಿಂದ ಪ್ರೇಮಾನಂದರೆಂಬುವರು ಕಾರ್ಯಾಲಯಕ್ಕೆ ಬಂದು, ಸಂನ್ಯಾಸವನ್ನು ಸ್ವೀಕರಿಸಿ ಅಜೀವ ಪರ್ಯಂತ ಇಲ್ಲಿಯೇ ಉಳಿದು ವೇದಾಂತ ಸೇವೆಯನ್ನು ಕೈಗೊಂಡರು. ಇವರು 1991ರ ವರೆಗೂ ಕಾರ್ಯಾಲಯದಲ್ಲಿದ್ದರು.

2. ಕೇಶವಮೂರ್ತಿಗಳು ಅರ್ಥಶಾಸ್ತ್ರದ ಎಂ.ಎ. ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದರು. ಉನ್ನತವಾದ ಸರ್ಕಾರಿ ಹುದ್ದೆಯಲ್ಲಿದ್ದು ಹೆಚ್ಚಿನ ಖ್ಯಾತಿಯನ್ನು ಗಳಿಸಿದ್ದರು. ಸಂಗೀತದಲ್ಲಿ ಇವರಿಗೆ ಅಪಾರವಾದ ವಿದ್ವತ್ತು ಇದ್ದಿತು. ಇವರು ಶ್ರೀಗಳಿಂದ ಪ್ರಭಾವಿತರಾಗಿ, ಸರ್ಕಾರಿ ಹುದ್ದೆಯನ್ನು ತೊರೆದು, ಸಂನ್ಯಾಸ ಸ್ವೀಕಾರಮಾಡಿ, ಬ್ರಹ್ಮಾನಂದೇಂದ್ರಸರಸ್ವತೀ ಎಂಬ ಹೆಸರಿನಿಂದ ವಿರಾಜಿಸಿದರು.

3. ರಂಗಸ್ವಾಮಿಗಳೆಂಬುವವರು ರಸಾಯನ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರು. ಇಂತಹ ಪ್ರತಿಭಾವಂತರು, ಆತ್ಮಾನಂದಸರಸ್ವತಿಗಳೆಂಬ ಹೆಸರಿನಿಂದ ಮೋಕ್ಷಮಾರ್ಗವನ್ನು ಪ್ರವೇಶಮಾಡಿ, ಶ್ರೀಗಳವರ ವೇದಾಂತ ಸೇವೆಯನ್ನು ಮುಂದುವರಿಸಿದರು.

4. ಲಕ್ಷ್ಮೀನಾರಾಯಣರು ಬಿ.ಎಸ್.ಸಿ.ಬಿ.ಇ. ಎಲ್.ಎಲ್. ಬಿ ಮತ್ತು ಎಂಟೆಕ್ ಪದವೀಧರರು. ಇವರೂ ಕೂಡ ತಮ್ಮ ಸ್ವಂತ ಅಪೇಕ್ಷೆಯಿಂದ ಉದ್ಯೋಗದಲ್ಲಿ ನಿವೃತ್ತಿಯನ್ನು ಪಡೆದು ನಿತ್ಯಾನಂದಸರಸ್ವತಿಗಳೆಂಬ ಹೆಸರಿನಿಂದ ತುರೀಯಾಶ್ರಮವನ್ನು ಪ್ರವೇಶಿಸಿ ಮತ್ತೂರು ಗ್ರಾಮದಲ್ಲಿ ವೇದಾಂತ ಪಾಠಶಾಲೆಯನ್ನು ಆರಂಭಿಸಿದರು.

5. ಶ್ರೀಗಳವರ ಬಲಗೈನಂತೆ ಸಹಾಯಕರೂ, ಬಂಧುಗಳೂ ಆಗಿದ್ದ, ಆಸ್ಥಾನ ವಿದ್ವಾನ್ ಶ್ರೀವಿಟ್ಠಲ ಶಾಸ್ತ್ರಿಗಳು ಪೂಜ್ಯಪಾದರ ಪರಮಪ್ರಿಯ ಶಿಷ್ಯರಾಗಿ, ಅವರ ಎಲ್ಲ ಕೆಲಸಗಳಲ್ಲಿ ನೆರವಾಗುತ್ತಿದ್ದರು. ಪೂಜ್ಯಪಾದರು ಬ್ರಹ್ಮೀಭೂತರಾದ ನಂತರ, ಶ್ರೀಗಳವರ ಸಮಾಧಿಸ್ಥಾನದಲ್ಲಿ ವಿಟ್ಠಲಾಶಾಸ್ತ್ರಿಗಳು ಸಂನ್ಯಾಸ ಸ್ವೀಕಾರಮಾಡಿದರು. ಆಗ ಅವರು ಶ್ರೀಗಳವರನ್ನೇ ತಮ್ಮ ಮನದಲ್ಲಿ ಗುರುವಾಗಿ ಭಾವಿಸಿದ್ದರು. ಅವರು ದೀಕ್ಷೆಯ ನಂತರ ಜ್ಞಾನಾನಂದೇಂದ್ರಸರಸ್ವತೀಯೆಂಬ ಅಭಿದಾನದಿಂದ ವಿರಾಜಿತರಾದರು.

ಹೀಗೆ ಅಸುಲಭಸಾಧ್ಯವಾದ ತುರೀಯಾಶ್ರಮದಲ್ಲಿ ಸ್ವಾಮಿಪಾದರು ಬ್ರಹ್ಮನಿಷ್ಠರಾಗಿ, ಪೂರ್ವಸೂರಿಗಳಿಂದ ಉಪದಿಷ್ಟವಾದ ವೇದಾಂತ ವಿಚಾರಗಳನ್ನು ತಾವೂ ಅನುಭವಕ್ಕೆ ತಂದುಕೊಂಡು ಉಳಿದವರಿಗೂ ಮಾರ್ಗದರ್ಶಕರಾದರು.

* * * * *

# ಅಧ್ಯಾಯ - 15

# ಶ್ರೀಗಳವರ ರಾಮಭಕ್ತಿ

ಭಕ್ತಿಯು ಪ್ರೇಮದ ವಿಶಿಷ್ಟ ಸ್ವರೂಪವಾಗಿದೆ. ಪ್ರಾಯಶಃ ಎಲ್ಲರ ಹೃದಯದಲ್ಲಿಯೂ ಪ್ರೀತಿಯು ಇದ್ದೇ ಇರುತ್ತದೆ. ಈ ಪ್ರೀತಿಯ ದೇವರು, ಗುರು, ಮುಂತಾದವರಲ್ಲಿ ವಿಶಿಷ್ಟವಾಗಿ ಪ್ರಕಟವಾದಾಗ ಭಕ್ತಿಯೆನಿಸುತ್ತದೆ. ಅದನ್ನೇ ನಾರದರು ಭಕ್ತಿಸೂತ್ರದಲ್ಲಿ, **'ಸಾತ್ವಸ್ಮಿನ್ ಪರಮಪ್ರೇಮರೂಪಾ'** ಎಂದು ವರ್ಣಿಸಿರುತ್ತಾರೆ. ಭಾವ ಪ್ರಧಾನವಾದ ಈ ಭಕ್ತಿಯು ಪರಮಾತ್ಮನ ಅನುಗ್ರಹವಿಶೇಷವನ್ನು ಉತ್ಪಾದನೆಮಾಡ ಬಲ್ಲ ಅನುಭವವಿಶೇಷವೆನಿಸಿದೆ. ಎಲ್ಲ ಜೀವಿಗಳೂ ವಿಚಾರ, ಕ್ರಿಯೆ ಮತ್ತು ಭಾವಶಕ್ತಿ ಯುಕ್ತರಾಗಿಯೇ ಇರುತ್ತವೆ. ಅವುಗಳಲ್ಲಿ ವಿಚಾರವು ಉಳಿದೆರಡಕ್ಕಿಂತ ಪ್ರಧಾನವಾದರೆ ಅವನು ಜ್ಞಾನಿಯಾಗುತ್ತಾನೆ; ಕ್ರಿಯಾಪ್ರಧಾನವಾದರೆ ಕರ್ಮಿಯೆನಿಸುತ್ತಾನೆ. ಹಾಗೆಯೇ ಭಾವಪ್ರಧಾನವಾದರೆ ಭಕ್ತನಾಗುತ್ತಾನೆ. ಈ ಭಕ್ತಿಯೂ ಕೇವಲ ಭಾವೋತ್ಪನ್ನವಾದ ಸುಖದುಃಖಗಳಿಗಿಂತ ಭಿನ್ನವಾಗಿರುತ್ತದೆ. ತೈಲಧಾರೆಯಂತೆ ಅವಿಚ್ಛಿನ್ನರೂಪವಾಗಿ ಧ್ಯೇಯ ವಸ್ತುವಿನಲ್ಲಿ ಮನಸ್ಸನ್ನು ಸ್ಥಿರೀಕರಿಸುವುದೇ ಪರಾಭಕ್ತಿಯ ಸ್ವರೂಪವಾಗಿದೆ. ಇಂತಹ ಭಕ್ತಿಯು ಕೊನೆಯಲ್ಲಿ ಮೋಕ್ಷದಲ್ಲಿ ಪರ್ಯವಸಾನವಾಗುತ್ತದೆ.

ಭಕ್ತಿಯ ಕಲ್ಪನೆ ಮನುಷ್ಯನ ಜೀವನದೊಂದಿಗೆ ಹಾಸುಹೊಕ್ಕಾಗಿ ಸೇರಿ ಬಿಟ್ಟಿ ರುವುದರಿಂದ, ಇದರ ಪ್ರಾರಂಭದ ಇತಿಹಾಸವನ್ನು ಊಹಿಸುವುದು ಕಷ್ಟಸಾಧ್ಯ ವಾದುದು. ವೇದಗಳಲ್ಲಿಯೇ ಉಪಾಸನೆಯ ರೂಪದಿಂದ ಭಕ್ತಿಮಾರ್ಗದ ಬೀಜಾಂಕುರ ವನ್ನು ಕಾಣುತ್ತೇವೆ. ಭಕ್ತಿಯೋಗವೆಂಬ ವಿಶಿಷ್ಟಪದಪ್ರಯೋಗವು ಭಗವದ್ಗೀತೆಯಲ್ಲಿ ಹಾಸುಹೊಕ್ಕಾಗಿದೆ. ಗೀತೆಯಲ್ಲಿ ಹೇಳಿರುವಂತೆ ನಾಲ್ಕು ಪ್ರಕಾರದಿಂದ ಜನರು ಭಗವಂತನನ್ನು ಭಜಿಸುತ್ತಾರೆ.

**ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ**

ಎಂಬಂತೆ ಆರ್ತರಾಗಿ ದುಃಖನಿವಾರಣೆಗೆ, ಭಗವಂತನ ಸ್ವರೂಪವನ್ನು ತಿಳಿಯುವ ಕುತೂಹಲದಿಂದ, ಲೌಕಿಕಭೋಗಭಾಗ್ಯಗಳಿಗಾಗಿ ಭಗವಂತನನ್ನು ಭಜಿಸುವ ಮೊದಲಿನ ಮೂರು ಪ್ರಕಾರದವರಿಗಿಂತ ನಾಲ್ಕನೆಯವನಾದ ಜ್ಞಾನಿಯು ವಿಶಿಷ್ಟತಮ ನಾಗಿರುತ್ತಾನೆ. ಮೊದಲಿನ ಮೂರು ವಿಧಗಳು ಗೌಣಭಕ್ತಿಯೆಂದು ಕರೆಯಲ್ಪಡುತ್ತವೆ.

ಪರಮಾತ್ಮನ ಆಕಾರವಿಶೇಷವನ್ನು ಭಾವಿಸಿ ಕಲ್ಪೋಕ್ತಪ್ರಕಾರಗಳಿಂದ ಪೂಜಾದಿಗಳನ್ನು ನೆರವೇರಿಸಿ ಪ್ರತಿಫಲರೂಪವಾಗಿ ಪ್ರಾಪಂಚಿಕ ಸುಖಗಳನ್ನು ಬೇಡುವುದು ಈ ಭಕ್ತಿಗಳ ಲಕ್ಷಣವು. ಆದರೆ ನಾಲ್ಕನೆಯದಾದ ಪರಾಭಕ್ತಿಯಲ್ಲಿ ಭಕ್ತಭಗವಂತರ ಮಧ್ಯೆ ಭೇದ ಭಾವವು ಲೀನವಾಗುತ್ತದೆ. ಸಾಧನದಶೆಯಲ್ಲಿ ಭಕ್ತಿಯು ದ್ವೈತರೂಪವಾಗಿದ್ದರೂ ಕ್ರಮೇಣ ಅಭೇದದರ್ಶನದಲ್ಲಿ ಪರ್ಯವಸಾನವಾಗುತ್ತದೆ. ಪ್ರಾಯಶಃ ಭಕ್ತಿ ಮತ್ತು ಜ್ಞಾನಗಳ ನಡುವೆ ಅಂತರವು ಅತ್ಯಲ್ಪವಾದುದು. ಗೀತೆಯಲ್ಲಿ ಇದನ್ನೇ **'ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ'** ಎಂದು ಹೇಳಿದೆ. ಜ್ಞಾನಿಯ ದೇವನಿಗೂ, ದೇವನು ಜ್ಞಾನಿಗೂ ಅತ್ಯಂತ ಪ್ರಿಯನಾದವನು. ಸಾಂಸಾರಿಕ ಸುಖದುಃಖಗಳಿಂದ ಮತ್ತು ರಾಗದ್ವೇಷಗಳಿಂದ ಮುಕ್ತನಾದ ಭಕ್ತನು ಭಗವಂತನಲ್ಲಿಯೇ ಮನಸ್ಸುಳ್ಳವ ನಾಗಿ ತಾನೂ ಆನಂದವನ್ನು ಅನುಭವಿಸುತ್ತ, ಉಳಿದವರಿಗೂ ಪ್ರೇಮಾನಂದವನ್ನು ವಿತರಿಸುತ್ತಾನೆ. ಅಹರ್ನಿಶಿಭಗವಚ್ಚಿಂತನೆಯಿಂದ ಕೀಟಭ್ರಮರನ್ಯಾಯದಂತೆ ಪರಮಾತ್ಮ ಸ್ವರೂಪವೇ ಆಗಿಬಿಡುತ್ತಾನೆ. ಆದ್ದರಿಂದಲೇ ಶಂಕರಭಗವತ್ಪಾದರು ತಮ್ಮ ವಿವೇಕಚೂಡಾ ಮಣಿ ಪ್ರಕರಣದಲ್ಲಿ **'ಜ್ಞಾನಸಾಧನಮಾರ್ಗೇಷು ಭಕ್ತಿರೇವ ಗರೀಯಸೀ'** ಎಂದು ಹೇಳಿರುತ್ತಾರೆ.

ಭಗವಂತನು ಭಕ್ತನು ಒಂದಾದಾಗ, ಭಕ್ತನು ಇನ್ನೇನನ್ನು ಬಯಸುವುದಿಲ್ಲ, ಶೋಕಮೋಹಗಳಿಂದ ಪೀಡಿತನಾಗುವುದಿಲ್ಲ, ಅವನು ತೃಪ್ತನೂ, ಆತ್ಮಾರಾಮನೂ, ಆಗುತ್ತಾನೆ. ಸದಾ ಭಗವಂತನನ್ನೇ ಕಾಣುತ್ತಾನೆ. ಕೇಳುತ್ತಾನೆ ಮತ್ತು ಚಿಂತಿಸುತ್ತಾನೆ. ಅಂತಹ ಭಕ್ತನು ತೀರ್ಥಕ್ಷೇತ್ರಗಳನ್ನು ಪವಿತ್ರಗೊಳಿಸುತ್ತಾನೆ. ಶಾಸ್ತ್ರಗಳನ್ನು ಸಚ್ಛಾಸ್ತ್ರ ಗಳನ್ನಾಗಿಸುತ್ತಾನೆ.

## ಶ್ರೀಗಳವರ ಭಕ್ತಿ ಪರಾಕಾಷ್ಠತೆ

ಪೂಜ್ಯಪಾದರು ಶಾಂಕರವೇದಾಂತಾನುವರ್ತಿಗಳಾಗಿದ್ದು ಅದ್ವೈತವನ್ನೇ ಪರಮಾರ್ಥವಾಗಿ ನಂಬಿದ್ದರು. ಆದರೂ ಪಾರಮಾರ್ಥಿಕತತ್ತ್ವವನ್ನು ತಿಳಿಯಲು ಬೇಕಾದ ಸಾಧನವಾದ ಭಕ್ತಿಯಲ್ಲಿ ಪರಮಾದರವನ್ನು ಹೊಂದಿದ್ದರು. ಅವರು ನಿರ್ವಿ ವಾದವಾಗಿ ಶ್ರೀರಾಮಚಂದ್ರನ ಪರಮಭಕ್ತರಾಗಿದ್ದರು. ಅವರ ಜನ್ಮಗ್ರಾಮವಾದ ಯಲ್ಲಂಬಳಸೆಯಲ್ಲಿ ಸಾಕಷ್ಟು ದೇವಾಲಯಗಳಿದ್ದವು. ಆ ಗ್ರಾಮದ ಜನರೂ ಕೂಡ ದೈವಭಕ್ತಿಯುಳ್ಳವರಾಗಿದ್ದರು. ಆಗಾಗ್ಗೆ ಗ್ರಾಮದಲ್ಲಿ ಹರಿಕಥೆಗಳು, ಪೌರಾಣಿಕ ಕಥೆ ಗಳನ್ನು ಆಧರಿಸಿದ ಯಕ್ಷಗಾನ ಬಯಲಾಟಗಳು ನಡೆಯುತ್ತಿದ್ದವು. ಅವುಗಳನ್ನು

ಶ್ರದ್ಧೆಯಿಂದ ನೋಡುತ್ತಿದ್ದ ಬಾಲಕರು ಸಹಜವಾಗಿ ದೈವಭಕ್ತಿಯನ್ನು ಬೆಳೆಸಿಕೊಳ್ಳು ತ್ತಿದ್ದರು. ದೇವಾಲಯಗಳಲ್ಲಿ ನಡೆಯುವ ಸಾಮೂಹಿಕ ಪ್ರಾರ್ಥನೆ ಮತ್ತು ಉತ್ಸವಗಳ ಸಂದರ್ಭದಲ್ಲಿ ಎಲ್ಲರೂ ಕೂಡಿ ಭಜನೆಯನ್ನು ಮಾಡುತ್ತಿದ್ದರು. ಇಂತಹ ಪರಿಸರದಲ್ಲಿ ಬೆಳೆದ ಶ್ರೀಗಳವರೂ ಬಾಲ್ಯದಿಂದಲೇ ದೈವಭಕ್ತರಾಗಿದ್ದರು. ವಿಶೇಷವಾಗಿ ಅವರಿಗೆ ಶ್ರೀರಾಮಚಂದ್ರನಲ್ಲಿ ಭಕ್ತಿಯಿದ್ದಿತು.

ರಾಮಣ್ಣನೆಂಬ ಆಸ್ತಿಕ ಮಹಾಶಯರೊಬ್ಬರು ಹನುಮಂತನ ಉಪಾಸನೆ ಯಿಂದ ಆಸ್ತಿಕವರ್ಗದಲ್ಲಿ ಸುಪ್ರತಿಷ್ಠಿತರಾಗಿದ್ದರು. ಅವರಿಗೆ ಸುಂದರಕಾಂಡವು ಪೂರ್ಣ ವಾಗಿ ಬಾಯಿಪಾಠವಾಗಿತ್ತು. ಪ್ರತಿವರ್ಷವು ಅವರು ವಿವಿಧ ಸ್ಥಳಗಳಲ್ಲಿ ರಾಮೋತ್ಸವ ವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಒಂದು ಸಲ ಬೀರೂರು ಪಟ್ಟಣದಲ್ಲಿ ಅವರಿಂದ ರಾಮೋತ್ಸವವು ಆಯೋಜಿಸಲ್ಪಟ್ಟಿತು. ಈ ಪುಣ್ಯ ಕಾರ್ಯಕ್ಕಾಗಿ ಅನೇಕ ಧನಿಕರು ಅವರಿಗೆ ಸಹಾಯಮಾಡುತ್ತಿದ್ದರು. ಸಾರ್ವಜನಿಕ ಸಂತರ್ಪಣೆಯೇ ಮುಂತಾದ ಖರ್ಚನ್ನು ಭರಿಸಲು ಧಾರಾಳವಾಗಿ ಧಾನ್ಯಾದಿಗಳನ್ನು ತಂದು ಶ್ರೀರಾಮನ ಪದತಲ ದಲ್ಲಿ ಅರ್ಪಿಸುತ್ತಿದ್ದರು. ಈ ಸಂದರ್ಭದಲ್ಲಿ ಅಹರ್ನಿಶಿ ಭಜನೆ, ಪುರಾಣ ಪ್ರವಚನಗಳು ದೀಪಾರಾಧನೆ ಮುಂತಾದವುಗಳಿಂದ ಆ ಪ್ರದೇಶವು ಅಯೋಧ್ಯಾಪುರಿಯಂತೆ ಕಂಗೊಳಿಸುತ್ತಿತ್ತು. ಈ ಉತ್ಸವವು ಬಾಲಕ ಸುಬ್ಬರಾಯರ ಮೇಲೆ ಅಗಾಧವಾದ ಪರಿಣಾಮವನ್ನು ಉಂಟುಮಾಡಿತು.

ಮುಂದೆ ಅವರು ಉದ್ಯೋಗಸ್ಥರಾದ ಮೇಲೆ ರಾಯರಿಗೆ ಸ್ಮೃತೀತಿಹಾಸ ಕೋವಿದರಾದ ಕುರ್ತುಕೋಟಿ ಮಹಾಭಾಗವತರ ಪರಿಚಯಲಾಭವಾಯಿತು. ಭಾಗವತರು ಗೊಂದಾವಲಿಯ ಬ್ರಹ್ಮಚೈತನ್ಯ ಮಹಾರಾಜರ ಶಿಷ್ಯರಾಗಿದ್ದರು. ಬ್ರಹ್ಮಚೈತನ್ಯರು ಅಪ್ರತಿಮರಾಮಭಕ್ತರಾಗಿದ್ದರು. ಅವರ ನರನಾಡಿಗಳಲ್ಲಿ ನಿರಂತರವಾಗಿ ರಾಮನಾಮವು ಪ್ರತಿಧ್ವನಿತವಾಗುತ್ತಿತ್ತು. ಸುಬ್ಬರಾಯಶರ್ಮರು ಮಹಾಭಾಗವತರ ಜೊತೆಯಲ್ಲಿ ಬ್ರಹ್ಮಚೈತನ್ಯರ ದರ್ಶನಾರ್ಥವಾಗಿ ಗೋಂದಾವಲಿಗೆ ಹೋದರು. ಅವರ ಆಶ್ರಮದಲ್ಲಿ ಬ್ರಹ್ಮಚೈತನ್ಯಮಹಾರಾಜರಿಂದ ಪ್ರೇರಿತರಾಗಿ ಆಬಾಲವೃದ್ಧರೆಲ್ಲರೂ ಸದಾ ಕಾಲ ರಾಮಭಜನೆ ಮಾಡುತ್ತಿದ್ದರು. ರಾಯರು ಬ್ರಹ್ಮಚೈತನ್ಯರ ಪ್ರಭಾವದಿಂದ ಆಕರ್ಷಿತರಾದರು. ಗುರುಪೂರ್ಣಿಮೆಯದಿನ ಅವರಿಂದ ರಾಮತಾರಕಮಂತ್ರದ ಉಪದೇಶವನ್ನು ಪಡೆದರು. ಆ ಮಂತ್ರವನ್ನು ಮುಂದೆ ಅವರು ಏಕನಿಷ್ಠೆಯಿಂದ ಯಾವಜ್ಜೀವವೂ ಪಠಿಸುವ ಪರಿಪಾಠವನ್ನು ಮುಂದುವರಿಸಿದರು.

ಶ್ರೀಗಳವರ ರಾಮಭಕ್ತಿಗೆ ಮತ್ತೊಂದು ಉದಾಹರಣೆಯನ್ನು ಅವರ ಜೀವನ ದಲ್ಲಿ ಕಾಣಬಹುದು. ಅವರು ಅಧ್ಯಾತ್ಮವಿದ್ಯಾಪ್ರಚಾರಕ್ಕೆಂದು ಪ್ರಕಾಶಪಡಿಸಲು ಹೊರಟ 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಯು ರಾಮನವಮಿಯಂದೇ ಜನ್ಮತಾಳಿತು. ಅದು ಮುಂದೆ ಇತೋಪ್ಯತಿಶಯವಾಗಿ ಅಭಿವೃದ್ಧಿ ಹೊಂದಿ ಇಂದಿಗೂ ಅಧ್ಯಾತ್ಮಲೋಕದ ಧ್ರುವತಾರೆಯಂತೆ ಕಂಗೊಳಿಸುತ್ತಿದೆ.

ಶ್ರೀಗಳವರು ಸ್ಥಾಪಿಸಿದ ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ವೇದಾಂತಪಾಠ ನಡೆಯುತ್ತಿದ್ದುದು ಸರಿಯಷ್ಟೆ! ಅದರಲ್ಲಿ ಪುರಾಣದ ಪ್ರವಚನವೂ ಒಂದು ವಿಷಯವಾಗಿತ್ತು. ಈ ಪ್ರವಚನಕ್ಕೆ ಶ್ರೀಗಳವರು ಅಧ್ಯಾತ್ಮರಾಮಾಯಣವನ್ನೇ ಆರಿಸಿಕೊಂಡಿದ್ದರು. ರಾಮಾಯಣವು ಅಧ್ಯಾತ್ಮವಿದ್ಯೆಗೆ ಪೂರಕವೆಂಬುದು ಅವರ ನಿಶ್ಚಿತಾಭಿಪ್ರಾಯವಾಗಿತ್ತು.

ಶ್ರೀಗಳವರ ರಾಮಭಕ್ತಿಯು ಅವರನ್ನು ಕಷ್ಟಸಮಯಗಳಲ್ಲಿ ಕೈದೀಪವಾಗಿ ಕಾಪಾಡುತ್ತಿತ್ತು. ಕಾರ್ಯಾಲಯದ ಸ್ಥಾಪನೆಗಾಗಿ ಸ್ಥಳವನ್ನು ಹುಡುಕುತ್ತಿದ್ದಾಗ, ರಾಮ ಭಕ್ತರಾದ ನ್ಯಾಯವಾದಿ ಅರಕಲಗೂಡು ಶ್ರೀಕಂಠಯ್ಯನವರು ಹೊಳೆನರಸೀಪುರದಲ್ಲಿದ್ದ ತಮ್ಮ ನಿವೇಶನವನ್ನು ದಾನರೂಪವಾಗಿ ನೀಡಿದರು. ಪುಣ್ಯಕಾರ್ಯಗಳಿಗೆ ದೈವ ಸಹಾಯ ಒದಗಿಯೇ ಒದಗುತ್ತದೆಂಬುದಕ್ಕೆ ಇದುನಿದರ್ಶನವಾಗಿದೆ. ಕಾರ್ಯಾಲಯ ಕಟ್ಟಡವು ನಿರ್ಮಾಣವಾಗುತ್ತಿದ್ದಾಗ, ಶ್ರೀಗಳವರು ಭಗವಂತನಾದ ಶ್ರೀರಾಮನ ಪ್ರೇರಣೆಯಂತೆ ದಿಗ್ವಿಜಯ ರಾಮಮಂದಿರವನ್ನು ಕಾರ್ಯಾಲಯದ ಆವರಣದಲ್ಲಿ ಪ್ರಥಮತಃ ನಿರ್ಮಾಣ ಮಾಡಿಸಿದರು. ಈ ಪೂಜಾ ಮಂದಿರದಲ್ಲಿ ಕೋದಂಡಧಾರಿ ಯಾದ ಶ್ರೀರಾಮ ಚಂದ್ರಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿಸಿದರು. ವಿಕೃತಿನಾಮ ಸಂವತ್ಸರದ ಚೈತ್ರಶುಕ್ಲದಶಮಿಯಂದು ಬುಧವಾರ (29.3.50) ಸ್ವಾಮಿಯ ಪ್ರತಿಷ್ಠಾಪನಾ ಮಹೋತ್ಸವವು ವೈಭವದಿಂದ ಜರುಗಿತು. ಅಂದು ಶ್ರೀರಾಮ ನವಮಿಯ ಮಾರನೆಯ ದಿನ. ಶ್ರೀರಾಮ ಚಂದ್ರನು ಪಟ್ಟಾಭಿಷಿಕ್ತನಾದ ದಿನ. ಇಂದಿಗೂ ಕಾರ್ಯಾಲಯದ ಆವರಣದಲ್ಲಿ ಈ ದೇವಾಲಯವು ಕಂಗೊಳಿಸುತ್ತಿದೆ. ಪ್ರತಿದಿನವೂ ಅಲ್ಲಿ ಪೂಜಾ ಕಾರ್ಯವು ನೆರವೇರುತ್ತದೆ. ಪ್ರತಿವರ್ಷ ರಾಮನವಮಿ ಮತ್ತು ಪ್ರತಿಷ್ಠಾಪನಾ ಮಹೋತ್ಸವದ ನೆನಪಿಗಾಗಿ ರಾಮಾಯಣ ಪಾರಾಯಣ, ವಿಶೇಷ ಪೂಜೆ ಮತ್ತು ಉತ್ಸವಗಳು ನಡೆಯುತ್ತವೆ.

ಶ್ರೀಗಳವರು ರಾಮನಾಮ ಜಪಕ್ಕೆ ಆದ್ಯತೆ ಕೊಡುತ್ತಿದ್ದರು. ಜನರನ್ನು ಸನ್ಮಾರ್ಗ ಪ್ರವರ್ತಕರನ್ನಾಗಿ ಮಾಡಲು ರಾಮನಾಮವು ಉತ್ತಮಸಾಧನವೆಂದು ಅವರು ಹೇಳುತ್ತಿದ್ದರು. ಅದಕ್ಕಾಗಿ ಕಾರ್ಯಾಲಯದಲ್ಲಿ ಎರಡು ಬಾರಿ ರಾಮನಾಮ ಜಪ ಮತ್ತು ಸಾಮೂಹಿಕ ಭಜನಾಕಾರ್ಯಕ್ರಮಗಳನ್ನು ಅವರು ಆಯೋಜಿಸಿದ್ದರು. ಈಗಲೂ ಕಾರ್ಯಾಲಯದಲ್ಲಿ ಕಾರ್ಯಕ್ರಮಗಳು ಪ್ರಾತಃಕಾಲ ರಾಮನಾಮ ಜಪ ಮತ್ತು ಪೂಜೆಗಳಿಂದ ಪ್ರಾರಂಭವಾಗುತ್ತವೆ. ಶ್ರೀಗಳವರು ರಾಮಭಕ್ತರಾಗಿದ್ದರೂ ಅನ್ಯದೈವತಾರಾಧನೆಗಳನ್ನೂ ಪ್ರೋತ್ಸಾಹಿಸುತ್ತಿದ್ದರು. ಕಾರ್ಯಾಲಯದಲ್ಲಿ ರುದ್ರಪಠನ, ರುದ್ರಾಭಿಷೇಕಗಳು ಪಾದುಕಾಪೂಜೆಯ ಸಂದರ್ಭದಲ್ಲಿ ಮತ್ತು ಶಂಕರಜಯಂತಿ ಸಂದರ್ಭದಲ್ಲಿ ಅಂದಿನಿಂದ ಇಂದಿನವರೆಗೂ ನಿರಂತರವಾಗಿ ನಡೆದು ಬರುತ್ತಿವೆ. ಹರಿಹರದಲ್ಲಿ ಅಭೇದವನ್ನು ಆಚರಣೆಯಲ್ಲಿ ಶ್ರೀಗಳು ತೋರಿಸಿಕೊಟ್ಟಿದ್ದರು. ಹಿಂದೆ ಭಾಷ್ಯಶಾಂತಿಕಾಲದಲ್ಲಿಯೇ ಶೃಂಗೇರಿಯ ಜಗದ್ಗುರುಗಳು ರಾಯರಿಗೆ ಶಿವ ಪಂಚಾಕ್ಷರೀ ಮಂತ್ರವನ್ನು ಉಪದೇಶಿಸಿದ್ದರು. ಅದನ್ನೂ ಶ್ರೀಗಳವರು ಅನುಷ್ಠಾನ ದಲ್ಲಿರಿಸಿ ಕೊಂಡಿದ್ದರು. ಆಚಾರ್ಯ ಶಂಕರರಂತೆಯೇ ಪಂಚಾಯತನ ಮತದಲ್ಲಿ ನಿಷ್ಠರಾದ ಶ್ರೀಗಳವರು ಅವರಂತೆಯೇ ಜನರಲ್ಲಿ ದೈವಭಕ್ತಿಯನ್ನು ಪ್ರಚೋದಿಸಿದರು.

* * * * *

# ಅಧ್ಯಾಯ - 16

# ಪೂಜ್ಯಪಾದರ ಸಮಾಧಿಸ್ಥಾನ

ಶ್ರೀಗಳವರು ತಮ್ಮ ಜೀವನದಲ್ಲಿ ಒಂದು ನಿಮಿಷವನ್ನೂ ವ್ಯರ್ಥವಾಗಿ ಕಳೆದವರಲ್ಲ. ವೇದಾಂತವನ್ನು ಜನಪ್ರಿಯಗೊಳಿಸಲು ತಮ್ಮದೆಲ್ಲವನ್ನು ಧಾರೆಯೆರೆದು ತನುಮನಧನಗಳ ಮೂಲಕ ಶ್ರಮಿಸಿದವರು. ತೊಂಭತ್ತು ವರ್ಷಗಳ ಇಳಿ ವಯಸ್ಸಿ ನಲ್ಲಿಯೂ ಅವರು ಬರೆಯುತ್ತ ಕುಳಿತರೆ ಭಿಕ್ಷೆಗೂ ಬಲಾತ್ಕಾರವಾಗಿ ಏಳಿಸಬೇಕಾಗು ತ್ತೆಂದು ತಿಳಿದವರು ಹೇಳುತ್ತಾರೆ. ಈ ರೀತಿ ವೇದಾಂತಸೇವೆಗೆ ಜೀವನವನ್ನು ಮುಡುಪಾಗಿಟ್ಟ ಕೆಲವೇ ಜನರಲ್ಲಿ ಶ್ರೀಗಳು ಗಣ್ಯರೆನಿಸಿದ್ದಾರೆ.

ಮನಸ್ಸು ಉತ್ಸಾಹವಾಗಿದ್ದರೂ ದೇಹವು ಜರ್ಜರಿತವಾಗುವುದು ಪ್ರಕೃತಿ ಸಹಜ. ತೊಂಬತ್ತಾರು ವರ್ಷಗಳ ವಯಸ್ಸಿನಲ್ಲಿ ಶ್ರೀಗಳವರು ಭಗವಂತನ ಪಾದಗಳನ್ನು ಸೇರಲು ಸಂಕಲ್ಪಿಸಿದರು. ಸಹಜವಾಗಿ ದೇಹದ ಮೇಲೆ ಅಭಿಮಾನಶೂನ್ಯರಾಗಿದ್ದ ಅವರು ರಾಕ್ಷಸ ನಾಮ ಸಂವತ್ಸರದ ಆಷಾಢ ಬಹುಳ ತ್ರಯೋದಶಿಯಂದು ಮಂಗಳ ವಾರದ ದಿನ, ಪ್ರಾತಃಕಾಲದಲ್ಲಿ ಭೌತಿಕಶರೀರವನ್ನು ವಿಸರ್ಜಿಸಿದರು. (5.8.1975) ಆಗ ಶ್ರೀಗಳವರು ಬೆಂಗಳೂರಿನ ಶಾಖಾಕಾರ್ಯಾಲಯದಲ್ಲಿದ್ದರು. ಶಿಷ್ಯರು ಅವರ ಅಪೇಕ್ಷೆಯಂತೆ, ಅವರ ಪಾರ್ಥಿವ ಶರೀರವನ್ನು ಹೊಳೆನರಸೀಪುರದ ಮುಖ್ಯ ಕಾರ್ಯಾಲಯದಲ್ಲಿರುವ ಶ್ರೀದಿಗ್ವಿಜಯರಾಮನ ಸನ್ನಿಧಿಯಲ್ಲಿ ಸಮಾಧಿಮಾಡಲು ನಿಶ್ಚಯಿಸಿದರು. ಅದರಂತೆ ಅವರ ಶರೀರವನ್ನು ಉತ್ಸವದಲ್ಲಿ ಹೊಳೆನರಸೀಪುರಕ್ಕೆ ತರಲಾಯಿತು. ಕಾದಿದ್ದ ಸಹಸ್ರಾರು ಜನ ಅವರ ಅಂತಿಮ ದರ್ಶನವನ್ನು ಪಡೆದು ತಮ್ಮ ಭಕ್ತಿಯನ್ನು ಸಾರ್ಥಕಮಾಡಿಕೊಂಡರು. ಸಂನ್ಯಾಸಾಶ್ರಮದ ವಿಧಿವಿಧಾನಗಳಂತೆ ಅಂತ್ಯಕರ್ಮಗಳನ್ನು ನಡೆಸಿ ದಿಗ್ವಿಜಯರಾಮನ ಪಕ್ಕದಲ್ಲಿಯೇ ಶ್ರೀಗಳವರ ಸಮಾಧಿ ಯನ್ನು ನಿರ್ಮಿಸಲಾಯಿತು. ಇಂದಿಗೂ ಅವರ ಸಮಾಧಿಸ್ಥಾನವು ಶಿಷ್ಯರಿಗೆ ಮತ್ತು ವೇದಾಂತ ಪ್ರೇಮಿಗಳಿಗೆ ತೀರ್ಥಕ್ಷೇತ್ರವಾಗಿದೆ. ಪ್ರತಿ ವರುಷ ಶ್ರೀಗಳವರ ಜಯಂತಿ ಮತ್ತು ಆರಾಧನೆಗಳನ್ನು ಇಲ್ಲಿ ಮತ್ತು ಬೆಂಗಳೂರಿನ ಶಾಖಾ ಕಾರ್ಯಾಲಯದಲ್ಲಿ ಅದ್ದೂರಿಯಿಂದ ನಡೆಸಲಾಗುತ್ತದೆ. ಶ್ರೀಗಳವರ ಅಪೇಕ್ಷೆಯಂತೆಯೇ ಈ ಎರಡು ಸಂದರ್ಭಗಳಲ್ಲಿಯೂ ಬೆಳಗಿನ ಹೊತ್ತು ಉಪನಿಷತ್ಪ್ರವಚನ, ಎರಡನೆಯ ಸಮಾವೇಶ ದಲ್ಲಿ ಶ್ರೀಗಳವರ ಕೃತಿಗಳು ಮತ್ತು ಸಂಜೆ ಪುರಾಣಪ್ರವಚನಗಳು ನಡೆಯುತ್ತವೆ. ಮಹಾತ್ಮರು ಯಶಃ ಕಾಯದಿಂದ ಯಾವಾಗಲೂ ಜೀವಂತರಾಗಿರುತ್ತಾರೆ.

* * * * *

# ಅಧ್ಯಾಯ - 17

# ಅಭಿನವಶಂಕರರಾದ ಪೂಜ್ಯಪಾದರು

ಪರಮೇಶ್ವರನು ಶರ್ವ, ಭವ, ರುದ್ರ, ಉಗ್ರ, ಭೀಮ, ಪಶುಪತಿ, ಮಹಾದೇವ ಮತ್ತು ಈಶಾನರೆಂಬ ಅಷ್ಟಮೂರ್ತಿಗಳ ರೂಪದಿಂದ ಜಗತ್ತನ್ನು ಪಾಲಿಸುತ್ತಾನೆಂದು ಹೇಳುತ್ತಾರೆ. ಈ ಮೂರ್ತಿಗಳು ಕ್ರಮವಾಗಿ ಪೃಥಿವೀ ಜಲ, ತೇಜಸ್ಸು, ವಾಯು, ಆಕಾಶ, ಯಜಮಾನ, ಚಂದ್ರ ಮತ್ತು ಸೂರ್ಯರೆಂಬ ಪ್ರಕೃತಿ ತತ್ತ್ವಗಳ ಪ್ರತೀಕಗಳು. ಜಗತ್ತಿನಲ್ಲಿ ವೈದಿಕಧರ್ಮದ ಹ್ರಾಸವಾದಾಗ ಪರಮಾತ್ಮನು ಇಲ್ಲಿ ಅವತರಿಸಿ ಧರ್ಮಸಂಸ್ಥಾಪನೆ ಮಾಡುತ್ತಾನೆ. ಹಾಗೆಯೇ ಸಾಕ್ಷಾತ್ ಶಂಕರನೇ ಧರ್ಮಗ್ಲಾನಿಯಿಂದ ಜನರನ್ನು ಉದ್ಧರಿಸಲು ಶಂಕರಭಗವತ್ಪಾದರ ರೂಪದಿಂದ ಅವತರಿಸಿ ಅದ್ವೈತತತ್ತ್ವವನ್ನು ಪುನರುತ್ಥಾನ ಮಾಡಿದನು.

1. ಸಾವಿರ ವರ್ಷಗಳು ಕಳೆದ ನಂತರ ಮತ್ತೆ ಅದ್ವೈತತತ್ತ್ವದ ಪ್ರಭೆಯು ಧೂಳು ಹಿಡಿದು ಮಸುಕಾಗತೊಡಗಿತು. **'ಕಾಲೇನ ಮಹತಾ ಯೋಗೋ ನಷ್ಟಃ ಪರಂತಪ'** ಎಂದು ಗೀತೆಯಲ್ಲಿ ಹೇಳಿರುವಂತೆ, ಕಾಲಕಳೆದಂತೆ ವಿದ್ಯೆ ಯಾವುದಾದರೂ ಕ್ಷಯವಾಗುತ್ತದೆ. ಅದರಂತೆಯೇ, ಶಾಂಕರವೇದಾಂತ ದಲ್ಲಿಯೂ ಹಲವು ಮುಖ್ಯ ಅಂಶಗಳು ಮರೆತು ಹೋದವು. ಕೆಲವು ಅರ್ಥವ್ಯತ್ಯಾಸವನ್ನು ಪಡೆದವು.

2. ಸಂಪ್ರದಾಯವಿಚ್ಛಿನ್ನತೆಯು ಈ ರೀತಿಯ ಕ್ಷೀಣತೆಗೆ ಮತ್ತೊಂದು ಕಾರಣ ವಾಯಿತು. ಹಿಂದೆ ಆಚಾರ್ಯರುಗಳು ತಮ್ಮ ಗುರುಗಳಿಂದ ತಾವು ತಿಳಿದು ಕೊಂಡ ತತ್ತ್ವವಿಚಾರಗಳು ತಮ್ಮ ಶಿಷ್ಯರುಗಳಿಗೆ ಯಥಾವತ್ತಾಗಿ ವರ್ಗಾ ಯಿಸುತ್ತಿದ್ದರು. ಇಂದು ಈ ಗುರುಶಿಷ್ಯಪರಂಪರೆಯ ವಿದ್ಯಾಭ್ಯಾಸ ಮರೆ ಯಾಗಿಹೋಗಿರುವುದರಿಂದ ಶಿಷ್ಯರಿಗೆ ಸೂಕ್ತ ಗುರುಗಳ ಮಾರ್ಗದರ್ಶನದ ಅಭಾವ ಬಹಳವಾಗಿದೆ. ವಿದೇಶೀಯ ವಿದ್ಯಾಪ್ರಭಾವದಿಂದ ಶಿಷ್ಯರ ಬುದ್ಧಿಯೂ ಕೂಡ ಸಾಂಪ್ರದಾಯಿಕವಾದ ಮಾರ್ಗದಿಂದ ಭಿನ್ನವಾದ ರೂಪವನ್ನು ತಳೆಯುತ್ತಿದೆ.

3. ಜಿಜ್ಞಾಸುಗಳ ಅಸಾಮರ್ಥ್ಯವು ಮೂರನೆಯ ಕಾರಣ. ವಿದ್ಯಾಭ್ಯಾಸದ ವಿಧಾನ ವ್ಯತ್ಯಾಸವಾಗಿ, ಸಂಸ್ಕೃತ ತನ್ನ ಅಧ್ಯಯನ ಪ್ರಾಮುಖ್ಯವನ್ನು ಕಳೆದುಕೊಂಡಿತು. ಸಂಸ್ಕೃತಭೂಯಿಷ್ಠವಾದ ವೇದಾಂತಗ್ರಂಥಗಳನ್ನು ಅಧ್ಯಯನ ಮಾಡುವುದು ಅವರಿಗೆ ಸಾಧ್ಯವಿಲ್ಲ, ಜೀವನಾವಶ್ಯಕತೆಯ ಲೌಕಿಕ ವಿದ್ಯೆಗಳನ್ನು ಕಲಿಯುವುದರಲ್ಲಿಯೇ ಅವರ ಸಾಮರ್ಥ್ಯವೆಲ್ಲವೂ ವ್ಯಯವಾಗುತ್ತದೆ.

4. ಪಂಡಿತರೂ ಕೂಡ ಶಾಸ್ತ್ರಾಂತರಪ್ರಕ್ರಿಯಾವಾಸನೆಗಳಿಂದ ದೂಷಿತರಾಗುತ್ತಿದ್ದಾರೆ. ಅವರಿಗೆ ಶುದ್ಧವಾದ ಸ್ವರೂಪದ ಪ್ರಕ್ರಿಯೆಯನ್ನು ಉಳಿಸಿಕೊಳ್ಳುವ ಮತ್ತು ಶಿಷ್ಯರಿಗೆ ಹಸ್ತಾಂತರಿಸುವ ಸಾಮರ್ಥ್ಯವಿಲ್ಲವಾಗಿದೆ.

5. ಆಧುನಿಕರಲ್ಲಿ ಸ್ವಬುದ್ಧಿ ಕೌಶಲದ ಬಗ್ಗೆ ಅಪ್ರತಿಮ ವಿಶ್ವಾಸವಿದ್ದು, ಹಳೆಯ ಪದ್ಧತಿಗಳು ಮೂಢವೆಂಬ ಭಾವನೆಯು ಬೆಳೆಯಿತು. ಮೂಲಕರ್ತೃವಿನ ಉದ್ದೇಶವನ್ನು ವಿವರಿಸುವ ಬದಲು ತಮ್ಮ ಕೌಶಲವನ್ನು ಪ್ರದರ್ಶಿಸುವ ಆಕಾಂಕ್ಷೆ ಅಧಿಕವಾಯಿತು. ತಮ್ಮ ಅಭಿಪ್ರಾಯವೇ ಶಂಕರರ ಅಭಿಪ್ರಾಯವೆಂದು ಹೇಳುವ ಚಟ ಹೆಚ್ಚಿತು.

5. ಜ್ಞಾನಾಕಾಂಕ್ಷೆಗಿಂತ ಅನ್ಯಮತಖಂಡನೆಯಲ್ಲಿ ಆಸಕ್ತಿ ಅಧಿಕವಾಯಿತು. ನಮ್ಮ ಅಭಿಪ್ರಾಯವೇ ಸರಿ. ತಮ್ಮ ಮತವೇ ಹೆಚ್ಚು ಎಂಬ ಮತಾಂಧತೆ ಅಪಾಯಕಾರಿ.

ಇಂತಹ ಕಠಿನ ಪರಿಸ್ಥಿತಿಯಲ್ಲಿ ಶಾಂಕರಮತವನ್ನು ಶುದ್ಧವಾದ ರೀತಿಯಲ್ಲಿ ಪ್ರಸಾರಮಾಡಿ, ಅದನ್ನು ಜನಪ್ರಿಯಗೊಳಿಸಲು ದಿವ್ಯ ಚೇತನವೊಂದರ ಅವಶ್ಯಕತೆ ಬಹಳವಾಗಿತ್ತು. ಆದ ಕಾರಣ, ಶಂಕರರೇ ಮತ್ತೆ ಶ್ರೀಗಳವರ ರೂಪದಲ್ಲಿ ಈ ನಾಡಿನಲ್ಲಿ ಅವತರಿಸಿ ತಾವು ಹಿಂದೆ ಪ್ರಸಿದ್ಧಿಗೊಳಿಸಿದ್ದ ಅದ್ವೈತತತ್ತ್ವಗಳನ್ನು ಮತ್ತೆ ಜನಮನದಲ್ಲಿ ಹಸಿರಾಗುವಂತೆ, ನೂತನಗೊಳಿಸಿದರು. ಇಲ್ಲದಿದ್ದರೆ ಶಾಂಕರಾದ್ವೈತ ಕ್ಷೀಣದೆಸೆಯನ್ನು ಹೊಂದುತ್ತಿದ್ದಿತು.

## ಅಭಿನವಶಂಕರರಾದ ಪೂಜ್ಯಪಾದರು

ಶಂಕರಭಗವತ್ಪಾದರಿಂದ ವೇದಾಂತ ಮತದ ಉದ್ಧಾರಕ್ಕಾಗಿ ಯಾವ ಯಾವ ವಿಧಾನಗಳು ಬಳಸಲ್ಪಟ್ಟವೋ, ಅವೆಲ್ಲವು ಪೂಜ್ಯಪಾದರಿಂದ ಅನುಕರಿಸಲ್ಪಟ್ಟಿವೆ. ಆದುದರಿಂದಲೇ ಅವರು **'ಅಭಿನವಶಂಕರ'** ಎಂಬ ಹೆಸರಿಗೆ ಅರ್ಹರಾಗಿರುತ್ತಾರೆ. ಅವರಿಬ್ಬರ ಸಾಧನೆಗಳನ್ನು ಈ ಕೆಳಗೆ ಹೋಲಿಸಲಾಗಿದೆ.

| | ಶಂಕರಭಗವತ್ಪಾದರ ಸಾಧನೆಗಳು | ಪೂಜ್ಯಪಾದರ ಸಾಧನೆಗಳು |
|---|---|---|
| 1. | ಆಚಾರ್ಯರ ಕಾಲದಲ್ಲಿ ಅವೈದಿಕ ಮತಗಳ ಪ್ರಾಚುರ್ಯದಿಂದ ವೇದೋಕ್ತಕರ್ಮಗಳಲ್ಲಿ ಅನುಚಿತವಾದ ಶ್ರದ್ಧಾಬಾಹುಲ್ಯ ಉಂಟಾಗಿ, ವೇದಾಂತಪೂರ್ಣಚಂದ್ರನು ರಾಹು ಗ್ರಸ್ತನಾಗಿದ್ದನು. ಇವರು ತಮ್ಮ ಸ್ವಪರಿಶ್ರಮದಿಂದ ಅದ್ವೈತವೇದಾಂತವನ್ನು ಪುನರುಜ್ಜೀವನಗೊಳಿಸಿದರು. | ಪೂಜ್ಯಪಾದರ ಕಾಲದಲ್ಲಿ ವೇದಾಂತ ವಿಷಯದಲ್ಲಿ ಜನರ ಗ್ರಹಣಶಕ್ತಿಯ ಹ್ರಾಸದಿಂದ, ಹಾಗೂ ಆಂಗ್ಲ ವಿದ್ಯಾಭ್ಯಾಸದ ಮೋಹದಿಂದ ಶಾಂಕರಸಿದ್ಧಾಂತವು ರಾಹು ಗ್ರಸ್ತವಾಗಿತ್ತು. ಇವರು ಶಂಕರರ ಅದ್ವೈತವನ್ನು ಪುನರುಜ್ಜೀವನಗೊಳಿಸಿದರು. |
| 2. | ಶಾಸ್ತ್ರಗಳಲ್ಲಿ ಕೃತಪರಿಶ್ರಮವುಳ್ಳವರಾಗಿ ಶ್ರುತ್ಯನುಗ್ರಹೀತತರ್ಕದ ಮೂಲಕ ಮತ್ತು ಅನುಭವದ ಬಲದಿಂದ, ಬಹುವಿಧವಾದ ವಾದ ವಿವಾದಗಳಿಂದ ಪಾಖಂಡಮತೀಯರನ್ನು ಜಯಿಸಿ, ಸನಾತನಧರ್ಮವನ್ನು ಪ್ರತಿಷ್ಠಾಪಿಸಿದರು. | ಶಾಸ್ತ್ರಗಳಲ್ಲಿ ಕೃತಪರಿಶ್ರಮವುಳ್ಳವರಾಗಿ, ಶ್ರುತ್ಯನುಗ್ರಹೀತವಾದ ತರ್ಕ ಮತ್ತು ಅನುಭವಗಳ ಬಲದಿಂದ, ಬಹುವಿಧವಾದ ವಾದಗಳಿಂದ ಪಂಡಿತರನ್ನು ಜಯಿಸಿ, ಶಾಂಕರ ಮತವನ್ನು ಪುನಃ ಸಂಸ್ಥಾಪಿಸಿದರು. |
| 3. | ಬ್ರಹ್ಮತತ್ತ್ವವು ವಿದಿತವಾಗಿದ್ದರೂ ಸಂಪ್ರದಾಯ ಪರಿಪಾಲನ ಬುದ್ಧಿಯಿಂದ ಗುರುಮುಖದಿಂದ ವಿದ್ಯೆಯನ್ನು ತಿಳಿಯುವ ಸಲುವಾಗಿ, ಸವಿನಯ ಮತ್ತು ಉಪಚಾರಗಳಿಂದ ಗೌಡಪಾದ ಶಿಷ್ಯರೂ, ಯೋಗೀಂದ್ರರೂ ಆದ ಶ್ರೀ ಗೋವಿಂದಪಾದರನ್ನು ಆಶ್ರಯಿಸಿದರು. | ಸಂಪ್ರದಾಯ ಪರಿಪಾಲನ ಬುದ್ಧಿಯಿಂದ ಬ್ರಹ್ಮತತ್ತ್ವವನ್ನು ಗುರುಮುಖದಿಂದ ತಿಳಿಯುವ ಸಲುವಾಗಿ, ಶೃಂಗೇರಿಯ ಪೀಠಾಧೀಶ್ವರರ ಶಿಷ್ಯರಾದ ಶ್ರೀ ವಿರೂಪಾಕ್ಷಶಾಸ್ತ್ರಿಗಳಿಂದ ವೇದಾಂತದ ಅಧ್ಯಯನವನ್ನು ಮಾಡಿದರು. |

| | | |
|---|---|---|
| 4. | ಅದ್ವೈತವು ಸಮ್ಯಗ್ದರ್ಶನವೆನಿಸಿದೆ. ಆ ಸಿದ್ಧಾಂತದಲ್ಲಿ ಅಂತರ್ಗತವಾಗಿರುವ ರಹಸ್ಯಾರ್ಥಗಳನ್ನು ತಿಳಿಯದ ಅಸಂಪ್ರದಾಯಿಕರ ಅಭಿಪ್ರಾಯಗಳನ್ನು ಸಮೀಚೀನವಾದ ಉತ್ತರಗಳಿಂದ ಮತ್ತು ಯುಕ್ತಿಯುಕ್ತವಾದ ವಾದಸರಣಿ ಯಿಂದ ಖಂಡಿಸಿದರು. | ಶಂಕರಭಾಷ್ಯಗಳನ್ನು ಕುರಿತು, ಭಾಮತಿ ಮತ್ತು ವಿವರಣವೆಂಬ ಪ್ರಸ್ಥಾನದ್ವಯಗಳಿವೆ. ಅವುಗಳ ಮಧ್ಯೆ ಅಲ್ಲಲ್ಲಿ ಅಭಿಪ್ರಾಯ ಭೇದಗಳು ಕಂಡುಬರುತ್ತವೆ. ಅವೆಲ್ಲವನ್ನೂ ಚೆನ್ನಾಗಿ ವಿಮರ್ಶಿಸಿ, ಶುದ್ಧಶಾಂಕರ ಪ್ರಕ್ರಿಯೆಯನ್ನು ಬೆಳಕಿಗೆ ಹಿಡಿದರು. |
| 5. | ಅದ್ವಿತೀಯ ವಾಗ್ಮಿಗಳೂ, ಅಪೂರ್ವ ಲೇಖಕರೂ ಆಗಿದ್ದರು. | ಅದ್ವಿತೀಯ ವಾಗ್ಮಿಗಳೂ, ಅಪೂರ್ವ ಲೇಖಕರೂ ಆಗಿದ್ದರು. |
| 6. | ಪ್ರಸ್ಥಾನತ್ರಯ ಭಾಷ್ಯಗಳನ್ನು ಪ್ರಸನ್ನ ಗಂಭೀರ ಶೈಲಿಯಿಂದ ವಿವರಿಸಿದರು. | ಪ್ರಸ್ಥಾನತ್ರಯಭಾಷ್ಯಗಳ ಅನುವಾದ ಗಳನ್ನು ಮನೋಹರ ಶೈಲಿಯಿಂದ ರಚಿಸಿದರು. |
| 7. | ಮಧ್ಯಮಾಧಿಕಾರಿಗಳ ಉಪಕಾರಕ್ಕಾಗಿ ಅನೇಕ ವೇದಾಂತಪ್ರಕರಣಗಳನ್ನು ರಚಿಸಿದರು. | ಮಧ್ಯಮಾಧಿಕಾರಿಗಳ ಉಪಕಾರಕ್ಕಾಗಿ ಕರ್ನಾಟಕ ಭಾಷೆಯಲ್ಲಿ ನೂರಕ್ಕಿಂತ ಹೆಚ್ಚು ಗ್ರಂಥಗಳನ್ನು ರಚಿಸಿದರು. |
| 8. | ಭಕ್ತಿಮಾರ್ಗವು ಜ್ಞಾನಮಾರ್ಗದ ಪೂರಕ ರೂಪದಿಂದ ವರ್ತಿಸುತ್ತದೆಂದು ತೋರಿಸಲು, ದೇವಭಾಷೆಯಲ್ಲಿ ಭಾವ ಪೂರ್ಣಸ್ತೋತ್ರಗಳನ್ನು ರಚಿಸಿದರು. | ಭಕ್ತಿಮಾರ್ಗವನ್ನು ಜ್ಞಾನಮಾರ್ಗದ ಪೂರಕರೂಪವಾಗಿ ಸ್ವೀಕರಿಸಿ, ಕರ್ನಾಟಕ ಭಾಷೆಯಲ್ಲಿ ಭಕ್ತಿಗೀತೆಗಳನ್ನು ರಚಿಸಿದರು. |
| 9. | ಕನ್ಯಾಕುಮಾರಿಯಿಂದ ಹಿಮಾಲಯ ದವರೆಗೆ ಕಾಲ್ನಡಿಗೆಯಿಂದ ಸಂಚರಿಸಿ, ಎಲ್ಲ ಕಡೆಯಲ್ಲಿಯೂ ಸನಾತನ ಧರ್ಮವನ್ನು ಉದ್ಧಾರ ಮಾಡಿದರು. | ಭಾರತದಾದ್ಯಂತ ಸಂಚರಿಸಿ, ಎಲ್ಲ ಶಾಂಕರಸಿದ್ಧಾಂತವನ್ನು ಪುನರುದ್ಧಾರ ಮಾಡಿದರು. |

| | |
|---|---|
| 10. ಶೃಂಗೇರಿ, ಪುರಿ, ದ್ವಾರಕೆ ಮತ್ತು ಬದರೀಕ್ಷೇತ್ರಗಳಲ್ಲಿ, ನಾಲ್ಕು ದಿಕ್ಕುಗಳಲ್ಲಿ ಆಮ್ನಾಯ ಪೀಠಗಳನ್ನು ಸ್ಥಾಪಿಸಿದರು. | ಹೊಳೆನರಸೀಪುರ, ಬೆಂಗಳೂರು ಮುಂತಾದ ಕಡೆಗಳಲ್ಲಿ ಅಧ್ಯಾತ್ಮ ಕಾರ್ಯಾಲಯಗಳನ್ನು ಸ್ಥಾಪಿಸಿದರು. |
| 11. ಸನಾತನಧರ್ಮಪ್ರಸಾರಕ್ಕಾಗಿ ಆ ಪೀಠಗಳಲ್ಲಿ ಯೋಗ್ಯಶಿಷ್ಯರನ್ನು ನಿಯೋಜಿಸಿದರು. ಇದರಿಂದ ಸಹಸ್ರಸಂಖ್ಯೆಯಲ್ಲಿ ಮುಮುಕ್ಷುಗಳು ಪ್ರಶಿಷ್ಯರಾದರು. | ಕಾರ್ಯಾಲಯಗಳಲ್ಲಿ ಶಾಂಕರ ಸಿದ್ಧಾಂತವನ್ನು ಪ್ರಚಾರ ಮಾಡಲು ಯೋಗ್ಯರಾದ ಶಿಷ್ಯರನ್ನು ನಿಯೋಜಿಸಿದರು. ಹೀಗೆ ಸಹಸ್ರಸಂಖ್ಯೆಯಲ್ಲಿ ಪ್ರಶಿಷ್ಯರನ್ನು ಸಂಪಾದಿಸಿದರು. |
| 12. ಸಂನ್ಯಾಸವನ್ನು ಸ್ವೀಕರಿಸಿ, ಲೋಕಹಿತವನ್ನು ಸಂಪಾದಿಸಿ, ಆ ಆಶ್ರಮದ ಪ್ರಾಧಾನ್ಯವನ್ನು ಪ್ರತಿಪಾದಿಸಿದರು. | ಸಂನ್ಯಾಸವನ್ನು ಸ್ವೀಕರಿಸಿ, ಆತ್ಮೋದ್ಧಾರ ಮತ್ತು ಲೋಕಹಿತವೆರಡನು ಸಂಪಾದಿಸಿದರು. |
| 13. 'ಚಂಡಾಲನೇ ಆಗಲಿ, ಬ್ರಾಹ್ಮಣನೇ ಆಗಲಿ, ಅವನೇ ಗುರುವು' ಎಂಬ ದೃಢತೆಯಿಂದ, ಬ್ರಾಹ್ಮಣ ಮತ್ತು ಶ್ವಪಚವಿಚಾರವು ಪ್ರತ್ಯಗಾತ್ಮನಲ್ಲಿ ಯುಕ್ತವಲ್ಲವೆಂದು ಹೇಳಿ, ವೇದಾಂತದ ಸಾರ್ವಜನೀನತೆಯನ್ನು ಪ್ರತಿಪಾದಿಸಿದರು. | ತಮ್ಮನ್ನು ಸಮೀಪಿಸಿದ ಎಲ್ಲ ಜಿಜ್ಞಾಸುಗಳಿಗೂ ಜ್ಞಾನವನ್ನು ಬೋಧಿಸಿ, ಆತ್ಮವಿದ್ಯೆಯ ಸಾರ್ವಜನೀನತೆಯನ್ನು ಎಲ್ಲರಿಗೂ ತೋರಿಸಿಕೊಟ್ಟರು. |
| 14. ಅಪರಿಮಿತವಾದ ವೇದಾಂತವಾಙ್ಮಯವನ್ನು ಪ್ರಸನ್ನಗಂಭೀರಶೈಲಿಯಿಂದ ರಚಿಸಿ, ಆ ಕ್ಷೇತ್ರವನ್ನು ಅತ್ಯಂತ ಸಂಪನ್ನವನ್ನಾಗಿ ಮಾಡಿದರು. ಇಂತಹ ಅಪೂರ್ವ ಸಾಧನೆಯನ್ನು | ಅಪರಿಮಿತವಾದ ವೇದಾಂತಗ್ರಂಥಗಳನ್ನು ಮೂರು ಭಾಷೆಗಳಲ್ಲಿ ರಚಿಸಿ, ಆಚಾರ್ಯರ ಕೃತಿಗಳನ್ನು ಅನುವಾದ ಮಾಡಿ, ಶಂಕರರ ಸಿದ್ಧಾಂತದ ಶುದ್ಧರೂಪವನ್ನು |

| | |
|---|---|
| ಇಲ್ಲಿಯವರೆಗೆ ಇನ್ನ್ಯಾರೂ ಮಾಡಿರುವುದಿಲ್ಲ. | ವಿಶ್ವವಿಖ್ಯಾತವನ್ನಾಗಿ ಮಾಡಿದರು. ಇಂತಹ ಸಾಧನೆಯನ್ನು ಈವರೆಗೆ ಯಾರೂ ಮಾಡಿರುವುದಿಲ್ಲ. |

ಮೇಲಿನ ತುಲನಾತ್ಮಕವಾದ ವಿವರಣೆಯಿಂದ ತಿಳಿದುಬರುವುದೇನೆಂದರೆ, ಶಂಕರಭಗವತ್ಪಾದರಂತೆಯೇ ಪೂಜ್ಯಪಾದರೂ ಸರ್ವವಿಧಗಳಿಂದ ಅದ್ವೈತವಾಙ್ಮಯ ವನ್ನು ಪುನರುದ್ಧಾರಮಾಡಿದರು. ತಮ್ಮ ಜೀವನವನ್ನು ಶಾಂಕರಮತೋದ್ಧರಣಕ್ಕಾಗಿ ನ್ಯಾಸ ರೂಪವಾಗಿ ಇಟ್ಟವರು ಅವರು. ಆದ್ದರಿಂದ ಅವರಿಗೆ **'ಅಭಿನವಶಂಕರ'** ರೆಂಬ ಹೆಸರು ಅನ್ವರ್ಥರೂಪವಾಗಿ ಪೂರ್ಣವಾಗಿ ಮತ್ತು ಸತ್ವಯಂತವಾಗಿ ಹೊಂದಿ ಕೊಳ್ಳುತ್ತದೆ.

* * * * *

# ಅಧ್ಯಾಯ - 18

# ಉಪಸಂಹಾರ

**ಶೈಶವೇಽಭ್ಯಸ್ತವಿದ್ಯಾನಾಂ ಯೌವನೇ ವಿಷಯೈಷಿಣಾಮ್ ।**
**ವಾರ್ಧಕೇ ಮುನಿವೃತ್ತೀನಾಂ ಯೋಗೇನಾಂತೇ ತನುತ್ಯಜಾಮ್ ॥**

ಪೂಜ್ಯಪಾದರು ಬಾಲ್ಯದಿಂದಲೇ ವೇದಾಂತನಿಷ್ಠರಾಗಿದ್ದವರು. ಸಂಪ್ರದಾಯವು ಹೇಳುವಂತೆ, ಒಂದು ಭಾಗವನ್ನು ಆಚಾರ್ಯರಿಂದಲೂ, ಒಂದು ಭಾಗವನ್ನು ವೃದ್ಧರ ಸೇವಾದಿಗಳಿಂದಲೂ, ಮೂರನೆಯ ಭಾಗವನ್ನು ಸಹಾಧ್ಯಾಯಿಗಳೂ ಸಮಾನ ಮನಸ್ಕರೂ ಆದ ಗೆಳೆಯರಿಂದಲೂ ಪಡೆದು ವಿದ್ಯಾಭ್ಯಾಸದ ಮೂರುಭಾಗವನ್ನು ಪೂರ್ಣಗೊಳಿಸಿದುದರ ಜೊತೆಗೆ, ತಮ್ಮ ಬುದ್ಧಿಶಕ್ತಿ ಮತ್ತು ವಿಚಾರಕುಶಲತೆಯಿಂದ ನಾಲ್ಕನೆಯ ಭಾಗವನ್ನು ಸೇರಿಸಿ, ಜ್ಞಾನವಾರಿಧಿಯಾದರು. ಸಂಸ್ಕೃತಭಾಷೆಯ ಪಾಂಡಿತ್ಯದ ಮೂಲಕ ಶಾಸ್ತ್ರಗಳ ಸಾರವನ್ನು ಪೂರ್ಣವಾಗಿ ಗ್ರಹಿಸಿ, ಕನ್ನಡದ ತಿಳಿಯಾದ ಬರಹ ಶೈಲಿಯಿಂದ ಪ್ರಾಂತೀಯರನ್ನು ಅದ್ವೈತ ಅಮೃತ ಸರೋವರ ಪಾಯಿಗಳನ್ನಾಗಿ ಮಾಡಿ, ಆಂಗ್ಲಭಾಷೆಯಲ್ಲಿ ವಿದೇಶೀಯರಿಗೂ ಅದರ ರುಚಿಯನ್ನು ತೋರಿಸಿದರು.

ಅಗಾಧವಾದ ಪಾಂಡಿತ್ಯವಿದ್ದರೂ ಅಹಂಕಾರಹೀನರಾದ ಅವರು ಎಂದೂ ತಮ್ಮ ವಿಷಯವನ್ನಾಗಲೀ, ತಮ್ಮ ದುಃಖಗಳನ್ನಾಗಲೀ, ಪರಿಗಣಿಸಲಿಲ್ಲ. ಶಂಕರ ಭಗವತ್ಪಾದರು ಕೇವಲ 32 ವರ್ಷ ಬದುಕಿದ್ದರೆಂದು ಅವರ ವೃತ್ತಾಂತದಿಂದ ತಿಳಿದು ಬರುತ್ತದೆ. ಅಷ್ಟು ಅಲ್ಪಕಾಲದಲ್ಲಿ ಅವರು ಅಪರಿಮಿತವಾದ ಅದ್ವೈತಸಾಹಿತ್ಯವನ್ನು ರಚನೆ ಮಾಡಿದರು. ಈ ವಿಶೇಷ ವಿಭಾಗದಲ್ಲಿ ಹೊಸ ಸುಧಾರಣೆಗಳು ಕಾಲಕ್ಕೆ ತಕ್ಕಂತೆ ಅಪೇಕ್ಷಿತವಾಗಿತ್ತು. ಆ ಕೆಲಸವನ್ನು ಪೂರೈಸಲು ಸಾಕ್ಷಾತ್ ಶಂಕರರೇ ತಮ್ಮ ಮುಂದಿನ ಅವತಾರವಾಗಿ ಇಲ್ಲಿ ಈಗ ಜನ್ಮ ತಾಳಿದರು. ತಾವು ಹಿಂದೆ ರಚಿಸಿದ್ದ ಸಾಹಿತ್ಯದ ಕ್ರಮಾಧ್ಯಯನ, ಪರಿಶೋಧನ, ಜಾಗತಿಕ ಮಟ್ಟದಲ್ಲಿ ಪ್ರಸಾರ, ಜನಸಾಮಾನ್ಯರಲ್ಲಿ ಅಭಿಮಾನಗಳನ್ನು ಮೂಡಿಸುವ ಕಾರ್ಯ ಉಳಿದಿತ್ತು. ಈಗ ಅವರು ಸುಮಾರು 70 ವರ್ಷಗಳ ಕಾಲ ಕೆಲಸಮಾಡಬೇಕಾಯಿತು. ಹಿಂದಿನ ಸಲಕ್ಕಿಂತ ಎರಡು ಪಟ್ಟು ಅಧಿಕ ಕಾಲ ಮತ್ತು ಶ್ರಮದಿಂದ ಹಾಕಿ ಸಾಧನೆಯನ್ನು ಪೂರ್ಣಗೊಳಿಸಿದರು.

ಶ್ರೀಗಳವರು ಸಂಸ್ಕೃತಭಾಷೆಯಲ್ಲಿ ಗ್ರಂಥರಚನೆ, ವಿಮರ್ಶೆಗಳಿಂದ ಆಚಾರ್ಯ ಋಣವನ್ನು, ಕನ್ನಡ ಭಾಷೆಯಲ್ಲಿ ಕೃತಿರಚನೆ ಮತ್ತು ವೇದಾಂತ ಪ್ರಸಾರದಿಂದ ಮಾತೃಭೂಮಿಋಣವನ್ನು ಆಂಗ್ಲಭಾಷಾ ಮಾಧ್ಯಮದಿಂದ ವೇದಾಂತ ಪ್ರಚಾರಮಾಡಿ ವೈಶ್ವಿಕ ಋಣವನ್ನು ತೀರಿಸಿ ಅದ್ವಿತೀಯರೆನಿಸಿದರು. ಅಧ್ಯಾತ್ಮವಿದ್ಯಾಪ್ರಚಾರಕ್ಕಾಗಿ ಯಾವ ಯಾವ ಕ್ರಮಗಳನ್ನು ಅನುಸರಿಸಲು ಸಾಧ್ಯವೋ ಅವೆಲ್ಲವೂ ಶ್ರೀಗಳವರಿಂದ ಅನುಷ್ಠಿಸಲ್ಪಟ್ಟಿದೆ. ವೇದಾಂತಬೋಧಕರಾಗಿ, ಲೇಖಕರಾಗಿ, ಸಂಶೋಧಕರಾಗಿ, ಸಮಾಜ ಸುಧಾರಕರಾಗಿ, ಪತ್ರಿಕಾಸಂಪಾದಕರಾಗಿ, ಕಾರ್ಯಾಲಯಸ್ಥಾಪಕರಾಗಿ, ಸಂನ್ಯಾಸಿಗಳಾಗಿ, ಭಕ್ತಿಮಾರ್ಗಸಂಪ್ರವರ್ತಕರಾಗಿ ಅಷ್ಟವಿಧದಿಂದ ಶ್ರೀಗಳವರ ಅದ್ವೈತಸೇವೆಯನ್ನು ಗುರುತಿಸಬಹುದು. ಈ ದಿಸೆಯಲ್ಲಿ ಅಷ್ಟಮೂರ್ತಿಯಾದ ಶಿವನ ನೆನಪು ನಮ್ಮ ಮನಸ್ಸಿನಲ್ಲಿ ಸುಳಿಯದಿರಲಾರದು. ಹೀಗೆ ವಿಶೇಷವಾದ ಕಾರ್ಯವನ್ನು ಕೈಗೊಂಡು ಸಾಧಿಸಿದರಷ್ಟೇ ಅವರು ವಿಶ್ವವಂದ್ಯರಾಗುವವರು. ಮಹಾಪುರುಷರ ಮಾರ್ಗದರ್ಶನ ಪಡೆದವರೆಲ್ಲ ಧನ್ಯರಾಗುವರು.

ಸ್ತ್ರೀಪುರುಷರು, ಅಜ್ಞಪ್ರಾಜ್ಞರೆಂಬ ಬೇದವನ್ನು ತೊರೆದು, ಅದ್ವೈತದ ಸಮಾನತೆಯ ಸವಿಯು ಜನರನ್ನು ತಲುಪಿದಾಗ ಮಾತ್ರ ಅನ್ವೇಷಕರ ಶ್ರಮವು ಸಾರ್ಥಕವಾಗುತ್ತದೆ. ಸ್ವಾಮಿಪಾದರ ವಿಚಾರಧಾರೆಯಿಂದ ಅಂದಿನ ಸಮಾಜವಷ್ಟೇ ಅಲ್ಲದೆ, ಇಂದಿನ ಜನತೆಗೂ ಪ್ರಸ್ತುತವಾಗಿದ್ದು, ಆಸ್ತಿಕರು ಮತ್ತು ಅನ್ವೇಷಕರ ಮನಸ್ಸನ್ನು ಸೂರೆಗೊಳ್ಳುತ್ತಿರುವುದು ಅವರ ಸಾಧನೆಯ ವಿಶೇಷವು. ಯಾರ ಜೀವನ

ಕ್ರಮವು ಅವರನ್ನು ಸಮೀಪಿಸಿದವರನ್ನೆಲ್ಲ ಭೇದ ಭಾವವಿಲ್ಲದೆ ಪಾವನಗೊಳಿಸು ತ್ತವೆಯೇ, ಅವರೇ ಧನ್ಯರು. ತ್ರಿಲೋಕಗಳಿಗೂ ತಿಲಕಪ್ರಾಯರಾದ ಇಂತಹವರ ಸಂಪರ್ಕವೇ ಉನ್ನತಿಕಾರಕವು. ಇಂತಹ ವಿರಳಾತಿವಿರಳರಾದ ಸತ್ಪುರುಷರಲ್ಲಿ ಗಣನೆಗೆ ಯೋಗ್ಯರಾದವರು ಶ್ರೀಸಚ್ಚಿದಾನಂದಸರಸ್ವತೀಮಹಾಸ್ವಾಮಿಗಳು. ಶಂಕರಾಚಾರ್ಯ ರನ್ನು ಸಾಕ್ಷಾತ್ ಶಿವನ ಅವತಾರವೆಂದು ಹೇಳುತ್ತಾರೆ. ಅವರ ಸಂದೇಶವನ್ನು ಪ್ರಚುರ ಪಡಿಸಲು ಪೂಜ್ಯಪಾದರು ಅಧ್ಯಾಪಕ- ಲೇಖಕ- ಪತ್ರಿಕಾ ಸಂಪಾದಕ- ಸಂಶೋಧಕ ಮುಂತಾಗಿ ಅಷ್ಟಮೂರ್ತಿಯಾಗಿ ಜೀವನಪರ್ಯಂತ ಶ್ರಮಿಸಿದರು. ಇಡೀ ಶಾಂಕರ ವಾಙ್ಮಯವನ್ನು ಕರ್ನಾಟಕ ಭಾಷೆಗೆ ಅನುವಾದಿಸಿದ ಕೀರ್ತಿ ಅವರಿಗೆ ಸಲ್ಲಬೇಕು. ಶುದ್ಧವಾದ ಶಾಂಕರಪ್ರಕ್ರಿಯೆಗೆ ಸ್ವಲ್ಪವಾದರೂ ಮೂಲಾತಿಕ್ರಮವನ್ನು ಅವರು ಸಹಿಸುತ್ತಿರಲಿಲ್ಲ, ಅದಕ್ಕಾಗಿ ಪ್ರಸಿದ್ಧರಾದ ಅದ್ವೈತಾಚಾರ್ಯರ ಗ್ರಂಥಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಲು ಅವರು ಹಿಂಜರಿಯಲಿಲ್ಲ, ಅವರ ನಿಶ್ಚಿತ ವಾದ ಅಭಿಪ್ರಾಯಗಳನ್ನು ಈ ರೀತಿ ಸಂಗ್ರಹಿಸಬಹುದು.

1. ಬ್ರಹ್ಮವು ಪ್ರತ್ಯಸ್ತಮಿತವಿಶೇಷವುಳ್ಳದ್ದೂ, ಮಾತು ಮತ್ತು ಮನಸ್ಸುಗಳಿಗೆ ಅಗೋಚರವೂ ಆದ ಸ್ವಯಂಸಿದ್ಧವಾದ ಪರಮಾರ್ಥತತ್ತ್ವವು ಅದು ಸರ್ವರ ಆತ್ಮವೂ, ಸರ್ವಸಾಕ್ಷಿಯೂ ಆಗಿದೆ. ಉಪನಿಷದೈಕವೇದ್ಯವಾದ ಈ ತತ್ತ್ವವು ಪ್ರಮಾಣಗಳಿಗೆ ಅತೀತವು. ಆದುದರಿಂದ ಬ್ರಹ್ಮವನ್ನು ಅರಿಯಲು ಮಹಾ ವಾಕ್ಯಜಪ, ಲಯಚಿಂತನ, ಪಾತಂಜಲಯೋಗಗಳು, ಅತ್ಯವಶ್ಯಕಗಳಲ್ಲ, ಅಲ್ಲದೆ ಆತ್ಮದ ಅಸ್ತಿತ್ವವನ್ನು ಪ್ರಮಾಣಗಳಿಂದ ಸಾಧಿಸಬೇಕಾಗಿಲ್ಲ,

2. ಶಾಸ್ತ್ರವು ಬ್ರಹ್ಮವನ್ನು ಈ ರೀತಿಯೆಂದು ವಿಷಯರೂಪವಾಗಿ ಪ್ರತಿಪಾದಿಸು ವುದಿಲ್ಲ, ಏಕೆಂದರೆ ಪ್ರತ್ಯಗಾತ್ಮವು ವಿಷಯವೇ ಅಲ್ಲ, ಶಾಸ್ತ್ರಗಳನ್ನು ವಿಧಿರೂಪ ದಿಂದ ಕರ್ಮಕಾಂಡದಲ್ಲಿ ಭಾವಿಸುವಂತೆ ಜ್ಞಾನಕಾಂಡದಲ್ಲಿ ಭಾವಿಸಬೇಕಾಗಿಲ್ಲ, ಬ್ರಹ್ಮದಲ್ಲಿ ವೇದ್ಯವೇದಿತ ವೇದನಾದಿ ಭೇದಗಳಿಲ್ಲ,

3. ಅವಿದ್ಯೆಯ ಇರುವಿಕೆಯನ್ನು ತರ್ಕದಿಂದ ಪ್ರಮಾಣೀಕರಿಸಬೇಕಾಗಿಲ್ಲ, ಅದು ಬ್ರಹ್ಮಾಶ್ರಯ ಅಥವಾ ಜೀವಾಶ್ರಯವೆಂಬ ಚರ್ಚೆಯಾಗಲೀ, ಒಂದೇ ಅಥವಾ ಅನೇಕವೇ ಎಂಬ ಚಿಂತೆಯಾಗಲೀ ಬೇಕಿಲ್ಲ, ಅವೆಲ್ಲವೂ ಆತ್ಮನನ್ನು ಅರಿಯಲು ತಡೆಗಳೆಂದು ತಿಳಿದು, ಸಾಧನೆಗೆ ಮನಸ್ಸು ಕೊಟ್ಟರೆ ಸಾಕು. ವಿದ್ಯಾವಿದ್ಯೆಗಳನ್ನು ಮೀರಿರುವುದೇ ಬ್ರಹ್ಮಸ್ವರೂಪವು.

4. ಶ್ರವಣ-ಮನನ- ನಿದಿಧ್ಯಾಸನಗಳು ಆತ್ಮಜ್ಞಾನಕ್ಕೆ ಪ್ರಮುಖ ಸಾಧನಗಳು. ಅಧಿಕಾರಿ ತಾರತಮ್ಯದಿಂದ ಶ್ರವಣಾವೃತ್ತಿ, ಯುಕ್ತಿಯ ಅವಶ್ಯಕತೆ ವ್ಯತ್ಯಾಸ ವಾಗುತ್ತದೆ. ಇವುಗಳಲ್ಲಿ ಯಾವುದು ಮುಖ್ಯ, ಯಾವುದು ಅಮುಖ್ಯವೆಂಬ ಪ್ರಶ್ನೆ ಬೇಕಿಲ್ಲ.

5. ಆತ್ಮಸ್ವರೂಪವನ್ನು ತಿಳಿಯಲು ಅವಸ್ಥಾತ್ರಯ ಪರೀಕ್ಷಣವೇ, ಉತ್ತಮ ವಿಧಾನ. ಕೇವಲ ಜಾಗ್ರದವಸ್ಥೆಯ ಪರೀಕ್ಷೆಯು ಅಪೂರ್ಣವಾಗುತ್ತದೆ.

6. ಅಧ್ಯಾರೋಪಾಪವಾದವೇ ಪ್ರಮುಖ ಪ್ರಕ್ರಿಯೆ. ಉಳಿದವುಗಳೆಲ್ಲ- ಅದರಲ್ಲಿಯೇ ಅಂತರ್ಗತವಾಗುತ್ತವೆ.

7. ಮುಖ್ಯವಾಗಿ ಅವಿವೇಕವೇ ಬಂಧ. ವಿವೇಕವೇ ಮೋಕ್ಷ.

ಹೀಗೆ ಅನೇಕ ಪ್ರಮುಖ ವೇದಾಂತ ವಿಷಯಗಳ ಮೇಲೆ ಬೆಳಕು ಚೆಲ್ಲಲು ಶ್ರೀಗಳವರು ನಿರಂತರವಾಗಿ ಅಧ್ಯಯನ, ಸಂಶೋಧನೆಗಳನ್ನು ಕೈಗೊಂಡರು. ತಾವು ನಿಶ್ಚಿತವಾಗಿ ನಂಬಿದ ಮತ್ತು ಅನುಭವಕ್ಕೆ ತಂದುಕೊಂಡ ಅಂಶಗಳನ್ನು ಉಳಿದವರಿಗೂ ತಿಳಿಸಿಕೊಟ್ಟು, ಅದ್ವೈತಾಮೃತವನ್ನು ಎಲ್ಲರಿಗೂ ಹಂಚಿದರು. ಪೂಜ್ಯಪಾದರ ಸಿಂಧು ಸ್ವರೂಪವಾದ ಯೋಗದಾನದ ಪರಿಚಯವನ್ನು ಪಡೆಯಬೇಕಾದರೆ ಅವರ ಕೃತಿಗಳ ಆಳವಾದ ಅಧ್ಯಯನ ಮತ್ತು ಅಧ್ಯಾಪನ ನಡೆಯಬೇಕು. ಅವರ ಪರಿಶ್ರಮವು ಆಗ ಸಾರ್ಥಕವಾಗಿ, ಅದ್ವೈತ ಜ್ಯೋತಿ ನಿರಂತರವಾಗಿ ಬೆಳಗುವಂತಾಗುತ್ತದೆ.

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಶ್ರೀಗುರುಭ್ಯೋ ನಮಃ**

* * * * *

# ಅಧ್ಯಾಯ - 1

## ಪೀಠಿಕೆ

**ಶಾಂತಾ ಮಹಾಂತೋ ನಿವಸನ್ತಿ ಸನ್ತೋ**
**ವಸಂತವಲ್ಲೋಕಹಿತಂ ಚರನ್ತಃ ।**
**ತೀರ್ಣಾಃ ಸ್ವಯಂ ಭೀಮಭವಾರ್ಣವಂ**
**ಜನಾನಹೇತುನಾನ್ಯಾನಪಿ ತಾರಯನ್ತಃ ॥**

ಶಾಂತರೂ ಮಹಾತ್ಮರೂ ಆದ ಸತ್ಪುರುಷರು ವಸಂತಋತುವಿನಂತೆ ಲೋಕ ಹಿತವನ್ನು ಉಂಟುಮಾಡುತ್ತಾ ವಾಸಿಸುತ್ತಾರೆ. ಅವರು ತಾವೂ ಈ ಭಯಂಕರನಾದ ಭವ ಸಮುದ್ರವನ್ನು ದಾಟುವುದಲ್ಲದೆ, ಯಾವುದೇ ಕಾರಣವನ್ನೂ ಬಯಸದೆ ಉಳಿದ ಜನರನ್ನೂ ಕೂಡ ದಾಟಿಸುತ್ತಾರೆ. (ವಿ.ಚೂ. 39)

ಈ ಜಗತ್ತಿನಲ್ಲಿ ದಯಾಳುಗಳಾದ ಸತ್ಪುರುಷರು ತಮ್ಮ ವಿಶಿಷ್ಟವಾದ ಯೋಗ ದಾನದಿಂದ ಅತಿಶಯವಾದ ಲೋಕಹಿತವನ್ನು ಸಾಧಿಸಿರುತ್ತಾರೆ. ಅಂತಹ ಸತ್ಪುರುಷರ ಸಮಾಗಮವು ವಿಶೇಷವಾದ ಪುಣ್ಯದಿಂದ ಮಾತ್ರ ಪ್ರಾಪ್ತವಾಗತಕ್ಕದ್ದು. ಈ ರೀತಿ ತಮ್ಮ ಇಡೀಜೀವನವನ್ನು ಲೋಕಹಿತಕ್ಕಾಗಿ ಸಮರ್ಪಿಸಿದ ಕೆಲವೇ ಕೆಲವು ಮಹಾತ್ಮರುಗಳಲ್ಲಿ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳು ಅಗ್ರಗಣ್ಯರು. ಅವರು ತಮ್ಮ ವಿಶೇಷ ಬುದ್ಧಿಶಕ್ತಿಯಿಂದ, ವಿಚಾರ ವಿಮರ್ಶಕರ ಸಮಾಗಮದಿಂದ ಮತ್ತು ಸಾಧನೆಯ ಉತ್ಕರ್ಷದಿಂದ ಅದ್ವೈತಸಾರಸ್ವತಲೋಕವನ್ನು ಅತ್ಯಂತವಾಗಿ ಶ್ರೀಮಂತ ಗೊಳಿಸಿದರು. ಅವರ ಇಡೀ ಜೀವನವೇ ಅದ್ವೈತಕ್ಷೇತ್ರಕ್ಕೆ ವೈಶಿಷ್ಟ್ಯಪೂರ್ಣವಾದ ಯೋಗ ದಾನವೆಂಬುದರಲ್ಲಿ ಸಂಶಯವಿಲ್ಲ. ಇಂತಹ ಸಾಧಕರು ವಿರಳಾತಿವಿರಳರೆಂಬುದು ಸತ್ಯ ಸಂಗತಿ. ಅವರಲ್ಲಿ ಭಾರತೀಯ ಸಂಸ್ಕೃತಿಯ ಮೂಲಭೂತವಾದ ಪ್ರೇರಣೆಯಿಂದ ಬ್ರಹ್ಮವಿದ್ಯೆಯು ಪೂರ್ಣರೂಪದಲ್ಲಿ ಆವಿರ್ಭೂತವಾಗಿತ್ತು. ದೃಢನಿರ್ಧಾರ, ಸತತ ಪರಿಶ್ರಮ, ಬುದ್ಧಿಶಕ್ತಿ ಇವು ಒಂದೇ ಕಡೆಯಲ್ಲಿ ಕೂಡುವುದು ದುರ್ಲಭ. ಅಂತಹ ಪರಿಕರಗಳಿಂದ ಕೂಡಿದ ಅವರು ಅಧ್ಯಾತ್ಮಕ್ಷೇತ್ರದಲ್ಲಿ ಧ್ರುವತಾರೆಯೆನಿಸಿದರು. ಅವರದು ಕೇವಲ ಪರೋಪದೇಶಪಾಂಡಿತ್ಯವಾಗಿರಲಿಲ್ಲ, ತಾವು ಸಾಧಿಸಿದ ಮತ್ತು ಅನುಭವಿಸಿದ ಆನಂದವನ್ನು ಅವರು ಉಳಿದವರಿಗೂ ಹಂಚಲು ಪ್ರಯತ್ನಶೀಲರಾದರು ಮತ್ತು ಜಯಶೀಲರಾದರು.